ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಅಕ್ಟೋಬರ್ 4 ಶುಕ್ರವಾರ 2024 | ₹4

ಸಂಪುಟ: 45 | ಸಂಚಿಕೆ: 169 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

REMEMBRANCE



Dr. K.B. SUBBAIAH
M.B.B.S., M.R.C.P. (Lond.)
Died on 4.10.1988

To live in hearts we leave behind is not to die

Wife - Swajie Subbaiah
Son - Dr. Gautham Subbaiah
Brother - K.B. Ganapathy
& members of the family

ಮೈಸೂರು ಮಿತ್ರ

ದಸರಾ ಕುಸ್ತಿ ಪಂದ್ಯಾವಳಿ ಆರಂಭ

ಪ್ರಶಸ್ತಿಗಾಗಿ ರಣ-ರೋಚಕ ಸೆಣಸಾಟ



ದಸರಾ ಕುಸ್ತಿ ಪಂದ್ಯಾವಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ಮೈಸೂರು, ಅ.3(ಎಂಕೆ)– ವಿಶ್ವವಿಖ್ಯಾತ ಮೈಸೂರು ದಸರಾ ಕುಸ್ತಿ ಪಂದ್ಯಾವಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಚಾಲನೆ ನೀಡಿದರು.

ನಗರದ ದೊಡ್ಡಕೆರೆ ಮೈದಾನದ ಆವರಣದ ಶ್ರೀ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ದಾವಣಗೆರೆ ಕ್ರೀಡಾನಿಲಯ ಪೈ.ರಾಘವೇಂದ್ರ ಮತ್ತು ಮೈಸೂರಿನ ಮಹದೇವಪುರ ಪೈ.ವಿಕಾಶ್‌ಗೆ ಭುಜ ತಟ್ಟಿ ಪ್ರೋತ್ಸಾಹಿಸುವ ಮೂಲಕ ಅ.9ರವರೆಗೆ ನಡೆಯುವ ಕುಸ್ತಿ ಪಂದ್ಯಾವಳಿಗೆ ವಿದ್ಯುಕ್ತ ಚಾಲನೆ ನೀಡಿದರು.

ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಗ್ಯಾರಂಟಿ ಯೋಜನೆ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ಕುಸ್ತಿ ಸಂಘದ ಅಧ್ಯಕ್ಷ ಗುಣರಂಜನ್ ಶೆಟ್ಟಿ, ದಸರಾ ಕುಸ್ತಿ ಉಪ ಸಮಿತಿ ಉಪ ವಿಶೇಷಾಧಿಕಾರಿ ಎಲ್. ನಾಗೇಶ್, ಕಾರ್ಯಾಧ್ಯಕ್ಷ ಡಾ.ಎನ್.ಸಿ. ವೆಂಕಟರಾಜು, ಕಾರ್ಯದರ್ಶಿ ಬಿ.ಎಸ್. ರಘು ಮತ್ತಿತರರು ಉಪಸ್ಥಿತರಿದ್ದರು.

ಮೊದಲ ದಿನವೇ ರೋಚಕತೆ: ಕುಸ್ತಿ ಅಖಾಡದಲ್ಲಿ ಮೊದಲ ದಿನವೇ ರೋಚಕತೆ ಸೃಷ್ಟಿಯಾಯಿತು. ಎದುರಾಳಿಗಳ ತಂತ್ರಕ್ಕೆ ಪ್ರತಿ ತಂತ್ರ ಹೂಡಿದ ಪೈಲ್ವಾನರು ಗೆದ್ದು ಬೀಗಿದರು. ಒಂದು ಗಂಟೆಗಳ ಕಾಲ ನಡೆದ ಮೊದಲ ಪಂದ್ಯದಲ್ಲಿ ದಾವಣಗೆರೆ ಕ್ರೀಡಾನಿಲಯ ಪೈ.ರಾಘವೇಂದ್ರ ಮತ್ತು ಮೈಸೂರಿನ ಮಹದೇವಪುರ ಪೈ.ವಿಕಾಶ್ ರಣರೋಚಕ ಗೆಲುವು ಪಡೆದರು.

ಇದರ ನಡುವೆ ಬಾಲಕೀಯರ ವಿಭಾಗದಲ್ಲಿ ಮಳವಳ್ಳಿ ಪೈ.ಎಂ.ಕೆ.ಮೋನಿಕಾ ವಿರುದ್ಧ ಗಾಣಿಗನಕೊಪ್ಪಲು ಪೈ.ನಂದಿನಿ, ಮಂಡ್ಯ ಪೈ.ಸುಹಾನ ಬಾನು ವಿರುದ್ಧ ರಮ್ಮನಹಳ್ಳಿ ಪೈ.ಯಶಸ್ವಿನಿ ಗೆಲುವು ಸಾಧಿಸಿದರೆ, ಮತ್ತೊಂದು ಒಂದು ಗಂಟೆಗಳ ಕಾಲದ ಹಣಾಹಣಿಯಲ್ಲಿ ದಾವಣಗೆರೆ ಕ್ರೀಡಾ ನಿಲಯ ಪೈಲ್ವಾನ್ ಬಸವರಾಜ್ ಪಾಟೀಲ್ ವಿರುದ್ಧ ಬೆಳಗಾಂ ಪೈಲ್ವಾನ್ ಪ್ರಕಾಶ್ ಪಾಟೀಲ್ ಇಂಗಳಿಗಿ 19ನೇ ನಿಮಿಷದಲ್ಲಿ ಚಿತ್ ಮಡುವ ಮೂಲಕ ಗೆಲುವು ಪಡೆದರು.

ಹಾಗೆಯೇ ಪೂ.ಸೂರಿ ವಿರುದ್ಧ ಪೈಸೈಯದ್ ಹುಸೇನ್, ಪೈ.ದ್ಯಾವನಗೌಡ ಎಸ್.ಇನಾಮತಿ ವಿರುದ್ಧ ಪೈ.ಎಂ.ಪ್ರದೀಪ್, ಪೈ.ಕಿರಣ್‌ಗೌಡ ವಿರುದ್ಧ ಪೈ.ಬೈರಪ್ಪನಾಯಕ, ಪೈ.ಆರ್.ಯುವರಾಜ್ ವಿರುದ್ಧ ಪೈ.ಮೊಹಮದ್ ಸಾಕೀಬ್ ಬೇಗ್ ಜಯಗಳಿಸಿದರೆ ಉಳಿದ ಬಹುತೇಕ ಕುಸ್ತಿಗಳು ಸಮಬಲದಲ್ಲಿ ಅಂತ್ಯಕಂಡವು.

ಶಿಳ್ಳೆ-ಚಪ್ಪಾಳೆ ಪ್ರೋತ್ಸಾಹ: ಮೊದಲ ದಿನ ನಡೆದ 35 ಜೊತೆ ನಾಡ ಕುಸ್ತಿ ಪಂದ್ಯಗಳನ್ನು ಕಣ್ತುಂಬಿಕೊಂಡ ಕುಸ್ತಿ ಅಭಿಮಾನಿಗಳು ಶಿಳ್ಳೆ ಹೊಡೆದು ಚಪ್ಪಾಳೆ ತಟ್ಟಿ ಕುಸ್ತಿ ಪಟುಗಳನ್ನು ಪ್ರೋತ್ಸಾಹಿಸಿದರು. ಪ್ರತೀ ಪಂದ್ಯಕ್ಕೂ ಬೇರೆ ತೀರ್ಪುಗಾರರನ್ನು ನಿಯೋಜಿಸುವ ಮೂಲಕ ಯಾವುದೇ ಗೊಂದಲಗಳು ಉಂಟಾಗದಂತೆ ಎಚ್ಚರಿಕೆ ವಹಿಸಲಾಗಿತ್ತು.

ಟೈಟಲ್ ಪ್ರಶಸ್ತಿ ವಿಜೇತರಿಗೆ ನಗದು ಪುರಸ್ಕಾರ...

ದಸರಾ ಕಂಠೀರವ: 86 ಕೆಜಿ ಮೇಲ್ಪಟ್ಟ ವಿಭಾಗದ 'ದಸರಾ ಕಂಠೀರವ' ಪ್ರಶಸ್ತಿ ವಿಜೇತರಿಗೆ ಪ್ರಥಮ ಬಹುಮಾನ ಒಂದು ಕಾಲು ಕೆಜಿ ಬೆಳ್ಳಿ ಗದೆ ಮತ್ತು 15 ಸಾವಿರ ರೂ., ದ್ವಿತೀಯ ಬಹುಮಾನ 12,500 ರೂ., ಮೊದಲ ತೃತೀಯ ಬಹುಮಾನ 10,500 ರೂ., ಎರಡನೇ ತೃತೀಯ ಬಹುಮಾನ 10,000 ರೂ. ನೀಡಲಾಗುವುದು.

ದಸರಾ ಕೇಸರಿ: 74 ರಿಂದ 86 ಕೆಜಿ ವಿಭಾಗದ 'ದಸರಾ ಕೇಸರಿ' ಪ್ರಶಸ್ತಿ ವಿಜೇತರಿಗೆ ಪ್ರಥಮ ಬಹುಮಾನ ಒಂದು ಕೆಜಿ ಬೆಳ್ಳಿ ಗದೆ ಮತ್ತು 12,500 ರೂ., ದ್ವಿತೀಯ ಬಹುಮಾನ 10,500 ರೂ., ಮೊದಲ ತೃತೀಯ ಬಹುಮಾನ 8000 ರೂ. ಹಾಗೂ ಎರಡನೇ ತೃತೀಯ ಬಹುಮಾನ 7,500 ರೂ. ನೀಡಲಾಗುವುದು.

ದಸರಾ ಕಿಶೋರ: 57 ರಿಂದ 65 ಕೆಜಿ ವಿಭಾಗದ 'ದಸರಾ ಕಿಶೋರ' ಪ್ರಶಸ್ತಿ ವಿಜೇತರಿಗೆ ಪ್ರಥಮ ಬಹುಮಾನ ಅರ್ಧ ಕೆಜಿ ಬೆಳ್ಳಿ ಗದೆ ಮತ್ತು 10 ಸಾವಿರ ರೂ., ದ್ವಿತೀಯ ಬಹುಮಾನ 8,000 ರೂ., ಮೊದಲ ತೃತೀಯ ಬಹುಮಾನ 5,500 ರೂ. ಹಾಗೂ ಎರಡನೇ ತೃತೀಯ ಬಹುಮಾನ 5,000 ರೂ. ನೀಡಲಾಗುವುದು.

ದಸರಾ ಕಿಶೋರಿ: 57 ರಿಂದ 62 ಕೆಜಿ ವಿಭಾಗದ 'ದಸರಾ ಕಿಶೋರಿ' ಪ್ರಶಸ್ತಿ ವಿಜೇತರಿಗೆ ಪ್ರಥಮ ಬಹುಮಾನ ಅರ್ಧ ಕೆಜಿ ಬೆಳ್ಳಿ ಗದೆ ಮತ್ತು 10 ಸಾವಿರ ರೂ., ದ್ವಿತೀಯ ಬಹುಮಾನ 8,000 ರೂ., ಮೊದಲ ತೃತೀಯ ಬಹುಮಾನ 5,500 ರೂ. ಹಾಗೂ ಎರಡನೇ ತೃತೀಯ ಬಹುಮಾನ 5,000 ರೂ. ನೀಡಲಾಗುವುದು.

ದಸರಾ ಕುಮಾರ್: 74 ಕೆಜಿ ಮೇಲ್ಪಟ್ಟ ಮೈಸೂರು ವಿಭಾಗ ಮಟ್ಟದ ಮೈಸೂರು 'ದಸರಾ ಕುಮಾರ್' ಪ್ರಶಸ್ತಿ ವಿಜೇತರಿಗೆ ಪ್ರಥಮ ಬಹುಮಾನ ಮುಕ್ಕಾಲು ಕೆಜಿ ಬೆಳ್ಳಿ ಗದೆ ಮತ್ತು 10 ಸಾವಿರ ರೂ., ದ್ವಿತೀಯ ಬಹುಮಾನ 8,000 ರೂ., ಮೊದಲ ತೃತೀಯ ಬಹುಮಾನ 5,500 ರೂ. ಹಾಗೂ ಎರಡನೇ ತೃತೀಯ ಬಹುಮಾನ 5,000 ರೂ. ನೀಡಲಾಗುವುದು. ಹಾಗೆಯೇ 17 ವರ್ಷ ವಯೋಮಿತಿಯೊಳಗಿನ ಬಾಲಕ ಮತ್ತು ಬಾಲಕಿಯರ ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿಯ ವಿವಿಧ ವಿಭಾಗಗಳಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನ 3 ಸಾವಿರ ರೂ., ದ್ವಿತೀಯ ಬಹುಮಾನ 2 ರೂ., ತೃತೀಯ ಬಹುಮಾನ ಇಬ್ಬರಿಗೆ ತಲಾ 1 ಸಾವಿರ ರೂ. ನೀಡಲಾಗುವುದು.

ಶಾಸಕ ತನ್ವೀರ್ ಸೇಠ್‌ರಿಗೆ ಹುಟ್ಟುಹಬ್ಬದ ಶುಭಾಶಯ



ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಶಾಸಕ ತನ್ವೀರ್ ಸೇಠ್ ಹುಟ್ಟುಹಬ್ಬದ ಅಂಗವಾಗಿ ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಯುವ ಮುಖಂಡರಾದ ಹೊಯ್ಸಳ, ರೋಹಿತ್ ಸಿಂಗ್, ನೌಫಿಲ್ ಅಹಮದ್, ಶಶಾಂಕ್, ಕುಸುರು, ಇಕ್ರಾಂ, ಸಕ್ಲೈನ್, ಮಜೀದ್ ಹಾಗೂ ಇನ್ನಿತರರು ಅಭಿನಂದಿಸಿ, ಶುಭ ಕೋರಿದರು.

ನಿಧನ

ವರದರಾಜ ನಾಯ್ಡು



ಮೈಸೂರು, ಅ.3–ಮೈಸೂರು ವಿದ್ಯಾರಣ್ಯಪುರಂ ನಿವಾಸಿ ಹಾಗೂ 2ನೇ ಮಹಾಯುದ್ಧದಲ್ಲಿ (1943–47) ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ್ದ ವರದರಾಜ ನಾಯ್ಡು (98) ಅವರು ಇಂದು ನಿಧನರಾದರು. 1952ರಲ್ಲಿ ವರದರಾಜ ನಾಯ್ಡು ಅವರನ್ನು ವೆಲ್ಲಿಂಗ್ಟನ್‌ನಿಂದ ಮೆಲೋಡಿಯೊಂದಿಗೆ ಗೌರವ ಸಲ್ಲಿಸಲಾಗಿತ್ತು. ಸೇನೆಯಿಂದ ನಿವೃತ್ತರಾದ ನಂತರ ಭಾರತೀಯ ರೈಲ್ವೆಯಲ್ಲಿ ಸೇರ್ಪಡೆಯಾಗಿ ಮೂರು ದಶಕ ಸೇವೆ ಸಲ್ಲಿಸಿದ್ದರು. ಇಬ್ಬರು ಪುತ್ರರು, ಓರ್ವ ಪುತ್ರಿ, ಐವರು ಮೊಮ್ಮಕ್ಕಳು, ಐವರು ಮರಿಮಕ್ಕಳು, ಅಪಾರ ಬಂದು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಎಸ್.ಪ್ರೇಮಾ



ಮೈಸೂರಿನ ಚಾಮುಂಡಿವಿಹಾರ ಬಡಾವಣೆಯ ನಿವಾಸಿ ಹೆಚ್.ಎಸ್.ಸದಾಶಿವಯ್ಯ ಅವರ ಪತ್ನಿ ಶ್ರೀಮತಿ ಎಸ್.ಪ್ರೇಮಾ (78) ಬುಧವಾರ ನಿಧನರಾದರು. ಮೃತರು ಪತಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿಕ್ಕೈದ ಹೆಗಡೆ



ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಹುಣ್ಣನದೊಡ್ಡಿ ಗ್ರಾಮದ ನಿವಾಸಿ ಚಿಕ್ಕೈದ ಹೆಗಡೆ(80) ಬುಧವಾರ ನಿಧನರಾದರು. ಮೃತರು ಪತ್ನಿ ಶ್ರೀಮತಿ ಮಲವಮ್ಮ, ಮೂವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಗುರುವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರ್ಕಾರದಿಂದ ಕ್ರೀಡೆಗೆ ಎಲ್ಲಾ ರೀತಿ ಸಹಕಾರ

ದಸರಾ ಸಿಎಂ ಕಪ್ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಸಿಎಂ ಸಿದ್ದರಾಮಯ್ಯ ಭರವಸೆ



ದಸರಾ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು.

ಮೈಸೂರು,ಅ.3(ಪಿಎಂ)– ಕ್ರೀಡೆಗೆ ಎಲ್ಲಾ ರೀತಿಯ ಸಹಕಾರ ಮತ್ತು ಆರ್ಥಿಕ ಸಹಾಯವನ್ನು ಕರ್ನಾಟಕ ಸರ್ಕಾರ ನೀಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ದಸರಾ ಕ್ರೀಡಾ ಉಪಸಮಿತಿ ಜಂಟಿ ಆಶ್ರಯದಲ್ಲಿ ಆಯೋಜಿಸಿರುವ ದಸರಾ ಸಿಎಂ ಕಪ್ ಕ್ರೀಡಾಕೂಟಕ್ಕೆ ಮೈಸೂರಿನ ಚಾಮುಂಡಿ ವಿಹಾರ ಒಳ ಕ್ರೀಡಾಂಗಣದಲ್ಲಿ ಗುರುವಾರ ಚಾಲನೆ ನೀಡಿ ಮಾತನಾಡಿದ ಅವರು, ಕ್ರೀಡಾ ಇಲಾಖೆ ಜವಾಬ್ದಾರಿ ನನ್ನ ಬಳಿಯೇ ಇದೆ. ಕ್ರೀಡಾಕೂಟದಲ್ಲಿ ಭಾಗವಹಿಸಲು ರಾಜ್ಯದ ಅನೇಕ ಭಾಗಗಳಿಂದ ಬಂದಿದ್ದೀರಿ. ಭಾಗವಹಿಸಿದ ಎಲ್ಲರೂ ಪ್ರಶಸ್ತಿ–ಪದಕ ಗೆಲ್ಲಲು ಸಾಧ್ಯವಿಲ್ಲ. ಆದರೆ ಪಾಲ್ಗೊಳ್ಳುವುದು ಹಾಗು ಗೆಲುವಿಗಾಗಿ ಪ್ರಯತ್ನಿಸುವುದು ಮುಖ್ಯ ಎಂದು ಹೇಳಿದರು.

ದಸರಾ ವಿಶ್ವ ವಿಖ್ಯಾತವಾಗಿದ್ದು, ದೇಶ ವಿದೇಶಗಳಿಂದ ಲಕ್ಷಾಂತರ ಜನ ಈ ಉತ್ಸವಕ್ಕಾಗಿ ಬರುತ್ತಾರೆ. ದಸರಾ ಪ್ರಯುಕ್ತ ಪ್ರತಿವರ್ಷ ಕ್ರೀಡಾಕೂಟ ಆಯೋಜಿಸುತ್ತ ಬರಲಾಗುತ್ತಿದೆ. ನೀವೆಲ್ಲಾ ಇಂದು ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿದ್ದು, ಇದಕ್ಕೆ ಶ್ರಮ ಕೂಡ ಹಾಕಿದ್ದೀರಿ. ಶ್ರಮ ಇಲ್ಲವಾದರೆ ಕ್ರೀಡೆಯಲ್ಲಿ ಗೆಲುವು ಸಾಧಿಸುವುದು ಸಾಧ್ಯವಿಲ್ಲ. ಶ್ರಮ, ಏಕಾಗ್ರತೆ, ಗುರಿ ಹಾಗೂ ತರಬೇತಿಯು ಕ್ರೀಡೆಯಲ್ಲಿ ಗೆಲವು ಸಾಧಿಸಲು ಅತ್ಯಂತ ಅಗತ್ಯ ಎಂದರು. ಕ್ರೀಡೆಯಲ್ಲಿ ಭಾಗವಹಿಸುವ ಜೊತೆಗೆ ಓದಿನ ಕಡೆಯೂ ಗಮನ ನೀಡಬೇಕು. ಏಕೆಂದರೆ ವಿದ್ಯಾವಂತರಾಗುವುದೂ ಅಷ್ಟೇ ಮುಖ್ಯ. ಹರ್ಮನ್‌ಪ್ರೀತ್ ಸಿಂಗ್ ಅವರು ಭಾರತದ ಹಾಕಿ ತಂಡ ನಾಯಕರಾಗಿದ್ದು, ಇವರು ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ 200ಕ್ಕೂ ಹೆಚ್ಚು ಗೋಲ್‌ಗಳನ್ನು ಬಾರಿಸಿದ್ದಾರೆ. ಇವರ ನೇತೃತ್ವದ ಭಾರತದ ಹಾಕಿ ತಂಡವು ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದಿದೆ. ಮುಂದಿನ ಒಲಿಂಪಿಕ್ಸ್‌ನಲ್ಲಿ ಅವರ ನಾಯಕತ್ವದಲ್ಲಿ ದೇಶಕ್ಕೆ ಚಿನ್ನದ ಪದಕ ತರಲಿ ಎಂದು ಹಾರೈಸುವುದಾಗಿ ತಿಳಿಸಿದರು.

ಹರ್ಮನ್ ಪ್ರೀತ್ ಸಿಂಗ್ ಅವರಿಂದ ನೀವು ಕೂಡ ಪ್ರೇರಣೆ ಪಡೆಯಲಿ ಎಂದು ಅವರನ್ನು ಈ ಸಮಾರಂಭಕ್ಕೆ ಆಹ್ವಾನಿಸಲಾಗಿದೆ. ಒಲಿಂಪಿಕ್ಸ್ ಪ್ರತಿನಿಧಿಸುವುದು ಸಾಮಾನ್ಯ ಸಂಗತಿಯಲ್ಲ. ಅದಕ್ಕೆ ಪರಿಶ್ರಮ ಬೇಕು. ಅವರು ಇಂದು ರಾಷ್ಟ್ರದಲ್ಲಿ ಮೊದಲ ಸ್ಥಾನದಲ್ಲಿ ಇರುವ ಹಾಕಿ ಪಟು. ನೀವು ಕೂಡ ಅವರ ಎತ್ತರಕ್ಕೆ ಬೆಳೆಯುವ ಪ್ರಯತ್ನ ಮಾಡಬೇಕು ಎಂದು ಕ್ರೀಡಾಕೂಟದಲ್ಲಿ ಭಾಗವಹಿಸಿರುವ ಪಟುಗಳಿಗೆ ಸಲಹೆ ನೀಡಿದರು. ಇದಕ್ಕೂ ಮುನ್ನ ಮಾತನಾಡಿದ ವಿಧಾನ ಪರಿಷತ್ ಸದಸ್ಯ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳೂ ಆದ ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಡಾ.ಕೆ.ಗೋವಿಂದರಾಜು, ಮೈಸೂರು ಮಹಾರಾಜರ ಕಾಲದಲ್ಲಿ ದಸರಾ ಕ್ರೀಡಾಕೂಟ ಪ್ರಾರಂಭವಾಯಿತು. ಅದೇ ಪರಂಪರೆ ನಡೆದುಕೊಂಡು ಬಂದಿದೆ. ನಾನು 1974ರಿಂದ 89ರವರೆಗೆ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದೆ. ಅಂದಿನ ದಸರಾ ಕ್ರೀಡಾ ಕೂಟ ಬಹಳ ವಿಭಿನ್ನವಾಗಿತ್ತು ಎಂದರು.

ರಾಜ್ಯ ಸರ್ಕಾರ ಕ್ರೀಡಾಪಟುಗಳಿಗೆ ಉದ್ಯೋಗ ಮೀಸಲಾತಿ ಕಲ್ಪಿಸುವ ಮೂಲಕ ಅವರು ಉದ್ಯೋಗಕ್ಕಾಗಿ ಬೇರೆ ರಾಜ್ಯಗಳಿಗೆ ವಲಸೆ ಹೋಗುವುದನ್ನು ತಪ್ಪಿಸಿದೆ. ಇತ್ತೀಚೆಗೆ 118 ಮಂದಿಗೆ ಪೊಲೀಸ್ ಇಲಾಖೆಯಲ್ಲಿ ನೇರ ನೇಮಕಾತಿಯಡಿ ಉದ್ಯೋಗ ಸಿಕ್ಕಿದೆ. ಜೊತೆಗೆ ಒಲಿಂಪಿಕ್ಸ್, ಏಷ್ಯನ್ ಗೇಮ್, ಕಾಮನ್ ವೆಲ್ತ್ ಗೇಮ್ಸ್‌ನಲ್ಲಿ ಪದಕ ವಿಜೇತರಾಗಿದ್ದವರಿಗೆ ಮುಖ್ಯಮಂತ್ರಿಗಳು ಅರ್ಹತಾ ಪತ್ರ ವಿತರಣೆ ಮಾಡಿದ್ದು, ಉದ್ಯೋಗ ಖಾತ್ರಿ ನೀಡಿದ್ದಾರೆ ಎಂದರು. ಎಲ್ಲಾ ಕ್ರೀಡಾ ಹಾಸ್ಟೆಲ್‌ಗಳನ್ನು ಉನ್ನತೀಕರಿಸಲು ಆದೇಶ ಸಹ ಮಾಡಿದ್ದಾರೆ. ಇದನ್ನು ಕ್ರೀಡಾ ಇಲಾಖೆ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು. ಆ ಮೂಲಕ ಹಾಸ್ಟೆಲ್‌ಗಳ ಗುಣಮಟ್ಟ ಹೆಚ್ಚಿಸಬೇಕು. ಈ ಹಾಸ್ಟೆಲ್‌ಗಳಿಂದಲೇ ಕ್ರೀಡಾ ಸಾಧಕರು ಬರಲಿದ್ದು, ಅವರಿಗೆ ಸರಿಯಾದ ಸೌಲಭ್ಯ ಕಲ್ಪಿಸಿ ಉತ್ತೇಜನ ನೀಡಬೇಕಿದೆ. ಕ್ರೀಡಾ ಇಲಾಖೆ ಅಧಿಕಾರಿಗಳು ಈ ನಿಟ್ಟಿನಲ್ಲಿ ಗಮನ ನೀಡಬೇಕು ಎಂದು ಸೂಚಿಸಿದರು.

ಅಲ್ಲದೆ, ಕ್ರೀಡಾ ಇಲಾಖೆಗೆ 173 ತರಬೇತುದಾರರನ್ನು ನೇಮಕ ಮಾಡಲು ಮುಖ್ಯಮಂತ್ರಿಗಳು ಅನುಮೋದನೆ ಕೊಟ್ಟಿದ್ದಾರೆ. 28 ಅಧಿಕಾರಿಗಳನ್ನು ನೇರ ನೇಮಕಾತಿ ಮಾಡಲು ಆರ್ಥಿಕ ಇಲಾಖೆಯ ಅನುಮೋದನೆ ಸಹ ಕೊಡಿಸಿದ್ದಾರೆ. ಸೈಕ್ಲಿಂಗ್ ವೆಲೋಡ್ರೋಮ್ ನಿರ್ಮಾಣಕ್ಕಾಗಿ ಕಳೆದ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು 10 ಕೋಟಿ ರೂ. ನಿಗದಿಪಡಿಸಿದ್ದು, ಈ ವರ್ಷ ಅದನ್ನು ಕಾರ್ಯಗತಗೊಳಿಸುವ ಸಂಬಂಧ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ಸಮಾರಂಭದಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದ ಭಾರತ ಹಾಕಿ ತಂಡದ (2024ರ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ವಿಜೇತ ತಂಡ) ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರನ್ನು ಮುಖ್ಯಮಂತ್ರಿಗಳು ಸನ್ಮಾನಿಸಿದರು. ಪ್ರಾರಂಭದಲ್ಲಿ ಹಾಕಿ ಪಟು ಎಸ್.ಪಿ. ಕೃತಿಕಾ ನೇತೃತ್ವದ ತಂಡ ಕ್ರೀಡಾ ಜ್ಯೋತಿ ತಂದಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಎ.ಆರ್.ಕೃಷ್ಣಮೂರ್ತಿ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಡಿ.ರಂದೀಪ್, ಆಯುಕ್ತ ಆರ್.ಚೇತನ್, ದಸರಾ ಕ್ರೀಡಾ ಉಪಸಮಿತಿ ಉಪ ವಿಶೇಷಾಧಿಕಾರಿ ವಿ.ಕೆ.ಪ್ರಸನ್ನಕುಮಾರ್, ಕಾರ್ಯಾಧ್ಯಕ್ಷ ಡಾ.ಜಿತೇಂದ್ರಶೆಟ್ಟಿ, ಕಾರ್ಯದರ್ಶಿ ಭಾಸ್ಕರ್ ನಾಯಕ್ ಮತ್ತಿತರರು ಹಾಜರಿದ್ದರು.

> ಕ್ರೀಡಾಪಟುಗಳಿಗೆ ಶಿಸ್ತು, ಕಠಿಣ ಪರಿಶ್ರಮ ಅಗತ್ಯ ಆಗ ಮಾತ್ರ ಸಾಧನೆ ಸಾಧ್ಯವಾಗಲಿದೆ. ನಾನು ಸಹ ಸಾಧನೆ ಹಂತಕ್ಕೆ ತಲುಪಲು ಸಾಕಷ್ಟು ಶ್ರಮಿಸಿದ್ದೇನೆ. ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಬೇಕೆಂಬ ನನ್ನ ಕನಸು, ಪ್ಯಾರಿಸ್‌ನಲ್ಲಿ ನನಸಾಯಿತು. ಕರ್ನಾಟಕದಲ್ಲಿ ಉತ್ತಮ ಕ್ರೀಡಾ ಸೌಲಭ್ಯ ಇರುವುದು ಒಳ್ಳೆಯ ಬೆಳವಣಿಗೆ. ಇಲ್ಲಿಂದ ಉತ್ತಮ ಕ್ರೀಡಾಪಟುಗಳು ಹೊರಹೊಮ್ಮಲಿ ಎಂದು ಹಾರೈಸುತ್ತೇನೆ.
> –ಹರ್ಮನ್‌ಪ್ರೀತ್ ಸಿಂಗ್

ಮೂರು ಸಾವಿರ ಕ್ರೀಡಾಪಟುಗಳು ಭಾಗಿ

ಒಟ್ಟು 26 ವಿವಿಧ ಕ್ರೀಡೆಗಳು ಅ.6ರವರೆಗೆ ಚಾಮುಂಡಿ ವಿಹಾರ ಕ್ರೀಡಾಂಗಣ ಸೇರಿದಂತೆ ನಗರದ ವಿವಿಧೆಡೆ ನಡೆಯಲಿದೆ. ಬೆಳಗಾವಿ, ಬೆಂಗಳೂರು ಗ್ರಾಮಾಂತರ ಮತ್ತು ನಗರ, ಕಲಬುರ್ಗಿ ಮತ್ತು ಮೈಸೂರು ವಿಭಾಗಗಳಿಂದ ಪುರುಷ ಮತ್ತು ಮಹಿಳಾ ಪಟುಗಳು ಸೇರಿದಂತೆ ಸುಮಾರು 3 ಸಾವಿರ ಮಂದಿ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.10.2024 ಶುಕ್ರವಾರ, ಮಳೆ ನಕ್ಷತ್ರ: ಹಸ್ತ, 27.09.2024 ರಿಂದ 09.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಚಿತ್ತ, ರಾಹುಕಾಲ : ಬೆಳಗ್ಗೆ 10.30 ರಿಂದ 12 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9 ರಿಂದ ಶರದ್ ವಿರೇಚನ–ಪಂಚಕರ್ಮ ಚಿಕಿತ್ಸಾ ಶಿಬಿರ, ಕಾಮಾಲೆ ಮತ್ತು ಯಕೃತ್ತಿನ ಸಮಸ್ಯೆಗೆ ಚಿಕಿತ್ಸಾ ಶಿಬಿರ, ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟಿ ಮೂವ್‌ಮೆಂಟ್, ಕಾವೇರಿ ಪಿರಮಿಡ್ ಧ್ಯಾನ ಕೇಂದ್ರ :** ಮೈಸೂರು ಧ್ಯಾನ ದಸರಾ ಕಾರ್ಯಕ್ರಮ, ಸಾಮೂಹಿಕ ಸಂಗೀತ ನಾದ ಧ್ಯಾನ, ದಸರಾ ಹಬ್ಬದ ಮಹತ್ವ, ಮುಖ್ಯ ಅತಿಥಿಗಳ ಸಂದೇಶ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಥಳ: ಶ್ರೀ ಹೊಸಮಠದ ನಟರಾಜ ಪ್ರತಿಷ್ಠಾನ, ಬೆಳಗ್ಗೆ 8.30 ರಿಂದ.
- **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.
- **ಮೈಸೂರು ಸೈನ್ಸ್ ಫೌಂಡೇಷನ್, ಬಿಎಸ್‌ಎಸ್ ವಿದ್ಯೋದಯ :** ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ದೂರದರ್ಶಕ ತಯಾರಿಕೆ ಕಾರ್ಯಾಗಾರ ಕಾಸ್ಮೊಸ್–2024, ಸ್ಥಳ: ಬಿಎಸ್‌ಎಸ್ ವಿದ್ಯೋದಯ ಶಾಲೆ ಆವರಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10 ರಿಂದ.
- **ಮೈಸೂರು ಮೃಗಾಲಯ :** 70ನೇ ವನ್ಯಜೀವಿ ಸಪ್ತಾಹ–2024 ರ ಅಂಗವಾಗಿ ಮೈಸೂರು ಮೃಗಾಲಯದಲ್ಲಿ ಅಂತರಾಷ್ಟ್ರೀಯ ಪ್ರಾಣಿ ಪಾಲಕರ ದಿನ, ಪ್ರಾಣಿ ಪಾಲಕರಿಗಾಗಿ ಚಟುವಟಿಕೆಗಳು, ಪ್ರಾಣಿ ಪಾಲಕರ ಬಗ್ಗೆ ಕಿರುಚಿತ್ರ ಕಾರ್ಯಕ್ರಮ, ಸ್ಥಳ: ಮೃಗಾಲಯದ ಆವರಣ, ಬೆಳಗ್ಗೆ 10ಕ್ಕೆ.
- **ಕೆ.ಎಸ್. ರಾಘವೇಂದ್ರ :** ಪೇಪರ್ ಪಲ್ಪ್ ಉಪಯೋಗಿಸಿ ಕೈಯಿಂದ ಮಾಡಿದ ಬೊಂಬೆಗಳ ಮೂಲಕ ದಶಾವತಾರ ಒಳಗೊಂಡ ಶ್ರೀ ಬಾಲಕೃಷ್ಣ ಲೀಲೆ ಪ್ರಸಂಗಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.
- **ಸ್ವರ್ಣ ನೃಸಿಂಹ ದತ್ತಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ವೈಭವ, ಬೆಳಗ್ಗೆ 10 ಗಂಟೆಗೆ ಲಕ್ಷ್ಮೀನಾರಾಯಣ ಹೃದಯ ಹೋಮ, ಸ್ಥಳ: ಶ್ರೀ ವೆಂಕಟಾರ್ಜುನ ಧ್ಯಾನ ಮಂದಿರ, ಹಾರೋಹಳ್ಳಿ ಗ್ರಾಮ, ಸಂಜೆ 6 ಗಂಟೆಗೆ ಸೋನಾರ್ ಸ್ಟ್ರೀಟ್‌ನಲ್ಲಿರುವ ಗುರು ನಿವಾಸದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಲಲಿತಾ ಸಹಸ್ರನಾಮ ಪಾರಾಯಣ
- **ಚಿನ್ಮಯ ಮಿಷನ್ :** ಶರನ್ನವರಾತ್ರಿ ಕಾರ್ಯಕ್ರಮ, ಪ್ರತಿದಿನ ಬೆಳಗ್ಗೆ 11.30 ರಿಂದ ಸ್ವಾಮಿನಿ ಕಾಶಿಕನಂದ ಅವರಿಂದ ಲಲಿತ ಸಹಸ್ರನಾಮದಲ್ಲಿ ಬರುವ ದೇವಿಯ ಕೆಲವು ನಾಮಾವಳಿಗಳು ಕುರಿತು ವಿಶೇಷ ಪ್ರವಚನ, ಸ್ಥಳ: ಚಿನ್ಮಯ ಮಿಷನ್, ಶ್ರೀ ಧತ್ತ ಸನ್ನಿಧಿ, ಗೋಕುಲಂ 3ನೇ ಹಂತ.
- **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ಶಾರದಾಶರನ್ನವರಾತ್ರೋತ್ಸವ–2024, ಮಹಾಪೂಜೆ, ವಿವಿಧ ಹೋಮಗಳು, ಪುರಾಣೋಕ್ತ, ಶ್ರೀ ಮಾಹೇಶ್ವರಿ (ವೃಷಭವಾಹಿನಿ), ಪುರುಷ ಸೂಕ್ತ ಹೋಮ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.
- **ರಂಗಾಯಣ :** ದಸರಾ ಮಹೋತ್ಸವದ ಅಂಗವಾಗಿ ನವರಾತ್ರಿ ಜನಪದ ರಂಗ ಉತ್ಸವ, ಬಳ್ಳಾರಿ, ಸಂಗನಕಲ್ಲು ಸಂಗಮೇಶ್ವರ ನಾಟಕ ಮಂಡಳಿಯಿಂದ ರೇಣುಕಾ ಮಹಾತ್ಮ ಬಯಲಾಟ, ಸ್ಥಳ: ರಂಗಾಯಣದ ವನರಂಗ, ಸಂಜೆ 6.30ಕ್ಕೆ.
- **ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್ :** ದಸರಾ ಗೊಂಬೆಗಳ ಪ್ರದರ್ಶನ, ಸ್ಥಳ: ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್, ಜಯನಗರ, ಬೆಳಗ್ಗೆ 9.30 ರಿಂದ.
- **ಶ್ರೀ ಶ್ರೀ ಸುಬ್ಬರಾಯದಾಸರ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ಬೆಳಗ್ಗೆ ತುಳಸಿ ಅರ್ಚನೆ, ಸಂಜೆ ಉತ್ಸವ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ, ದೇವರಾಜ ಮೊಹಲ್ಲಾ.
- **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** ಶರನ್ನವರಾತ್ರಿ ಉತ್ಸವ, ಬೆಳಗ್ಗೆ 9 ರಿಂದ ನವಗ್ರಹ, ಮೃತ್ಯುಂಜಯ ಹೋಮ, ಬ್ರಹ್ಮಚಾರಿಣಿ ಅಲಂಕಾರ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ.
- **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ :** ದಸರಾ ಮಹೋತ್ಸವ–2024 ಅಂಗವಾಗಿ ಪತ್ರಿಕಾ ಛಾಯಾಗ್ರಾಹಕರ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10 ರಿಂದ.
- **ಎಂಜಿಎಸ್ ವಿಂಟೇಜ್ ಮತ್ತು ಕ್ಲಾಸಿಕ್ ಕಲೆಕ್ಷನ್ :** ದಿ ಮೈಸೂರು ದಸರಾ ವಿಂಟೇಜ್ ಅಂಡ್ ಕ್ಲಾಸಿಕ್ ಕಾರ್ಸ್ ರ‍್ಯಾಲಿ, ಮುಖ್ಯ ಅತಿಥಿಗಳು : ಸ್ಟಾರ್ ಆಫ್ ಮೈಸೂರ್ ಮತ್ತು ಮೈಸೂರು ಮಿತ್ರ ವ್ಯವಸ್ಥಾಪಕ ಸಂಪಾದಕ ವಿಕ್ರಂ ಮುತ್ತಣ್ಣ, ಮಾಜಿ ಸಂಸದ ಪ್ರತಾಪ್ ಸಿಂಹ, ಸ್ಥಳ: ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ಕ್ಕೆ
- **ಗೆಜ್ಜೆ ಹೆಜ್ಜೆ ರಂಗ ತಂಡ :** ಮೂರು ಪುಸ್ತಕಗಳ ಬಿಡುಗಡೆ ಸಮಾರಂಭ, ಅತಿಥಿಗಳು : ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಡಾ.ನ. ಗಂಗಾಧರಪ್ಪ, ರಂಗಭೂಮಿ ಕಲಾವಿದರಾದ ವಿ. ಉದಯಕುಮಾರ್, ರಂಜನ್‌ಶೆಟ್ಟಿ, ಉಪಸ್ಥಿತರು : ಲೇಖಕರಾದ ಶ್ರೀಮತಿ ಸುಧಾರಮೇಶ್‌ಕುಮಾರ್, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12 ರಿಂದ.
- **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ :** ನವರಾತ್ರಿ ಪೂಜಾ ಕಾರ್ಯಕ್ರಮ, ಸಂಜೆ 5.30ಕ್ಕೆ ಭಜನೆ, ಸಂಜೆ 7.30 ರಿಂದ ಶ್ರೀ ರವಿಕಾಂತಾನಂದ ಸ್ವಾಮಿಯವರಿಂದ ಪ್ರವಚನ, ಸ್ಥಳ: ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ, ಅಶೋಕ ರಸ್ತೆ.
- **ಕಲಾಂದಿಕಾ ಕಲಾ ಅಕಾಡೆಮಿ :** ಕಲಾಂದಿಕಾ ಕಲಾ ಅಕಾಡೆಮಿ ವಿದ್ಯಾರ್ಥಿಗಳಿಂದ ಭರತನಾಟ್ಯ, ಮುಖ್ಯ ಅತಿಥಿಗಳು : ಎಕ್ಸೆಲ್ ಸಾಫ್ಟ್ ಸಿಇಓ ಡಿ. ಸುಧನ್ವ, ಗೌರವ ಅತಿಥಿಗಳು : ನೂಪುರ ಕಲಾವಿದರು ನಿರ್ದೇಶಕ ವಿದ್ವಾನ್ ಪ್ರೊ. ರಾಮಮೂರ್ತಿ ರಾವ್, ಸ್ಥಳ: ಕಲಾನಿಧಿಕಾ ಕಲಾ ಅಕಾಡೆಮಿ, ಸರಸ್ವತಿಪುರಂ, ಸಂಜೆ 6ಕ್ಕೆ
- **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 28ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ಕ್ಕೆ ಮಹಾಭಿಷೇಕ, ಶ್ರೀಕೂಷ್ಮಾಂಡದೇವಿ, ಶ್ರೀವಿದ್ಯಾಶೂಲಿನಿದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಸಂಜೆ 5.30ಕ್ಕೆ ಶ್ರೀನವದುರ್ಗಾ ಹೋಮ ಮತ್ತು ಶ್ರೀ ಮಹಾಪ್ರತ್ಯಂಗೀರಾ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ಗೀತಾರಾಧನ, 6.30 ದಸರಾದಲ್ಲಿ ಇಂದು, ಪ್ರಸ್ತುತಿ : ಜಾಂಪಣ್ಣ ಆಶಿಹಾಳ್, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ: ಡಾ. ಕಲೀಂವುಲ್ಲಾ, ಪ್ರಸ್ತುತಿ: ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ. ನಟರಾಜು ಅಂಗಸ್ವಾಮಿ, ಮುಖ್ಯಸ್ಥರು, ಜೀವರಸಾಯನ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಪ್ರಾಯೋಜಕರು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ಪ್ರಸ್ತುತಿ: ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.05 ಚಾಮುಂಡಿ ಹಬ್ಬ–ದಸರಾ ಸಂಭ್ರಮ, ಜನಪದರ ನಾಲಿಗೆಯಲ್ಲಿ ಮೈಸೂರು ದೇವತೆ, ರಚನೆ : ಡಾ. ಪಿ.ಕೆ. ರಾಜಶೇಖರ್, ಪ್ರಸ್ತುತಿ : ಡಾ. ಮೈಸೂರು ಉಮೇಶ್, 9.35 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ – ದಸರಾ ಪ್ರಯುಕ್ತ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೃತಿಗಳನ್ನೊಳಗೊಂಡ ವಿಶೇಷ ಸಂಗೀತ ಸರಣಿ –ನಮೋ ಜಗತ್ತಾರಿಣಿ, ನಿರ್ಮಾಣ–ಮೈಸೂರು. ಎಸ್. ರಾಜಲಕ್ಷ್ಮೀ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸೈಕಲ್ ಸವಾರಿ ಮಾತಿನ ಲಹರಿ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್

ಮಧ್ಯಾಹ್ನ: 12.30 ದೇವರನಾಮ–ಸಿ. ಎಸ್.ಲಕ್ಷ್ಮೀ, 12.45 ಕಾದಂಬರಿ ವಿಹಾರ – ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್.ಎಸ್., 1.20 ಭಾವಗೀತೆಗಳು–ಎನ್. ಶ್ರೀಕಾಂತ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಏಳುತಲೆ ನೆನೆದೇವು – ದಸರಾ ಸಂದರ್ಭದಲ್ಲಿ ಜನಪದ ಶಕ್ತಿ ದೇವತೆಯನ್ನು ಕುರಿತ ವಿಶೇಷ ರೂಪಕ ಮಾಲಿಕೆ, ಪ್ರಸ್ತುತಿ: ಡಾ. ಮೈಸೂರು ಉಮೇಶ್, 2.55 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 3.10 ಕರ್ನಾಟಕ ಶಾಸ್ತ್ರೀಯ ಸಂಗೀತ: ಹೆಚ್.ಎಸ್. ಶ್ರೀಲಕ್ಷ್ಮೀ–ವೀಣಾ ವಾದನ, 4.00 ಮಹಿಳಾರಂಗ–ಭಾರತೀ ಮಹಿಳಾ ಸಮಾಜದವರಿಂದ ದಸರಾ ಕುರಿತು ಕಾರ್ಯಕ್ರಮ ವೈವಿಧ್ಯ, ಪ್ರಸ್ತುತಿ : ಎಂ.ಎಸ್. ಭಾರತೀ, 4.30 ನಮ್ಮ ಆರೋಗ್ಯ: ಹೃದಯದ ಆರೈಕೆ ಕುರಿತು ಡಾ. ಕೇಶವಮೂರ್ತಿ. ವಿ. ಅವರೊಂದಿಗೆ ಮಾತುಕತೆ. ಹಿರಿಯ ನಾಗರಿಕರ ಆರೋಗ್ಯ ರಕ್ಷಣೆ ಕುರಿತು ಡಾ. ಹನುಮಂತಾಚಾರ್ ಜೋಷಿ. ಕೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 6.50 ಕೃಷಿರಂಗ: ಪ್ರಾಯೋಜಿತ ನೇರ ಫೋನ್ ಇನ್ ಕಾರ್ಯಕ್ರಮ, ಪ್ರಾಯೋಜಕರು : ಕೃಷಿ ಇಲಾಖೆ, ವಿಷಯ : ಬೆಳೆ ಸಮೀಕ್ಷೆ, ಭಾಗವಹಿಸುತ್ತಾರೆ : ಸಿ.ಬಿ. ಬಾಲರೆಡ್ಡಿ, ಅಪರ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು, 7.20ಕೃಷಿ ಹಾಡುಗಳು, 7.45 ಚಿತ್ರಗೀತೆಗಳು, 8.00 ವಿಜ್ಞಾನ ಭಾರತಿ, 8.30 ಅರಮನೆ ಸಂಗೀತ ವೈಭವ–ಸಂಗೀತ ರೂಪಕ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಅಳತ್ತೂರು ಸಹೋದರರು–ಯುಗಳ ವೈಯೋಲಿನ್ ವಾದನ, 10.00 ತತ್ವಸಂಚಾರ : ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ : ಡಾ. ಮೈಸೂರು ಉಮೇಶ್, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 4 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 169 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ದಸರಾ ಪ್ರಾರಂಭ

ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡಿ ನಾಡೋಜ ಡಾ.ಹಂಪ ನಾಗರಾಜಯ್ಯ ನಾಡಹಬ್ಬ ಉದ್ಘಾಟನೆ

● ದೇಸಿ ಸೊಗಡಿನ ದಸರಾ ನಿಲ್ಲಬಾರದು ● ಬಹುರೂಪಿ ಸಂಸ್ಕೃತಿ, ಅಸ್ಮಿತೆಯ ಆಯಾಮ ● ಇಲ್ಲಿ ಆಸ್ತಿಕತೆ, ನಾಸ್ತಿಕತೆ ಚರ್ಚೆ ಅಪ್ರಸ್ತುತ ● ಸೌಹಾರ್ದತೆ ಇದ್ದರೆ ಪ್ರತಿ ಮನೆ ಅರಮನೆ, ಎಲ್ಲರೂ ರಾಜ–ರಾಣಿಯರೆ!

ದಸರಾ ಸರ್ವ ಜನಾಂಗದ ಹಬ್ಬ

ಮೈಸೂರು, ಅ.3(ಬಿಎಲ್‌ಎಸ್)– ರಾಜರ ಕಾಲದ ಗತವೈಭವ, ಸಾಂಸ್ಕೃತಿಕ ಪರಂಪರೆ ಹಾಗೂ ಐತಿಹಾಸಿಕ ಮಹತ್ವ ಸಾರುವ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ನಾಡಿನ ಖ್ಯಾತ ಸಾಹಿತಿ ನಾಡೋಜ ಡಾ.ಹಂಪ ನಾಗರಾಜಯ್ಯ ಇಂದು ವಿಧ್ಯುಕ್ತ ಚಾಲನೆ ನೀಡಿದರು.

ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಸನ್ನಿಧಿಯಲ್ಲಿ ಬೆಳ್ಳಿರಥದಲ್ಲಿ ಕಂಗೊಳಿಸುತ್ತಿದ್ದ ನಾಡದೇವತೆ ತಾಯಿ ಚಾಮುಂಡೇಶ್ವರಿಯ ಉತ್ಸವಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ 9 ದಿನಗಳ ಶರನ್ನವರಾತ್ರಿಯ ಉತ್ಸವವನ್ನು ಡಾ.ಹಂಪ ನಾಗರಾಜಯ್ಯ ಉದ್ಘಾಟಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಇತರೆ ಗಣ್ಯರ ಜೊತೆ ಆಗಮಿಸಿದ ಡಾ.ಹಂಪ ನಾಗರಾಜಯ್ಯ ಅವರನ್ನು ಚಾಮುಂಡಿಬೆಟ್ಟದ ಮಹಿಷಾಸುರ ಪ್ರತಿಮೆ ಬಳಿ ಪೂರ್ಣಕುಂಭ ಹೃದಯಸ್ಪರ್ಶಿ ಸ್ವಾಗತ ಕೋರಲಾಯಿತು.

ಕಾಲ್ನಡಿಗೆಯಲ್ಲಿ ದೇವಸ್ಥಾನಕ್ಕೆ ಆಗಮಿಸುವ ವೇಳೆ ಡಾ.ಹಂಪ ನಾಗರಾಜಯ್ಯ ಅವರಿಗೆ ಪೂಜಾ ಕುಣಿತ, ಡೊಳ್ಳು ಕುಣಿತ, ಮಂಗಳವಾದ್ಯ ಸೇರಿದಂತೆ ಇತರೆ ಜಾನಪದ ಕಲಾತಂಡಗಳೊಂದಿಗೆ ಅಭೂತಪೂರ್ವ ಸ್ವಾಗತ ಕೋರಲಾಯಿತು. ತರುವಾಯ ಚಾಮುಂಡೇಶ್ವರಿ ದೇವಾಲಯಕ್ಕೆ ಆಗಮಿಸಿದ ಡಾ.ಹಂಪ ನಾಗರಾಜಯ್ಯ ಶಕ್ತಿದೇವತೆ ತಾಯಿ ಚಾಮುಂಡೇಶ್ವರಿಗೆ ಅಗ್ರಪೂಜೆ ಸಲ್ಲಿಸಿದರು. ನಂತರ ವೇದಿಕೆ ಕಾರ್ಯಕ್ರಮದಲ್ಲಿ ಡಾ.ಹಂಪ ನಾಗರಾಜಯ್ಯ ಜ್ಯೋತಿ ಬೆಳಗಿಸಿ ದಸರಾ ಮಹೋತ್ಸವಕ್ಕೆ ಶುಭ ಕೋರಿದರು. ತದನಂತರ ಬೆಳ್ಳಿರಥದಲ್ಲಿ ಆಸೀನಳಾಗಿದ್ದ ಜಗನ್ಮಾತೆ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡಿ 9 ದಿನಗಳ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಿದರು.

ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಾ.ಹಂಪ ನಾಗರಾಜಯ್ಯ ಅವರಿಗೆ ಮೈಸೂರು ಪೇಟ ತೊಡಿಸಿ, ಮಹಾವೀರನ ಪುತ್ಥಳಿಯನ್ನು ನೆನಪಿನ ಕಾಣಿಕೆಯಾಗಿ ನೀಡಿ ಸರ್ಕಾರದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಿದರು. ತರುವಾಯ ಮಾತನಾಡಿದ ಡಾ.ಹಂಪ ನಾಗರಾಜಯ್ಯ, ದಸರಾದ ಐತಿಹಾಸಿಕ ಹಿನ್ನೆಲೆ, ರಾಜರ ಕಾಲದ ಗತವೈಭವ, ■ 6ನೇ ಪುಟಕ್ಕೆ



ಚಾಮುಂಡಿಬೆಟ್ಟದಲ್ಲಿ ಗುರುವಾರ ನಾಡಿನ ಖ್ಯಾತ ಸಾಹಿತಿ ನಾಡೋಜ ಡಾ.ಹಂಪ ನಾಗರಾಜಯ್ಯ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡುವ ಮೂಲಕ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕಾನೂನು ಸಚಿವ ಹೆಚ್.ಕೆ. ಪಾಟೀಲ್, ಶಾಸಕರಾದ ಜಿ.ಟಿ.ದೇವೇಗೌಡ, ರವಿಶಂಕರ್ ಹಾಗೂ ಇತರರನ್ನು ಕಾಣಬಹುದು.

ನಿಮ್ಮ ಪತ್ರಗಳು

ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ರಾಜೀನಾಮೆ ಪ್ರಸ್ತಾಪ; ಜಿ.ಟಿ.ದೇವೇಗೌಡರ ಹೇಳಿಕೆ ಒಪ್ಪುವಂತಹದ್ದಲ್ಲ...!

ಮಾನ್ಯರೆ,

ಚಾಮುಂಡಿಬೆಟ್ಟದಲ್ಲಿ ಈ ಸಾಲಿನ ಮೈಸೂರು ದಸರಾ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದಂತಹ ಚಾಮುಂಡಿಬೆಟ್ಟವೂ ಒಳಗೊಂಡ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿಚಾರವನ್ನು ಪ್ರಸ್ತಾಪಿಸಿ, ಎಫ್‌ಐಆರ್ ದಾಖಲಾದ ಮಾತ್ರಕ್ಕೆ ರಾಜೀನಾಮೆ ಕೊಡಬೇಕಿಲ್ಲ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮೇಲೂ ಎಫ್‌ಐಆರ್ ದಾಖಲಾಗಿದೆ. ಅವರೂ ರಾಜೀನಾಮೆ ಕೊಡುತ್ತಾರ? ಹೀಗೆ, ಹಲವರ ಮೇಲೆ ಎಫ್‌ಐಆರ್ ಆಗಿದೆ. ಎಫ್‌ಐಆರ್ ಆಗಿರುವವರೆಲ್ಲ ತಾಕತ್ತಿದ್ದರೆ ವಿಧಾನಸೌಧಕ್ಕೆ ಬನ್ನಿ, ಅಲ್ಲಿಗೆ ಬಂದು ರಾಜೀನಾಮೆ ನೀಡಿ. ಇದು ಸಾಧ್ಯನಾ? ಎಂದು ಪ್ರಶ್ನಿಸಿದ್ದಾರೆ.

ಇಲ್ಲಿ ಒಂದು ನೈತಿಕ ಪ್ರಶ್ನೆ, ಜೊತೆಗೆ ಸಾಂವಿಧಾನಿಕ ನೈತಿಕತೆ (constitutional morality) ಒಳಗೊಂಡಿದೆ. ಹೆಚ್.ಡಿ.ಕುಮಾರಸ್ವಾಮಿ ಅವರ ಮೇಲೆ ಎಫ್‌ಐಆರ್ ದಾಖಲಾಗಿದ್ದರೂ ಅವರನ್ನು ತನಿಖೆ ಮಾಡುವ ಅಧಿಕಾರಿಗಳು ಅವರ ಅಧೀನದಲ್ಲಿಲ್ಲ. ಅವರೆಲ್ಲ ರಾಜ್ಯ ಸರ್ಕಾರದ ಅಡಿಯಲ್ಲಿ ಬರುತ್ತಾರೆ. ಅಂದರೆ, ಸ್ವತಂತ್ರವಾಗಿ ತನಿಖೆ ನಿರ್ವಹಿಸುತ್ತಾರೆ.

ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಕರಣದಲ್ಲಿ ತನಿಖೆ ಮಾಡುವವರು ಅವರ ಅಡಿಯಲ್ಲೇ ಬರುವವರು. ಇಂತಹ ತನಿಖಾಧಿಕಾರಿಗಳು ಯಾವ ರೀತಿಯಲ್ಲಿ ತನಿಖೆ ಮಾಡುತ್ತಾರೆ ಎಂಬುದನ್ನು ಕನಿಷ್ಠ ಸಾಮಾನ್ಯ ಜ್ಞಾನ ಉಳ್ಳವರು ಅರ್ಥಮಾಡಿಕೊಳ್ಳಬಹುದು.

ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗಡೆ ಅವರೂ ಒಮ್ಮೆ, ನಮಗೆ ಆಡಳಿತಾತ್ಮಕ ಅಧಿಕಾರ ಮಾತ್ರವಿದೆ, ತನಿಖೆಯ ಅಧಿಕಾರವಿಲ್ಲ. ಆ ಅಧಿಕಾರವಿರುವುದು ಪೊಲೀಸರಿಗೆ. ಇಂತಹ ಸಂದರ್ಭದಲ್ಲಿ ನಾವು ಏನೂ ಮಾಡಲಾಗದು. ಅವರು ಏನು ತನಿಖಾ ವರದಿ ಕೊಡುತ್ತಾರೋ ಅದರ ಮೇಲೆ ನಾವು ಮುಂದೆ ಸಾಗಬೇಕಾಗುತ್ತದೆ. ಇದೇ ವಿಚಾರವನ್ನು ಹಾಲಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಕೂಡ ಸಂದರ್ಶನವೊಂದರಲ್ಲಿ ಹೇಳಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧದ ಪ್ರಾಸಿಕ್ಯೂಷನ್ ಕುರಿತಾದ ವಿಚಾರಣೆ ನಡೆಸಿದಂತಹ ಹೈಕೋರ್ಟ್ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ತೀರ್ಪು ನೀಡುವ ವೇಳೆ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿದ್ದಾರೆ. ಅದನ್ನು ನಾನಾ ಆಯಾಮಗಳಲ್ಲಿ ಪರಿಶೀಲನೆ ನಡೆಸಿದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತನಿಖೆ ಆಗಬೇಕು ಎಂಬುದೇ ಆಗಿದೆ ಎಂದು ತೀರ್ಪು ಪ್ರಕಟಿಸಿದ್ದರು. ತೀರ್ಪು ಪ್ರಕಟವಾದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರ ವಕೀಲ ಅಭಿಷೇಕ್ ಮನು ಸಿಂಘ್ವಿ, ತೀರ್ಪಿಗೆ 15 ದಿನ ತಡೆ ನೀಡುವಂತೆ ಕೋರಿದ್ದರು. ಅದಕ್ಕೆ ನ್ಯಾಯಮೂರ್ತಿಗಳು ನಾನೇ ಕೊಟ್ಟಂತಹ ತೀರ್ಪಿಗೆ ತಡೆ ನೀಡಲು ಬರುವುದಿಲ್ಲ. ಬೇಕಿದ್ದರೆ ನೀವು ಮೇಲ್ಮನವಿ ಸಲ್ಲಿಸಿ ಎಂದು ಹೇಳಿದ್ದರು. ಸಿದ್ದರಾಮಯ್ಯ ಇದುವರೆಗೆ ಮೇಲ್ಮನವಿ ಸಲ್ಲಿಸಿಲ್ಲ, ಅದು ಬೇರೆ ವಿಚಾರ. ಆದರೆ ಇಲ್ಲಿ ಜಿ.ಟಿ.ದೇವೇಗೌಡರು, ಸಿದ್ದರಾಮಯ್ಯ ಅವರು ರಾಜೀನಾಮೆ ಕೊಡುವ ಅಗತ್ಯವಿಲ್ಲ ಎಂದು ಹೇಳಿರುವುದು ಕಾನೂನಾತ್ಮಕವಾಗಿ, ಸಾಂವಿಧಾನಿಕ ನೈತಿಕತೆಯ ಪ್ರಶ್ನೆ ಬಂದಾಗಲೂ, ಮೇಲಾಗಿ ಪ್ರಾಕೃತಿಕ ನ್ಯಾಯ (Natural Justice)ದ ದೃಷ್ಟಿಯಿಂದಲೂ ಒಪ್ಪುವಂತಹದ್ದಲ್ಲ.

ಮೈಸೂರು
3–10–2024

–ಡಾ.ಕೆ.ಬಿ.ಗಣಪತಿ, ಸಂಸ್ಥಾಪಕ ಸಂಪಾದಕರು 'ಮೈಸೂರು ಮಿತ್ರ'

ಎಫ್‌ಐಆರ್ ಆಗಿದ್ದಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡುವ ಅಗತ್ಯವಿಲ್ಲ...!

ಸಿದ್ದರಾಮಯ್ಯ ಪರ ಬ್ಯಾಟ್ ಬೀಸಿದ ಶಾಸಕ ಜಿ.ಟಿ.ದೇವೇಗೌಡರು


● ಹೆಚ್.ಡಿ.ಕುಮಾರಸ್ವಾಮಿಗೂ ಜಿಟಿಡಿ ಟಾಂಗ್ ● ಎಫ್‌ಐಆರ್ ದಾಖಲಾಗಿದ್ದಕ್ಕೆ ರಾಜೀನಾಮೆ ನೀಡಬೇಕೇ? ● ಹಾಗಂತ ಯಾವ ಕಾನೂನು ಹೇಳಿಲ್ಲ ● ಹಾಗಾದರೆ ನೀವೂ ರಾಜೀನಾಮೆ ಕೊಡುತ್ತೀರಾ... ● ಎಫ್‌ಐಆರ್ ದಾಖಲಾದವರೆಲ್ಲಾ ತಾಕತ್ತಿದ್ದರೆ ರಾಜೀನಾಮೆ ನೀಡಿ



ಮೈಸೂರು, ಅ.3(ಬಿಎಲ್‌ಯು)– ಅನಿರೀಕ್ಷಿತ ರಾಜಕೀಯ ಬೆಳವಣಿಗೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಬ್ಯಾಟ್ ಬೀಸಿರುವ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಜಿ.ಟಿ.ದೇವೇಗೌಡ, ಎಫ್‌ಐಆರ್ ದಾಖಲಾಗಿದೆ ಎಂಬ ಕಾರಣಕ್ಕೆ ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡುವ ಅಗತ್ಯವಿಲ್ಲ ಎಂದು ಹೇಳಿಕೆ ನೀಡಿ ಅಚ್ಚರಿ ಮೂಡಿಸಿದ್ದಾರೆ.

ಸಿದ್ದರಾಮಯ್ಯ ರಾಜೀನಾಮೆಗೆ ಬಿಜೆಪಿ ಹಾಗೂ ಜೆಡಿಎಸ್ ವ್ಯಾಪಕ ಒತ್ತಡ ಹೇರಿ, ಹೋರಾಟ ರೂಪಿಸುತ್ತಿರುವ ಸಂದರ್ಭದಲ್ಲಿ ಅಚ್ಚರಿ ರಾಜಕೀಯ ಬೆಳವಣಿಗೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರ ಈ ಹೇಳಿಕೆ ರಾಜ್ಯ ರಾಜಕಾರಣದಲ್ಲಿ ಕುತೂಹಲ ಮೂಡಿಸಿದೆ. ಸಿದ್ದರಾಮಯ್ಯ ಅವರನ್ನು ಬೆಂಬಲಿಸುವುದರ ಜೊತೆಗೆ ತಮ್ಮ ನಾಯಕ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡರು. ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಡ ಹೇರುತ್ತಿರುವ ಬಿಜೆಪಿ ಮತ್ತು ಜೆಡಿಎಸ್ ದೋಸ್ತಿಗಳಿಗೆ ಈ ಮೂಲಕ ಜಿ.ಟಿ.ದೇವೇಗೌಡ ಟಾಂಗ್ ನೀಡಿದರು. ಚಾಮುಂಡಿಬೆಟ್ಟದಲ್ಲಿ ಇಂದು ವಿಶ್ವ ವಿಖ್ಯಾತ ಮೈಸೂರು ದಸರಾ ಉತ್ಸವದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಜಿ.ಟಿ.ದೇವೇಗೌಡರು, ದಿಢೀರ್ ಸಿದ್ದರಾಮಯ್ಯ ಅವರನ್ನು ಬೆಂಬಲಿಸುವ ಮಾತುಗಳನ್ನಾಡಿ ಆಶ್ಚರ್ಯ ಮೂಡಿಸಿದರು. ಸಿದ್ದರಾಮಯ್ಯ ಅವರು ಈ ತನಕ ಗಣಿ ಮತ್ತು ರಿಯಲ್ ಎಸ್ಟೇಟ್ ಮಾಫಿಯಾದ ಹತ್ತಿರ ಸುಳಿಯದೆ ಅಂತರ ಕಾಯ್ದುಕೊಂಡಿದ್ದಾರೆ. ■ 6ನೇ ಪುಟಕ್ಕೆ

ಜಿ.ಟಿ.ದೇವೇಗೌಡರ ಮಾತಿನಿಂದ ನನಗೆ ಮತ್ತಷ್ಟು ಬಲ ಬಂದಿದೆ...



ಶಾಸಕ ಜಿ.ಟಿ.ದೇವೇಗೌಡರು ತಮಗೆ ಬೆಂಬಲ ನೀಡುವ ಮಾತುಗಳನ್ನಾಡುವಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಫುಲ್ ಖುಷ್ ಆಗಿದ್ದರು. ಜಿ.ಟಿ.ದೇವೇಗೌಡರ ಮಾತುಗಳನ್ನು ಕೇಳಿ ಹಸನ್ಮುಖರಾಗಿದ್ದರು. ಅಲ್ಲದೆ ತಮ್ಮ ಭಾಷಣದಲ್ಲಿ ಜಿ.ಟಿ. ದೇವೇಗೌಡರ ಮಾತನ್ನು ಉಲ್ಲೇಖಿಸಿದ ಸಿದ್ದರಾಮಯ್ಯ, ಜಿ.ಟಿ.ದೇವೇಗೌಡರಿಗೆ ಸತ್ಯ ಗೊತ್ತಿದೆ. ಬೇರೆ ಪಕ್ಷದಲ್ಲಿ ಇದ್ದರೂ ಸತ್ಯದ ನುಡಿಗಳನ್ನಾಡಿದ್ದಾರೆ ಎಂದರು.

ಸತ್ಯಕ್ಕೆ ಜಯ ಸಿಗಬೇಕು ಎಂಬ ಜಿ.ಟಿ.ದೇವೇಗೌಡರ ಮಾತಿನಿಂದ ನನಗೆ ಮತ್ತಷ್ಟು ಬಲ ಬಂದಿದೆ ಎಂದು ಹೇಳಿದರು. ನಾನು, ಜಿ.ಟಿ.ದೇವೇಗೌಡರು ಒಂದೇ ತಾಲೂಕಿನವರು. ಈಗ ನನ್ನ ಪರವಾಗಿ ಸತ್ಯ ಹೇಳಿದ್ದಾರೆ ಎಂದರು. ಇದೇ ಜಿ.ಟಿ.ದೇವೇಗೌಡ ಒಂದು ಬಾರಿ ನನ್ನ ಸೋಲಿಸಿ ಬಿಟ್ಟಿದ್ದರು. ಆದರೆ ನನ್ನ ಕೈಯ್ಯಾರೆ ನಾನು ಸೋತೆ. ಆ ವಿಚಾರ ಈಗ ಅಪ್ರಸ್ತುತ ಎಂದು ಹೇಳಿದರು.

ತಮ್ಮ ಭಾಷಣದಲ್ಲಿ ಪದೇ ಪದೆ ನನಗೆ ತಾಯಿ ಚಾಮುಂಡೇಶ್ವರಿ ಕೃಪಾಶೀರ್ವಾದವಿದೆ ಎಂದು ಪುನರುಚ್ಚರಿಸುತ್ತಿದ್ದ ಸಿದ್ದರಾಮಯ್ಯ ಅವರಿಗೆ ಜಿ.ಟಿ.ದೇವೇಗೌಡರ ಮಾತು ವಿಪಕ್ಷಗಳ ಬಾಯಿ ಮುಚ್ಚಿಸಲು ಪ್ರಬಲ ಅಸ್ತ್ರ ದೊರೆತಂತಾಗಿದೆ.



ಮುಖ್ಯಮಂತ್ರಿಗಳೇ, ಮೊದಲು ನಿಮ್ಮ ಮಡದಿಯ ಮಾತು ಕೇಳಿ

■ ಪುಟ–4

ನಾಡಹಬ್ಬ ದಸರಾ ಉದ್ಘಾಟನೆಯಲ್ಲಿ 'ರಾಜಕೀಯ'


ಮೈಸೂರು, ಅ.3(ಬಿಎಲ್‌ಯು)– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ದಸರಾ ವೈಭವ ಹಾಗೂ ಮಹತ್ವ ಮರೆತ ಜನನಾಯಕರು ನಾಡಹಬ್ಬದ ವೇದಿಕೆಯನ್ನು ರಾಜಕಾರಣಕ್ಕೆ ಬಳಸಿಕೊಂಡರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕ ಜಿ.ಟಿ.ದೇವೇಗೌಡ ಸೇರಿದಂತೆ ಹಲವು ನಾಯಕರು ತಮ್ಮ ಭಾಷಣದ ಬಹುಭಾಗವನ್ನು ರಾಜಕೀಯ ವಿಚಾರಕ್ಕೆ ಮೀಸಲಿಟ್ಟರು. ಈ ಬಾರಿ ಸಮೃದ್ಧ ಮಳೆಯಾಗಿದ್ದು, ಅದ್ಧೂರಿ ದಸರಾ ಆಚರಣೆ ಮಾಡಲಾಗುತ್ತಿದೆ ಎಂಬ ಒಂದು ವಿಚಾರ ಬಿಟ್ಟರೆ, ಯಾವುದೇ ಕಾರಣಕ್ಕೂ ರಾಜೀನಾಮೆ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘಂಟಾಘೋಷ ಮೊಳಗಿಸಿದರು.

ಅಲ್ಲದೆ ಸರ್ಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ ಮಾತನಾಡುತ್ತಾ, ನಾಡಹಬ್ಬ ದಸರಾ ಕಾರ್ಯಕ್ರಮವನ್ನು ಕಾಂಗ್ರೆಸ್ ಪಕ್ಷದ ಪ್ರಚಾರಕ್ಕೆ ಬಳಸಿಕೊಂಡರು. ತಮ್ಮ ಮಾತಿನುದ್ದಕ್ಕೂ ವಿರೋಧ ಪಕ್ಷಗಳಿಗೆ ಟಾಂಗ್ ನೀಡಿದ ಸಿದ್ದರಾಮಯ್ಯ, ಇದು ದಸರಾ ಕಾರ್ಯಕ್ರಮ ಎಂಬುದನ್ನೇ ಮರೆತರು. ಇನ್ನು ಶಾಸಕ ಜಿ.ಟಿ. ದೇವೇಗೌಡರು ■ 6ನೇ ಪುಟಕ್ಕೆ

ಮೈಸೂರು ಅರಮನೆಯಲ್ಲಿ ಖಾಸಗಿ ದರ್ಬಾರ್ ವೈಭವ

ರತ್ನಖಚಿತ ಸಿಂಹಾಸನವನ್ನೇರಿ ದರ್ಬಾರ್ ನಡೆಸಿದ ಯದುವೀರ್



ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಅರಮನೆಯ ದರ್ಬಾರ್ ಹಾಲ್‌ನಲ್ಲಿ ಗುರುವಾರ ಆರಂಭವಾದ ಖಾಸಗಿ ದರ್ಬಾರ್‌ನಲ್ಲಿ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ರತ್ನಖಚಿತ ಸಿಂಹಾಸನರೂಢರಾಗಿ ಸೆಲ್ಯೂಟ್ ಹೊಡೆಯುತ್ತಿರುವುದು. (ಪೂರ್ಣ ಸಚಿತ್ರ ವರದಿ ಪುಟ–7)

ನಕ್ಕರೆ ಅದೇ ಸ್ವರ್ಗ

ಗುಂಡ : ನಿನ್ನ ಹೆಂಡತಿಗೆ ಹೋಗಿ ರೋಸ್ ಕೊಡು..
ತಿಮ್ಮ : ಯಾಕೆ?
ಗುಂಡ : ಶಿಕ್ಷಕರ ದಿನಾಚರಣೆ ಕಣಪ್ಪಾ..
ತಿಮ್ಮ : ಗೊತ್ತಪ್ಪಾ.. ಆದರೆ ನನ್ನ ಹೆಂಡತಿ ಟೀಚರ್ ಅಲ್ಲಾ..
ಗುಂಡ : ಅದು ಗೊತ್ತಿದೆ ನನಗೆ, ನಿನ್ನ ಹೆಂಡತಿಯಿಂದ ಪಾಠ ಕಲಿತಷ್ಟು ನೀನು ಎಲ್ಲೂ ಕಲಿತಿರಲ್ಲಾ.. ಅದಕ್ಕೆ

ಮೈಸೂರು ಮಿತ್ರ

ಶುಕ್ರವಾರ, 4 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಅಂದಿನ ನಗುವೇ ಇಂದಿಲ್ಲ ಅಂದ ಮೇಲೆ,
ಇಂದಿನ ಕಷ್ಟ ಮುಂದೆಯೂ ಇರುವುದಿಲ್ಲ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತನ್ನ ಮೊಸರನ್ನು ಯಾರೂ ಹುಳಿ ಅನ್ನುವುದಿಲ್ಲ.

ನಿಮ್ಮ ಪತ್ರಗಳು

ದುಬಾರಿಯಾದ ದಸರಾ ಮನರಂಜನಾ ಕಾರ್ಯಕ್ರಮ



ಮಾನ್ಯರೆ,

ಈ ಬಾರಿಯ ನಾಡಹಬ್ಬ ಮೈಸೂರು ದಸರಾ ಮಹೋತ್ಸವವು ಗುರುವಾರ (ಅ.3)ದಿಂದ ಆರಂಭವಾಗಿದ್ದು, 12ರವರೆಗೆ ಅದ್ಧೂರಿಯಾಗಿ ನಡೆಯಲಿದೆ. ಸರ್ಕಾರದಿಂದ 40 ಕೋಟಿ ಅನುದಾನವನ್ನು ದಸರಾ ಮಹೋತ್ಸವದ ಖರ್ಚಿಗಾಗಿ ಬಿಡುಗಡೆ ಮಾಡಿದ್ದರೂ ಜನಸಾಮಾನ್ಯರಿಗೆ ದಸರಾ ವೈಭವವನ್ನು ಕಣ್ತುಂಬಿ ಕೊಳ್ಳಲು ಅನೇಕ ಜನಾಕರ್ಷಣೆ ಮತ್ತು ಮನರಂಜನಾ ಕಾರ್ಯಕ್ರಮಗಳ ಪ್ರವೇಶ ಶುಲ್ಕವನ್ನು ದುಬಾರಿ ಮಾಡಿರುವುದರಿಂದ ಇದು ಸಾಧ್ಯವಾಗುತ್ತಿಲ್ಲ. ಈ ಬಾರಿ ಯುವ ದಸರಾ ವೀಕ್ಷಣೆಗೆ ಹೊಸದಾಗಿ ದರ ನಿಗದಿ ಮಾಡಿ ಟಿಕೆಟ್ ವ್ಯವಸ್ಥೆ ಮಾಡಲಾಗಿದೆ. ಒಂದು ದಿನ ಯುವ ದಸರಾವನ್ನು ಗ್ಯಾಲರಿಯಲ್ಲಿ ಕುಳಿತು ನೋಡಲು ರೂ.8000, 5,000, 2,500, 1,500 ಟಿಕೆಟ್ ದರವನ್ನು ನಿಗದಿ ಮಾಡಲಾಗಿದೆ. ಇದಲ್ಲದೆ ವಿದ್ಯುತ್ ದೀಪಾಲಂಕಾರವನ್ನು ವೀಕ್ಷಿಸಲು ಅಂಬಾರಿ ಬಸ್ ದರ ರೂ. 500, ಗೋಲ್ಡ್ ಪಾಸ್ ರೂ. 6,500. ಜಂಬೂ ಸವಾರಿ ಮಾತ್ರ ವೀಕ್ಷಣೆಗೆ 3,500 ರೂ. ಪಂಜಿನ ಕವಾಯತು ವೀಕ್ಷಣೆಗೆ ರೂ. 1500. ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ರೂ. 50. ಕಳೆದ ಬಾರಿಗಿಂತ ಈ ಬಾರಿ ದಸರಾ ವೀಕ್ಷಣೆಯು ತುಂಬಾ ದುಬಾರಿಯಾಗಿದ್ದು, ನಾಡಿನ ವಿವಿಧ ಕಡೆಗಳಿಂದ ಆಗಮಿಸುವ ಪ್ರವಾಸಿಗರ ಜೇಬಿಗೆ ಕತ್ತರಿ ಬೀಳುವುದು ಗ್ಯಾರಂಟಿ ಯಾಗಿದೆ. ಈಗಾಗಲೇ ಟಿಕೆಟ್ ದರದ ಹೆಚ್ಚಳದ ವಿರುದ್ಧ ಸಾರ್ವಜನಿಕರ ವಲಯದಲ್ಲಿ ತೀವ್ರ ಟೀಕೆಗಳು ವ್ಯಕ್ತವಾಗುತ್ತಿವೆ. ದಸರಾ ನಡೆಸುವುದು ದುಡ್ಡಿಗಾಗಿಯೇ ಎಂಬ ಮನೋಭಾವನೆ ಸಾರ್ವಜನಿಕರಲ್ಲಿ ಮನೆ ಮಾಡುತ್ತಿದೆ. ಆದ್ದರಿಂದ ಈ ಬಾರಿಯ ದಸರಾವು ದುಬಾರಿಯಾಗದೆ ಜನಸಾಮಾನ್ಯರ ದಸರಾವಾಗಲಿ ಎಂಬುದೇ ಸಾರ್ವಜನಿಕರ ಒಕ್ಕೊರಲಿನ ಅಭಿಪ್ರಾಯವಾಗಿದೆ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಪ್ರಧಾನಿಯವರ ಔದಾರ್ಯತೆ

ಮಾನ್ಯರೆ,



ಭಾರತ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಇತ್ತೀಚೆಗೆ ಶ್ರೀನಗರದ ಕತ್ವ ಎಂಬಲ್ಲಿ ಚುನಾವಣಾ ಪ್ರಚಾರ ಸಭೆಯೊಂದರಲ್ಲಿ ಮಾತನಾಡಿ, 83 ವರ್ಷದ ತಾನು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರನ್ನು ಅಧಿಕಾರದಿಂದ ಇಳಿಸುವವರೆಗೂ ಸಾಯುವುದಿಲ್ಲ ಎಂದು ಹೇಳಿದ್ದರು. ಆದರೆ, ಅದೇ ಸಂದರ್ಭದಲ್ಲಿ ಅವರು ತಲೆ ತಿರುಗಿ ಬಿದ್ದು ಅಸ್ವಸ್ಥರಾದರು. ಕೂಡಲೇ ಅವರ ಸಹಾಯಕರು ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರು. ವಿಷಯ ಅರಿತ ಗೌರವಾನ್ವಿತ ಪ್ರಧಾನಮಂತ್ರಿ ನರೇಂದ್ರ ಮೋದಿ, ಖರ್ಗೆಯವರಿಗೆ ದೂರವಾಣಿ ಕರೆ ಮಾಡಿ ಅವರ ಆರೋಗ್ಯ ವಿಚಾರಿಸಿದರು. ತಮ್ಮನ್ನು ಅಧಿಕಾರದಿಂದ ಕಿತ್ತೊಗೆಯುತ್ತೇನೆ ಎನ್ನುವವರ ಬಗ್ಗೆ ಕೂಡ ಮೋದಿಯವರು ಅಕ್ಕರೆ, ಅಭಿಮಾನ ತೋರಿಸಿರುವುದು ಅವರ ದೊಡ್ಡತನವಲ್ಲದೇ ಬೇರೇನಾಗಲಿಕ್ಕೆ ಸಾಧ್ಯ. ಧನ್ಯವಾದಗಳು ಮೋದಿಯವರೇ ನಿಮ್ಮ ಹೃದಯ ವೈಶಾಲ್ಯತೆಗೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಪೆಟ್ರೋಲ್, ಡೀಸೆಲ್ ಜಿಎಸ್‌ಟಿ ವ್ಯಾಪ್ತಿಗೆ ತನ್ನಿ

ಮಾನ್ಯರೇ,

ಜಿಎಸ್‌ಟಿ ವ್ಯಾಪ್ತಿಗೆ ಪೆಟ್ರೋಲ್, ಡೀಸೆಲ್ ತರಲು ರಾಜ್ಯಗಳ ಒಪ್ಪಿಗೆ ಅಗತ್ಯ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದಿಪ್ ಸಿಂಗ್ ಪುರಿಯವರು ಪುಣೆಯಲ್ಲಿ ಹೇಳಿರುವುದು ವರದಿಯಾಗಿದೆ. ಕಳೆದ 10 –15 ವರ್ಷಗಳಿಂದಲೂ ಕೇಂದ್ರದಲ್ಲಿ ಪೆಟ್ರೋಲಿಯಂ ಸಚಿವರಾದವರು ಹೇಳುವ ಈ ಮಾತನ್ನು ಕೇಳಿ ಜನರಿಗೆ ಇವರ ಮೇಲೆ ನಂಬಿಕೆಯೇ ಅಳಿಸಿ ಹೋಗಿದೆ. ನಿಜವಾಗಲೂ ಅದನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವ ಉದ್ದೇಶವಿದ್ದರೆ ಜನರ ಮನದಿಂಗಿತವೂ ಹೌದು ಎಂಬುದನ್ನು ತಿಳಿದು ಕೇಂದ್ರ ಸರ್ಕಾರ ತನ್ನ ಮುಂದಿನ ವರ್ಷದ ಬಜೆಟ್‌ನಲ್ಲಿ ಇದನ್ನು ಘೋಷಿಸಿ ಜಾರಿಗೆ ತರಲಿ. ಸುಮ್ಮನೆ ಕಣ್ಣೊರೆಸುವ ಇಂತಹ ತಂತ್ರಗಾರಿಕೆಯನ್ನು ನಿಲ್ಲಿಸಿ. ಅದು ನಿಮ್ಮ ಕೈಲಾಗದ ಕೆಲಸ ಎಂದು ಜನರಿಗೆ ಗೊತ್ತಿದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಅರ್ಜುನ ಆನೆಯ ಸ್ತಬ್ಧಚಿತ್ರ ಪ್ರದರ್ಶನವಾಗಲಿ

ಮಾನ್ಯರೆ,

ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ 2024, ಅದ್ಧೂರಿಯಾಗಿ ಪ್ರಾರಂಭವಾಗಿದೆ. ಇಡೀ ಮೈಸೂರು ಸಾಂಸ್ಕೃತಿಕ ಕಾರ್ಯಕ್ರಮಗಳು, ಕ್ರೀಡೆಗಳು ಇನ್ನಿತರ ಸ್ಪರ್ಧೆಗಳಿಂದ ರಂಗೇರಿದೆ ಹಾಗೂ ದೀಪಾಲಂಕಾರದಿಂದ ಜಗಮಗಿಸಿ ವಿಶ್ವವನ್ನು ತನ್ನತ್ತ ಸೆಳೆಯಲು ಸಿದ್ಧವಾಗಿದೆ. ಈ ಬಾರಿಯ ದಸರಾ ಬಹಳಷ್ಟು ವಿಶೇಷತೆಗಳಿಂದ ಕೂಡಿದ್ದು, ಈ ಸಂದರ್ಭದಲ್ಲಿ ನಾವು ಅರ್ಜುನ ಆನೆಯನ್ನು ಸ್ಮರಿಸಿಕೊಳ್ಳಬೇಕು. ಸತತ 22 ವರ್ಷ ದಸರಾದಲ್ಲಿ ಭಾಗಿಯಾಗಿ, ಎಂಟು ಬಾರಿ ನಾಯಕನಾಗಿ ಅಂಬಾರಿಯನ್ನು ಹೊರುವ ಮೂಲಕ ಜಂಬೂ ಸವಾರಿಯನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾನೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಸಕಲೇಶಪುರದ ಕಾಡಾನೆಯ ಸೆರೆ ಹಿಡಿಯುವ ಸೆಣಸಾಟದಲ್ಲಿ ಅಗಲಿದ ಅವನಿಗೆ ಜಂಬೂಸವಾರಿಯ ದಿನದಂದು ಪ್ರದರ್ಶನಗೊಳ್ಳುವ ಸ್ತಬ್ಧಚಿತ್ರಗಳ ಪೈಕಿ ಅರ್ಜುನ ಆನೆಯ ಸ್ತಬ್ಧಚಿತ್ರವನ್ನು ಪ್ರದರ್ಶಿಸಿ, ದಸರಾದಲ್ಲಿ ಅವನು ವಹಿಸಿದ್ದ ಪಾತ್ರವನ್ನು ಎಲ್ಲರೂ ತಿಳಿಯುವಂತೆ ಮಾಡಿ, ಈ ಬಾರಿಯ ದಸರಾದಲ್ಲಿ ಗೌರವ ಸಮರ್ಪಣೆಯನ್ನು ಸಲ್ಲಿಸಬೇಕಿದೆ.

–ಯಶವಂತ ಹೆಚ್.ಎಸ್, ಮಹಾರಾಜ ಕಾಲೇಜು

ಅಂಗನವಾಡಿ ಶಿಕ್ಷಕರಿಗೆ ಉರ್ದು ಭಾಷೆ ಕಡ್ಡಾಯ ಖಂಡನೀಯ

ಮಾನ್ಯರೆ,

ಅಂಗನವಾಡಿಗಳಿಗೆ ಶಿಕ್ಷಕರಾಗಿ ನೇಮಕಗೊಳ್ಳುವವರು ಕಡ್ಡಾಯವಾಗಿ ಉರ್ದು ಭಾಷೆ ಕಲಿಯಬೇಕು ಎಂಬ ಸರ್ಕಾರದ ಆದೇಶವನ್ನು ಖಂಡಿಸುತ್ತೇನೆ. ರಾಜ್ಯದ ಅಂಗನವಾಡಿಗಳಲ್ಲಿ ಕನ್ನಡಿಗರ ಮೇಲೆ ಉರ್ದು ಭಾಷೆ ಹೇರಿಕೆ ಮತ್ತು ಉರ್ದು ಕಡ್ಡಾಯದ ಆದೇಶವನ್ನು ಕೂಡಲೇ ಸರ್ಕಾರ ಹಿಂಪಡೆಯಬೇಕು. ಈ ನೆಲದಲ್ಲಿ ಕನ್ನಡ ಭಾಷೆ, ಕನ್ನಡದ ಸಾರ್ವಭೌಮತ್ವಕ್ಕೆ ನಮ್ಮ ನೆಲದ ಸಂಸ್ಕೃತಿ ಮುಂದುವರಿಸಲು ರಾಜ್ಯ ಸರ್ಕಾರ ಆದ್ಯತೆ ನೀಡಬೇಕು. ಇದು ಕನ್ನಡದ ಸಾರ್ವಭೌಮತ್ವ ಮತ್ತು ನಂಬಿಕೆ ಅಸ್ಮಿತೆಗೆ ಅಪಮಾನ ಮಾಡಿದಂತಾಗುತ್ತದೆ.

–ಸಾಯಿ ಸತೀಶ್, ಅಖಿಲ ಭಾರತ ಹಿಂದೂ ಮಹಾಸಭಾ, ಜಿಲ್ಲಾಧ್ಯಕ್ಷ, ಮೈಸೂರು.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಮುಖ್ಯಮಂತ್ರಿಗಳೇ, ಮೊದಲು ನಿಮ್ಮ ಮಡದಿಯ ಮಾತು ಕೇಳಿ



ಸಿದ್ದರಾಮಯ್ಯ
ಬಿ.ಎಂ. ಪಾರ್ವತಿ



ಅರವಿಂದ್ ಕೇಜ್ರಿವಾಲ್
ಸುನೀತಾ ಕೇಜ್ರಿವಾಲ್



ಹೇಮಂತ್ ಸೊರೇನ್
ಕಲ್ಪನಾ ಸೊರೇನ್



ಲಾಲೂ ಪ್ರಸಾದ್ ಯಾದವ್
ರಾಬ್ರಿದೇವಿ



ಶಶಿತರೂರ್
ಸುನಂದಾ ಪುಷ್ಕರ್

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಶ್ರೀಮತಿ ಬಿ.ಎಂ.ಪಾರ್ವತಿಯವರು ಮುಡಾ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ದಿಂದ ತಮಗೆ ಮಂಜೂರಾಗಿದ್ದ 14 ವಿವಾದಾತ್ಮಕ ನಿವೇಶನಗಳನ್ನು ಮುಡಾಗೆ ಹಿಂದಿರುಗಿಸಿದ್ದಾರೆ. ಏನ್ ಪ್ರಯೋಜನ!?

ಮುಖ್ಯಮಂತ್ರಿಗಳಿಗೆ ಸಾರ್ವಜನಿಕರ ಅನುಕಂಪ ಗಿಟ್ಟಿಸುವ ಒಂದು ಮಾರ್ಗವೆಂಬುದನ್ನು ಹೊರತುಪಡಿಸಿದರೆ, ಈ ರೀತಿ ನಿವೇಶನಗಳನ್ನು ಹಿಂದಿರುಗಿಸುವುದು ಒಂದು 'ಪ್ರಮುಖ ಅಂಶ' ಎಂದು ಅವರ ಕೌಟುಂಬಿಕ ವಕೀಲರಿಗೆ ಗೊತ್ತಿದೆ ಎಂಬುದು ನಮಗೆ ಖಾತ್ರಿಯಾಗಿದೆ.

ಹಾಗಾಗಿಯೇ ಅನೇಕರು ಪ್ರಶ್ನಿಸಿದ್ದಾರೆ; ಯಾವುದೇ ವ್ಯಕ್ತಿ ಏನನ್ನಾದರೂ ಕದ್ದ ನಂತರ, ಅವನು ಅದನ್ನು ಹಿಂದಿರುಗಿಸಿದಾಕ್ಷಣ ಆತನಿಗೆ ಕಾನೂನಿನ ಪ್ರಕಾರ ಶಿಕ್ಷೆಯಾಗುವುದಿಲ್ಲವೇ?

ಇಲ್ಲ, ಹಾಗಾಗುವುದಿಲ್ಲ ಏಕೆಂದರೆ, ಎಸಗಿದ ಕೃತ್ಯಕ್ಕೆ ಮಾತ್ರ ಶಿಕ್ಷೆ ಅನ್ವಯಿಸುತ್ತದೆ. ನೀವು ಅದಕ್ಕೆ ಯಾವ ರೀತಿ ಪ್ರತಿಕ್ರಯಿಸುತ್ತೀರಿ ಎಂಬುದಕ್ಕಲ್ಲ.

ಮುಡಾದ 14 ನಿವೇಶನಗಳಿಗೆ ಸಂಬಂಧಿಸಿದಂತೆ, ಕಾನೂನು ಪ್ರಕ್ರಿಯೆಯು ಪ್ರಾರಂಭವಾಗಿದ್ದು, ಅದು ಮುಂದುವರೆಯುತ್ತದೆ. ಆದರೂ ಕುತೂಹಲಕಾರಿ ಸಂಗತಿ ಎಂದರೆ ಮುಖ್ಯಮಂತ್ರಿಗಳ ಪತ್ನಿಯವರು ಇದಕ್ಕೆ ಸಂಬಂಧಿಸಿದಂತೆ ಬರೆದಿರುವ ಪತ್ರ.

ಮೊದಲಿಗೆ, ಸಾರ್ವಜನಿಕ ಜೀವನದಿಂದ ಸಂಪೂರ್ಣ ದೂರವೇ ಇದ್ದ ಪಾರ್ವತಿಯವರು ಈಗ ವಿವಾದಕ್ಕೆ ಸಿಲುಕಿ, ಸಾರ್ವಜನಿಕವಾಗಿ ಪತ್ರ ಬರೆಯಬೇಕಾದ ಸ್ಥಿತಿ ತಲುಪಿದ ಬಗ್ಗೆ ಯಾರೇ ಆಗಲಿ ಸಹಾನುಭೂತಿ ವ್ಯಕ್ತಪಡಿಸದೇ ಇರಲಾರರು.

ಪಾರ್ವತಿಯವರು ಪತ್ರದಲ್ಲಿ ಬರೆಯುತ್ತಾರೆ; "ನನ್ನ ಪತಿಯವರಿಗೆ ರಾಜಕೀಯ ಅಥವಾ ಸಾರ್ವಜನಿಕ ಜೀವನದಲ್ಲಿ ಯಾವುದೇ ರೀತಿಯ ಕುಂದುಂಟಾಗದಂತೆ ಇಲ್ಲವೇ ಮುಜುಗರವುಂಟಾಗದ ರೀತಿಯಲ್ಲಿ ನಾನು ಇಲ್ಲಿವರೆಗೆ ಬದುಕಿದ್ದೇನೆ."

ಒಳ್ಳೆಯ ಜೀವನ ಸಂಗಾತಿಯಾದ ಪಾರ್ವತಿಯವರಿಗೆ ತಮ್ಮ ಪತಿಯವರಿಗೆ ವಿವಾದಾಸ್ಪದ ನಿವೇಶನಗಳ ಉರುಳು ಸುತ್ತಿಕೊಂಡಿರುವುದರಿಂದ ತಪ್ಪಿತಸ್ಥ ಮನೋಭಾವ ಕಾಡುತ್ತಿದೆ ಎಂದು ಕಂಡು ಬರುತ್ತಿದೆ. ಅದರೆ ಅದು ತಮ್ಮ ತಪ್ಪಲ್ಲವೇ ಅಲ್ಲ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಬೇಕು.

ಮೊದಲಿಗೆ, ಮುಖ್ಯಮಂತ್ರಿಗಳ ಹಾಗೂ ಅವರ ಮಗನ ಪ್ರಚಂಡ ಸಲಹೆಗಾರರ ತಪ್ಪುಗಳು, ಅವರ ಪತಿ ಹಾಗೂ ಮಗನನ್ನು ಸುತ್ತುವರೆದಿದೆ.

ಈ ಸಲಹೆಗಾರರು, ಜೇನುತುಪ್ಪದ ಮಡಿಕೆಯಲ್ಲಿ ತಮ್ಮ ನಾಯಕನ ಕೈಬೆರಳು ಮುಳುಗುವುದನ್ನು ಬಯಸಿದ್ದರು. ಆ ಮೂಲಕ ತಮ್ಮ ಎರಡೂ ಕೈಗಳನ್ನು ಜೇನಿನ ಮಡಿಕೆಯೊಳಗೆ ಅದ್ದಬಹುದು ಎಂದು ಅಂದುಕೊಂಡಿದ್ದರು.

ಮುಖ್ಯಮಂತ್ರಿಗಳ ಮಗ, ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯನವರದ್ದು ಎರಡನೇ ತಪ್ಪು. ಅವರು ಈ ವಿವಾದಾತ್ಮಕ 14 ನಿವೇಶನಗಳನ್ನು ತಮ್ಮ ತಾಯಿಯವರಿಗೆ ಮಂಜೂರು ಮಾಡಿದ ಸಂದರ್ಭದಲ್ಲಿ ವರುಣಾ ಕ್ಷೇತ್ರದ ಶಾಸಕರು ಹಾಗೂ ಮುಡಾದ ಆಡಳಿತ ಮಂಡಳಿಯ ಸದಸ್ಯರಾಗಿದ್ದರು. ಅದನ್ನು ತಡೆಯಲು ಇಲ್ಲವೆ ನಿರಾಕರಿಸುವ ಯಾವುದೇ ಪ್ರಯತ್ನ ಮಾಡಲಿಲ್ಲ.

ಅಂತಿಮವಾಗಿ, ಮುಖ್ಯಮಂತ್ರಿಗಳೇ ಸ್ವತಃ, ವಿವಾದವನ್ನು ಬುಡದಿಂದಲೇ ಕೀಳುವ ಬದಲಿಗೆ, ತಮ್ಮ ಅಹಂ ಪ್ರದರ್ಶಿಸಿ, "ನಮ್ಮ ಭೂಮಿ 62 ಕೋಟಿ ರೂಪಾಯಿ ಬೆಲೆ ಬಾಳುತ್ತದೆ. ಅದನ್ನು ನಮಗೆ ನೀಡಿ, ನಿವೇಶನವನ್ನು ವಾಪಸ್ ಪಡೆಯಲಿ" ಎಂದು ಗುಡುಗಿದ್ದರು.

ತಮ್ಮ ಮನವಿ ಪತ್ರದ ಕೊನೆಯಲ್ಲಿ ಪಾರ್ವತಿಯವರು ಬರೆಯುತ್ತಾರೆ; "ಎಲ್ಲಾ ಪಕ್ಷಗಳ ರಾಜಕೀಯ ನಾಯಕರಲ್ಲಿ ಹಾಗೂ ಸುದ್ದಿ ಮಾಧ್ಯಮಗಳ ಸದಸ್ಯರಲ್ಲಿ ನನ್ನದೊಂದು ವಿನಮ್ರ ಮನವಿ. ರಾಜಕೀಯ ದ್ವೇಷಕ್ಕಾಗಿ ರಾಜಕೀಯ ನಾಯಕರ ಕುಟುಂಬದ ರಾಜಕೀಯದಲ್ಲಿರದ ಮಹಿಳೆಯರನ್ನು ದಯವಿಟ್ಟು ರಾಜಕೀಯಕ್ಕೆ ಎಳೆದು ತಂದು ವಿವಾದಗಳಲ್ಲಿ ಸಿಲುಕಿಸಬೇಡಿ ಹಾಗೂ ಅವರ ಘನತೆ–ಗೌರವಗಳಿಗೆ ಚ್ಯುತಿ ತರಬೇಡಿ"

ಪಾರ್ವತಿಯವರ ಮನೋವೇದನೆ ನಮಗೆ ಅರ್ಥವಾಗುತ್ತದೆ. ಆದರೆ, ಭಾರತದಲ್ಲಿ ಇಂದು ಬಹುತೇಕ ರಾಜಕೀಯ ಕುಟುಂಬಗಳ ಸದಸ್ಯರು ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದಾರೆ. ಸಕ್ರಿಯ ರಾಜಕೀಯದಲ್ಲಿ ಇಲ್ಲದ ಕುಟುಂಬ ಸದಸ್ಯರೂ ಅಕ್ರಮವಾಗಿ ಸಂಪಾದಿಸಿದ ಆಸ್ತಿಗಳ ಫಲವನ್ನು ಅನುಭವಿಸುತ್ತಿದ್ದಾರೆ.

ಆದ್ದರಿಂದ, ಇಂಗ್ಲೆಂಡ್ ಮತ್ತು ಅಮೇರಿಕ ದೇಶಗಳಲ್ಲಿ ಇರುವ ಹಾಗೆ ಭಾರತೀಯ ಸುದ್ದಿ ಸಂಸ್ಥೆಗಳು ಅಥವಾ ತನಿಖಾ ಸಂಸ್ಥೆಗಳು ರಾಜಕೀಯ ಕುಟುಂಬಗಳ ಸದಸ್ಯರ ಜೀವನ ಶೈಲಿ ಹಾಗೂ ವ್ಯಾಪಾರ– ವ್ಯವಹಾರ, ವಹಿವಾಟುಗಳ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಇಲ್ಲಿಯ ತನಕ ಆ ರೀತಿಯ ತನಿಖೆ ನಮ್ಮ ದೇಶದಲ್ಲಿ ನಡೆದಿಲ್ಲ.

ಯಾರೊಬ್ಬರೂ ಬೆಂಗಳೂರಿನ ಸದಾಶಿವನಗರದಲ್ಲಿ ಒಮ್ಮೆ ಅಡ್ಡಾಡಿದರೆ ಸಾಕು, ಇಲ್ಲಿ ಅನೇಕ ರಾಜಕಾರಣಿಗಳು ನೆಲೆಸಿದ್ದಾರೆ. ಇಲ್ಲಿರುವ ವೈಭವೋಪೇತ ಮನೆಗಳು, ವಿಲಾಸಿ ಕಾರುಗಳು ಹಾಗೂ ಐಷಾರಾಮಿ ಜೀವನಶೈಲಿ ನಿಮ್ಮನ್ನು ಆಶ್ಚರ್ಯ ಚಕಿತಗೊಳಿಸುತ್ತವೆ.

ಈ ಎಲ್ಲಾ ಜನ ಸೇವಕರು ಇಷ್ಟೊಂದು ದುಂದು ವೆಚ್ಚವನ್ನು ಯಾವ ರೀತಿ ಭರಿಸುತ್ತಾರೆ ಎಂದು ತಿಳಿದುಕೊಳ್ಳುವುದು ಒಳ್ಳೆಯದಲ್ಲವೇ?

ರಾಜಕಾರಣಿಗಳು, ತಮ್ಮ ಕುಟುಂಬದ ಸದಸ್ಯರು ವಿವಾದಗಳಿಗೆ ಸಿಲುಕಬಾರದು ಎಂಬ ಅಪೇಕ್ಷೆ ಹೊಂದಿದ್ದರೆ, ಅಂತಹ ಕುಟುಂಬಗಳ ಮುಖ್ಯಸ್ಥನು ಅಪಹಾಸ್ಯ ಹಾಗೂ ಸಾರ್ವಜನಿಕ ತನಿಖೆಗೆ ಒಳಗಾಗುವಂತಹ ಕೃತ್ಯಗಳನ್ನು ಮಾಡಬಾರದು.

ನನಗೆ ನರೇಂದ್ರ ಮೋದಿಯವರು, 2012 ರಲ್ಲಿ ಶಶಿ ತರೂರ್ ಅವರ ಆಪ್ತ ಸಂಗಾತಿಯಾಗಿದ್ದ ಹಾಗೂ ನಂತರ ಪತ್ನಿ ಸುನಂದಾ ಪುಷ್ಕರ್ ಅವರನ್ನು "50 ಕೋಟಿಯ ಗೆಳತಿ" (50 crore girlfriend) ಎಂದು ಕರೆದಿದ್ದು ನೆನಪಿಗೆ ಬರುತ್ತದೆ.

ಕೊಚ್ಚಿ ಐಪಿಎಲ್ ತಂಡದಲ್ಲಿ ಸುನಂದಾ ಪುಷ್ಕರ್‌ರವರು 50 ಕೋಟಿ ಮೌಲ್ಯದ 'ಸ್ವೆಟ್' ಬಂಡವಾಳ (sweat equity) ಪಡೆದಿದ್ದಾರೆ ಎಂಬ ವಿಷಯ ಬಹಿರಂಗವಾದ ನಂತರ ಮೋದಿಯವರು ಈ ರೀತಿ ಕರೆದಿದ್ದರು.

ತರೂರ್ ಅವರು ತಾನು ಹಾಗೂ ಸುನಂದಾ ಪುಷ್ಕರ್ ಪ್ರತ್ಯೇಕ ವ್ಯಕ್ತಿಗಳಾಗಿದ್ದು ಹಾಗೂ ಪುಷ್ಕರ್‌ರವರು ಕಾರ್ಯಕ್ರಮ ನಿರ್ವಹಣೆಯಲ್ಲಿ (event management) ಪರಿಣಿತರಾಗಿದ್ದರಿಂದ ಅವರಿಗೆ ಸ್ವೆಟ್ ಈಕ್ವಿಟಿ ನೀಡಲಾಗಿತ್ತು ಎಂದು ತಮ್ಮನ ತಾವೇ ಸಮರ್ಥಿಸಿಕೊಂಡಿದ್ದರು. ಆದರೆ, ಆ ಸಂದರ್ಭದಲ್ಲಿ ಸುನಂದಾ ಪುಷ್ಕರ್ ರಿಯಲ್ ಎಸ್ಟೇಟ್ ಕಂಪನಿಯೊಂದರ ಮಾರಾಟ ನಿರ್ದೇಶಕಿಯಾಗಿದ್ದರು.!

ತರೂರ್ ಅವರಿಗೆ ಐಪಿಎಲ್‌ನಂತಹ ಅತ್ಯಂತ ದುಬಾರಿ ಪಂದ್ಯಗಳಿಗೆ ರಾಜಕೀಯ ಮತ್ತು ವಿವಾದಗಳು ಉಂಟಾಗುವುದು ಸ್ವಾಭಾವಿಕ ಎಂಬುದರ ಬಗ್ಗೆ ಚೆನ್ನಾಗಿ ಅರಿವಿತ್ತು. ಅವರು ತಮ್ಮ ಪತ್ನಿ ಇದರಲ್ಲಿ ಭಾಗವಹಿಸಲು ಬೆಂಬಲ ನೀಡಬಾರದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಅಂತಿಮವಾಗಿ, ಸುನಂದಾರವರು ಸಾರ್ವಜನಿಕವಾಗಿ ತಮ್ಮನ್ನು ತಾವೇ ಸಮರ್ಥಿಸಿಕೊಳ್ಳಬೇಕಾಯಿತು. ಅವರನ್ನು ಆ ದುಸ್ಥಿತಿಗೆ ದೂಡಿದವರ್ಯಾರು? ಅವರ ಪತಿ ಶಶಿ ತರೂರ್.

ನಂತರ, ರಾಬ್ರಿದೇವಿಯವರನ್ನು ಯಾರು ಮರೆಯಲು ಸಾಧ್ಯ ಹೇಳಿ? ಅವರ ಪತಿ, ಬಿಹಾರದ ಮಾಜಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರು ಅಡಿಗೆ ಮನೆಯಿಂದ ರಾಜಕೀಯಕ್ಕೆ ಕರೆತಂದು ಮುಖ್ಯಮಂತ್ರಿಗಾದಿಯ ಮೇಲೆ ಕುಳ್ಳಿರಿಸಿದರು.

ಅವರು ತಮ್ಮ ಪ್ರಥಮ ಭಾಷಣವನ್ನು ಒಂದೇ ಒಂದು ನಿಮಿಷದಲ್ಲಿ ಮಾಡಿ ಮುಗಿಸಿದ ತಕ್ಷಣವೇ ಅಂದು ವಿರೋಧ ಪಕ್ಷದ ನಾಯಕರಾಗಿದ್ದ ಸುಶೀಲ್ ಮೋದಿಯವರು ಲಾಲೂ ಪ್ರಸಾದ್ ಯಾದವ್‌ರವರ ವಿರುದ್ಧ ಟೀಕೆ ಮಾಡಿದರು.

ತಮ್ಮ ಗಂಡನಿಗೆ ಉಂಟಾಗುತ್ತಿದ್ದ ನಿಂದನೆಯನ್ನು ಹೆಚ್ಚುಕಾಲ ಸಹಿಸಲಾಗದ ರಾಬ್ರಿದೇವಿಯವರು, ತಮ್ಮ ಎಲ್ಲಾ ಶಕ್ತಿ–ಸಾಮರ್ಥ್ಯಗಳೊಂದಿಗೆ ಸೆಟೆದು ನಿಂತು, ಒಂದು ಭಾವನಾತ್ಮಕ ಮನವಿ ಮಾಡಿದರು. ಸುಶೀಲ್ ಮೋದಿಯವರನ್ನು ತಮ್ಮ ಹಿರಿಯ ಸಹೋದರ ಎಂದು ಕರೆಯುತ್ತಾ, ತಮ್ಮ ಪತಿಗೆ ಉಂಟಾಗುತ್ತಿದ್ದ ಅಪನಿಂದನೆಯನ್ನು ಕೊನೆಗಾಣಿಸಲು ಹತಾಶ ಪ್ರಯತ್ನ ಮಾಡಿದರು.

ಅವರನ್ನು ಅಂತಹ ದುಸ್ಥಿತಿಗೆ ತಂದವರ್ಯಾರು? ಅವರ ಪತಿ ಲಾಲೂ ಪ್ರಸಾದ್ ಯಾದವ್.

ನಮ್ಮ ರಾಜಕೀಯ ನಾಯಕರು ತಮ್ಮ ಮುಂದಿನ ರಾಜಕೀಯ ಉತ್ತರಾಧಿಕಾರಿಯನ್ನು ಪರಿಚಯಿಸುವ ಸಂದರ್ಭದಲ್ಲಿ ಮಾತ್ರ ತಮ್ಮ ಕುಟುಂಬದವರನ್ನು ಶರವೇಗದಲ್ಲಿ ಮುನ್ನಲೆಗೆ ತರುತ್ತಾರೆ ಇಲ್ಲವೇ ಯಾವುದಾದರೂ ಹಗರಣದಲ್ಲಿ ಜನರ ಅನುಕಂಪ ಗಿಟ್ಟಿಸಲು ತಮ್ಮ ಕುಟುಂಬದವರ ಮೊರೆ ಹೋಗುತ್ತಾರೆ.

ತೀರಾ ಇತ್ತೀಚೆಗೆ, ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಪತ್ನಿ ಸುನೀತಾ ಕೇಜ್ರಿವಾಲ್ ಹಾಗೂ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಪತ್ನಿ ಕಲ್ಪನಾ ಸೊರೇನ್ ತಮ್ಮ ತಮ್ಮ ಪತಿಯಂದಿರ ಕಾಪಾಡಲು ರಾಜಕೀಯವಾಗಿ ಕಾಣಿಸಿಕೊಂಡರು.

ಈಗ ಮುಖ್ಯಮಂತ್ರಿ ಸಿದ್ದರಾಮಯ್ಯನವರ "ಕಪ್ಪು ಚುಕ್ಕೆ ಇಲ್ಲದ ರಾಜಕಾರಣಿ" ಪರಂಪರೆಯನ್ನು ಉಳಿಸಬೇಕಾದರೆ, ಹಾಗೂ ಅವರ ಮಗ ಯತೀಂದ್ರ, ತಮ್ಮ ತಾಯಿಯವರ ನೋವನ್ನು ನಿವಾರಿಸಲು ಅಪೇಕ್ಷಿಸಿದರೆ, ಬಿ.ಎಂ. ಪಾರ್ವತಿಯವರು ಹೇಳಿದಂತೆ ಅವರು ಕೇಳಬೇಕು.

ಪಾರ್ವತಿಯವರು ಮುಡಾದಲ್ಲಿ ಅಕ್ರಮವಾಗಿ ಮಂಜೂರಾಗಿರುವ ನಿವೇಶನಗಳ ಸಂಬಂಧ ಒಂದು **ಸಮಗ್ರವಾದ ತನಿಖೆ** ನಡೆಸಬೇಕೆಂದು ಕೋರಿದ್ದಾರೆ.

ಮುಖ್ಯಮಂತ್ರಿಗಳೇ, ಈಗಲಾದರೂ ದಯವಿಟ್ಟು ಅವರ ಮಾತು ಕೇಳಿ, ಆ ರೀತಿಯ ತನಿಖೆಗೆ ತಕ್ಷಣ ಆದೇಶ ಮಾಡಿ. ಕೊಳಕೆಲ್ಲಾ ಹೊರಗೆ ಬರಲಿ.

ಕೊನೆಯದಾಗಿ; ಮುಡಾದಲ್ಲಿನ ನಂಬಲರ್ಹ ಮೂಲಗಳಿಂದ ತಿಳಿದುಬಂದ ವಿಚಾರವೆಂದರೆ, ಸಿದ್ದರಾಮಯ್ಯನವರ ಪತ್ನಿಯ 14 ನಿವೇಶನಗಳು, ಬೇರೆ ರಾಜಕೀಯ ಪಕ್ಷಗಳ ಸದಸ್ಯರು ಲೂಟಿ ಮಾಡಿರುವ ನೂರಾರು ನಿವೇಶನಗಳ ಮುಂದೆ ಏನೇನು ಅಲ್ಲವಂತೆ.

ತಮ್ಮ ಪತ್ನಿ ಪಾರ್ವತಿ ಸಲಹೆ ನೀಡಿರುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ತನಿಖೆಗೆ ಆದೇಶಿಸಿದ ಕ್ಷಣ ಮಾತ್ರವೇ ಮುಖ್ಯಮಂತ್ರಿಗಳ ರಾಜೀನಾಮೆಗಾಗಿ ಒತ್ತಾಯ ಮಾಡುತ್ತಿರುವ ಪ್ರತಿಪಕ್ಷಗಳ ಕರೆ ಥಟ್ಟನೆ ನಿಂತು ಹೋಗುತ್ತದೆ.

ಮುಖ್ಯಮಂತ್ರಿಗಳು ತಮ್ಮ ಪತ್ನಿಯ ಮಾತನ್ನು ಕೇಳುತ್ತಾರೆಂದು ಆಶಿಸೋಣ.

e-mail: vikram@starofmysore.com

ವಾಹನ ದಟ್ಟಣೆ ಹಿನ್ನೆಲೆ ಬಸ್ ಸಂಚಾರಕ್ಕೆ ನಿರ್ಬಂಧ; ಪ್ರಯಾಣಿಕರ ಪರದಾಟ

ಮೈಸೂರು, ಅ.3(ಎಸ್‌ಬಿಡಿ)– ಮಾಹಿತಿ ಕೊರತೆಯಿಂದ ಗುರುವಾರ ಸಂಜೆ ಸಿಟಿ ಬಸ್‌ಗಾಗಿ ಪ್ರಯಾಣಿಕರು ಪರದಾಡಿದರು.

ದೀಪಾಲಂಕಾರ ವೇಳೆ ವಾಹನ ದಟ್ಟಣೆ ಉಂಟಾಗುವುದರಿಂದ ಇಂದಿನಿಂದ ಅ.11ರವರೆಗೆ ಸಂಜೆ 4ರಿಂದ ನಗರ ಬಸ್ ನಿಲ್ದಾಣಕ್ಕೆ ಬಸ್ ಸಂಚಾರ ನಿರ್ಬಂಧಿಸಿ, ನಾಲ್ಕು ಕಡೆ ತಾತ್ಕಾಲಿಕ ನಿಲ್ದಾಣದ ವ್ಯವಸ್ಥೆ ಮಾಡಲಾಗಿದೆ. ಈ ಬಗ್ಗೆ ಬಸ್ ನಿಲ್ದಾಣದಲ್ಲಿ ಫಲಕ ಅಳವಡಿಸಿ, ಧ್ವನಿವರ್ಧಕದ ಮೂಲಕವೂ ಪ್ರಕಟಿಸಲಾಗುತ್ತಿದೆ. ನಗರ ಪೊಲೀಸರೂ ಹಲವೆಡೆ ಈ ಬಗ್ಗೆ ಸೂಚನಾ ಫಲಕ ಅಳವಡಿಸಿದ್ದಾರೆ. ಆದರೆ ಈ ಬಗ್ಗೆ ಮಾಹಿತಿ ಇಲ್ಲದೆ ನೂರಾರು ಪ್ರಯಾಣಿಕರು ಹೈರಣಾದರು.

ಬಟ್ಟೆ ಅಂಗಡಿಗಳಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳು ಬೆಳಗ್ಗೆಯೇ ಬಂದಿರುತ್ತಾರೆ. ಧಾವಂತದಲ್ಲಿ ಬಸ್ ನಿಲ್ದಾಣದಲ್ಲಿ ಅಳವಡಿಸಿರುವ ಸೂಚನಾ ಫಲಕವನ್ನು ಗಮನಿಸಿಲ್ಲ. ಸಂಜೆ ಕೆಲಸ ಮುಗಿದ ನಂತರ ಬಸ್ ನಿಲ್ದಾಣಕ್ಕೆ ಬಂದಾಗಲೇ ಅವರಿಗೆ ವಿಷಯ ಗೊತ್ತಾಗಿದೆ. ವಾಹನ ದಟ್ಟಣೆ ನಡುವೆ ತಾತ್ಕಾಲಿಕ ಬಸ್ ನಿಲ್ದಾಣಕ್ಕೆ ದೌಡಾಯಿಸಿದರು. ಸಾರಿಗೆ ಸಂಸ್ಥೆ ಹಾಗೂ ಪೊಲೀಸ್ ಇಲಾಖೆಯಿಂದ ಮುಂಚಿತವಾಗಿ ಮಾಹಿತಿ ನೀಡಿದ್ದರೆ ಈ ಅದ್ವಾನವಾಗುತ್ತಿರಲಿಲ್ಲ ಎಂದು ಬಸ್‌ಗಾಗಿ ಅಲೆದಾಡುತ್ತಿದ್ದ ಪ್ರಯಾಣಿಕರು ಅಳಲು ತೋಡಿಕೊಂಡರು. ಈ ಬಗ್ಗೆ ಕೆಎಸ್‌ಆರ್‌ಟಿಸಿ ಮೈಸೂರು ನಗರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್ ಪ್ರತಿಕ್ರಿಯಿಸಿ, ದೀಪಾಲಂಕಾರ ವೇಳೆ ಅರಮನೆ ಸುತ್ತ ಏಕಮುಖ ಸಂಚಾರವಿರುತ್ತದೆ. ಅಲ್ಲದೆ ವಾಹನ ದಟ್ಟಣೆ ವಿಪರೀತವಾಗಿರುತ್ತದೆ. ಆದ್ದರಿಂದ ಈ ಬಾರಿಯೂ ಸಂಜೆಯಿಂದ ತಾತ್ಕಾಲಿಕ ಬಸ್ ನಿಲ್ದಾಣದಿಂದ ಬಸ್ ಕಾರ್ಯಾಚರಣೆ ನಡೆಸಲಾಗುತ್ತದೆ. ಈ ಬಗ್ಗೆ ನಿಲ್ದಾಣದಲ್ಲಿ ಸೂಚನಾ ಫಲಕ ಅಳವಡಿಸುವುದರ ಜೊತೆಗೆ ಧ್ವನಿವರ್ಧಕದಲ್ಲಿ ನಿರಂತರವಾಗಿ ಅನೌನ್ಸ್ ಮಾಡಲಾಗುತ್ತಿದೆ. ದಸರಾ ಮುಗಿಯುವವರೆಗೂ ತಾತ್ಕಾಲಿಕ ಬಸ್ ನಿಲ್ದಾಣ ವ್ಯವಸ್ಥೆಗೆ ಪ್ರಯಾಣಿಕರು ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.



ತಾತ್ಕಾಲಿಕ ಬಸ್ ನಿಲ್ದಾಣಗಳು

(ಅ.3ರಿಂದ 11ರವರೆಗೆ ಸಂಜೆ 4ರಿಂದ ರಾತ್ರಿ 11ರವರೆಗೆ)

ಗಾಂಧಿವೃತ್ತ: ಕೆಆರ್‌ಎಸ್, ಇಲವಾಲ, ಹೂಟಗಳ್ಳಿ, ಬೆಳವಾಡಿ, ಕೂರ್ಗಳ್ಳಿ, ವಿಜಯನಗರ, ಇನ್ಫೋಸಿಸ್, ಮೇಟಗಳ್ಳಿ, ಶ್ರೀರಂಗಪಟ್ಟಣ, ಎನ್.ಆರ್.ಮೊಹಲ್ಲಾ, ಉದಯಗಿರಿ, ಕೆಸರೆ, ಸಿದ್ದಲಿಂಗಪುರ, ನಾಯ್ಡುನಗರ ಕಡೆಗೆ ಸಂಚರಿಸುವ ಬಸ್ಸುಗಳು.

ಬನುಮಯ್ಯ ಕಾಲೇಜು ಹತ್ತಿರ: ಕುವೆಂಪುನಗರ, ಸರಸ್ವತಿಪುರಂ, ರಾಮಕೃಷ್ಣನಗರ, ಬೋಗಾದಿ, ವಿದ್ಯಾರಣ್ಯಪುರಂ, ಜೆ.ಪಿ.ನಗರ, ಶ್ರೀರಾಂಪುರ, ಹೆಚ್.ಡಿ.ಕೋಟೆ, ನಂಜನಗೂಡು, ಕಡಕೊಳ ಕಡೆಗೆ ಸಂಚರಿಸುವ ಬಸ್ಸುಗಳು


ಮಿರ್ಜಾ ರಸ್ತೆ: ಚಾಮುಂಡಿಬೆಟ್ಟ, ಪೊಲೀಸ್ ಲೇಔಟ್, ಆಲನಹಳ್ಳಿ, ಲಲಿತಾದ್ರಿಪುರ, ಸಿದ್ಧಾರ್ಥನಗರ, ಮಹದೇವಪುರ, ಬನ್ನೂರು ಕಡೆಗೆ ಸಂಚರಿಸುವ ಬಸ್ಸುಗಳು.

ಮುಡಾ ನಿವೇಶನ ಹಂಚಿಕೆ ಹಗರಣ

ಲೋಕಾಯುಕ್ತ ತನಿಖೆ ಚುರುಕು

ಮೈಸೂರು, ಅ.3(ಆರ್‌ಕೆ)–ಮುಡಾ ನಿವೇಶನ ಹಂಚಿಕೆ ಪ್ರಕರಣ ಸಂಬಂಧ ಲೋಕಾಯುಕ್ತ ಮೈಸೂರು ಎಸ್ಪಿ ಉದೇಶ್ ನೇತೃತ್ವದ ಅಧಿಕಾರಿಗಳು ತನಿಖೆ ತೀವ್ರ ಗೊಳಿಸಿದ್ದಾರೆ. ಇಂದು ದೂರುದಾರ ಸ್ನೇಹಮಯಿ ಕೃಷ್ಣರನ್ನು ವಿಚಾರಣೆಗೆ ಕರೆಯಲಾಗಿತ್ತಾದರೂ, ಇಂದೇ ಇಡಿ ಅಧಿಕಾರಿಗಳೂ ಕರೆದಿದ್ದರಿಂದ ಬೆಂಗಳೂರಿಗೆ ಕೃಷ್ಣ ತೆರಳಿದ್ದರಿಂದ ಮುಡಾ ಕಚೇರಿಯಿಂದ ನಿವೇಶನ ಹಂಚಿಕೆ ಸಂಬಂಧ ದಾಖಲೆ ಸಲ್ಲಿಸುವಂತೆ ಲೋಕಾಯುಕ್ತ ಅಧಿಕಾರಿಗಳು ಪತ್ರ ಮುಖೇನ ಕೋರಿದ್ದಾರೆ. ಮತ್ತೊಂದೆಡೆ ಈಗಾಗಲೇ ಕೃಷ್ಣ ಸಲ್ಲಿಸಿರುವ ನಿವೇಶನ ಹಂಚಿಕೆ ದಾಖಲೆ ಪ್ರತಿ, ಲಿಖಿತ ಮಾಹಿತಿಯನ್ವಯ ಎಸ್ಪಿ ಕಚೇರಿ ಸಭಾಂಗಣದಲ್ಲಿ ಇಬ್ಬರು ಡಿವೈಎಸ್ಪಿಗಳು, ಇಬ್ಬರು ಇನ್ಸ್‌ಪೆಕ್ಟರ್‌ಗಳು ಪರಿಶೀಲಿಸಿ ಪ್ರಮುಖ ಅಂಶಗಳನ್ನು ಪಟ್ಟಿ ಮಾಡಿಕೊಂಡರು. ನಾಳೆ (ಅ.4) ದೂರುದಾರನನ್ನು ಕಚೇರಿಗೆ ಕರೆಸಿಕೊಂಡು ಹೇಳಿಕೆ ಪಡೆಯಲಿರುವ ಪೊಲೀಸರು, ನಂತರ ಪ್ರಕರಣದ ಆರೋಪಿಗಳಿಗೆ ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡುವ ಸಾಧ್ಯತೆ ಇದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com


ದಸರಾ ವಿಶೇಷ 2024

ಮೈಸೂರು ದಸರಾ ಮಹೋತ್ಸವ-2024 ಇಂದಿನ ಕಾರ್ಯಕ್ರಮಗಳು

ಬೆಳಗ್ಗೆ 7.00	ಪಾರಂಪರಿಕ ಜಾವಾ ಮೋಟಾರ್ ಬೈಕ್ ರ್ಯಾಲಿ, ಉದ್ಘಾಟನೆ : ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ, ಪ್ರವಾಸೋದ್ಯಮ ಇಲಾಖೆ ಸಚಿವ ಹೆಚ್.ಕೆ. ಪಾಟೀಲ್, ಸ್ಥಳ: ರಂಗಾಚಾರ್ಲು ಪುರಭವನ ಆವರಣ
ಬೆಳಗ್ಗೆ 7.30	ರಂಗೋಲಿ ಸ್ಪರ್ಧೆ, ಉದ್ಘಾಟನೆ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವೆ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್, ಸ್ಥಳ: ಮೈಸೂರು ಅರಮನೆ ಒಳ ಆವರಣ
ಬೆಳಗ್ಗೆ 9.30	ಮಕ್ಕಳ ದಸರಾ ಕಲಾಥನ್, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ
ಬೆಳಗ್ಗೆ 10.00	ಚಲನಚಿತ್ರ ಪ್ರದರ್ಶನ ಹಾಗೂ ಸಿನಿಮಾ ಫೋಟೋ ಪ್ರದರ್ಶನ, ಉದ್ಘಾಟನೆ : ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸ್ಥಳ: ಐನಾಕ್ಸ್ ಸಿನಿಮಾ ಮಂದಿರ, ಮಾಲ್ ಆಫ್ ಮೈಸೂರು.
ಬೆಳಗ್ಗೆ 10.00	ಮಹಿಳಾ ದಸರಾ-2024, ಉದ್ಘಾಟನೆ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವೆ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್, ಸ್ಥಳ: ಜೆ.ಕೆ. ಮೈದಾನ.
ಸಂಜೆ 5.00	ಯೋಗ ದಸರಾ, ಯೋಗ ನೃತ್ಯರೂಪಕ ಮನರಂಜನಾ ಕಾರ್ಯಕ್ರಮ, ಉದ್ಘಾಟನೆ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ಸ್ಥಳ: ಅಲ್ಯೂಮ್ನಿ ಅಸೋಸಿಯೇಷನ್ ಸಭಾ ಭವನ, ವೈದ್ಯಕೀಯ ಮಹಾವಿದ್ಯಾಲಯ
	ಸಾಂಸ್ಕೃತಿಕ ಕಾರ್ಯಕ್ರಮಗಳು
	ಅರಮನೆ ಆವರಣ
ಸಂಜೆ 4.00	ನಾದಸ್ವರ- ಎಂ.ಎನ್. ಗಣೇಶ್ ಮತ್ತು ತಂಡ
ಸಂಜೆ 4.30	ತತ್ವಪದ ಗಾಯನ -ಶಿವಶರಣ್ಯ ಎಸ್. ಸ್ವಾಮಿ ಮತ್ತು ತಂಡ
ಸಂಜೆ 5.00	ಕರ್ನಾಟಕ ಮತ್ತು ಹಿಂದೂಸ್ಥಾನಿ ಸಂಗೀತ-ಭಾರತೀಯ ವಿದ್ಯಾಭವನ (ಕಲಾಭಾರತಿ)
ಸಂಜೆ 5.30	ನೃತ್ಯರೂಪಕ : ನವದುರ್ಗಾ ವೈಭವ - ಕನ್ನಡ ಕಲಾಲಯ ಟ್ರಸ್ಟ್ - ವಿದುಷಿ ಎಲ್. ಪ್ರಿಯಾಂಕ
ಸಂಜೆ 6.00	ಕ್ಲಾರಿಯೋನೆಟ್ - ಸ್ಯಾಕ್ಸೋಫೋನ್ ಜುಗಲ್‌ಬಂದಿ-ಪಂಡಿತ್ ನರಸಿಂಹಲು ವಡವಾಟಿ ಮತ್ತು ವಿದ್ವಾನ್ ಕದ್ರಿ ರಮೇಶ್‌ನಾಥ್
ಸಂಜೆ 7.00	ಶರಣ್ಯ ನಟರಾಜ್ ಮತ್ತು ತಂಡದಿಂದ ಕಥಕ್
ಸಂಜೆ 7.10	ಜನಪದ ಸಂಭ್ರಮ-ಎಲ್. ಜನಾರ್ಧನ್ (ಜನ್ನಿ) ಮತ್ತು ತಂಡ
ರಾತ್ರಿ 8.40	ಕರ್ನಾಟಕ ಶಾಸ್ತ್ರೀಯ ವಾದ್ಯವೃಂದ -ಅಗಮ್ ಬ್ಯಾಂಡ್ -ಹರೀಶ್ ಶಿವರಾಮ್ ಕೃಷ್ಣನ್
	ಜಗನ್ಮೋಹನ ಅರಮನೆ
ಸಂಜೆ 5.00	ಶ್ರೀ ಭಕ್ತ ಕನಕದಾಸರ ಗೊರವರ ಕುಣಿತ ಕಲಾಸಂಘ, ಚಾಮರಾಜನಗರ ಅವರಿಂದ ಗೊರವರ ಕುಣಿತ
ಸಂಜೆ 5.30	ಹೆಬ್ಬಾಡಿ ಮಹದೇವ ಮತ್ತು ತಂಡ, ಮಂಡ್ಯ ಅವರಿಂದ ತಬಲ ತರಂಗ
ಸಂಜೆ 6.00	ಶ್ರುತಿ ನೃತ್ಯಾಲಯ ನೃತ್ಯ ಶಾಲೆ (ವಿದುಷಿ ಶ್ವೇತ ಪಿ. ಚಂದ್ರಶೇಖರ್) ಅವರಿಂದ ನೃತ್ಯರೂಪಕ
ಸಂಜೆ 7.00	ಲಯನಾದ ತರಂಗ (ವಿದ್ವಾನ್ ಎಂ.ಆರ್. ಹನುಮಂತರಾಜು, ಮೈಸೂರು) ಅವರಿಂದ ಲಯವಾದ್ಯ ವಾದನ
ರಾತ್ರಿ 8.00	ಎಂ.ಸಿ. ಸುಜೇಂದ್ರ ಬಾಬು, ಕಲ್ಪಶ್ರೀ ಪ್ರದರ್ಶಕ ಕಲೆಗಳ ಕೇಂದ್ರ, ರಾಮನಗರ ಅವರಿಂದ ಕುಚಿಪುಡಿ ನೃತ್ಯ
ರಾತ್ರಿ 9.00	ದಲಿತ ಸಾಹಿತ್ಯ ಕಲಾವಿದರ ಒಕ್ಕೂಟ (ಕೆ.ಎನ್. ನಾಗೇಶ್) ಅವರಿಂದ ಸುಗಮ ಸಂಗೀತ
	ಕಲಾಮಂದಿರ
ಸಂಜೆ 5.00	ಜವರನಾಯಕ ಮತ್ತು ತಂಡ, ಹುಣಸೂರು ಅವರಿಂದ ವೀರಗಾಸೆ
ಸಂಜೆ 5.30	ಟಿ. ಹರ್ಷಿತಾ ಮತ್ತು ತಂಡ, ಮೈಸೂರು ಅವರಿಂದ ಮಹಿಳಾ ಡೊಳ್ಳು ಕುಣಿತ
ಸಂಜೆ 6.00	ಎಸ್.ಸುಶ್ಮಿತಾ ಮತ್ತು ತಂಡ, ಮೈಸೂರು ಅವರಿಂದ ಭರತನಾಟ್ಯ
ಸಂಜೆ 6.45	ಸರಸ್ವತಿ ಸಂಗೀತ ಕಲಾಸಂಸ್ಥೆ, ಹೊಸಪೇಟೆ (ಜಿ. ಗಾಯತ್ರಿ) ಅವರಿಂದ ಕೀರ್ತನ ವಾದನ
ಸಂಜೆ 7.30	ಪಿ. ನಿತ್ಯಾ ಮತ್ತು ತಂಡ, ಬೆಂಗಳೂರು ಅವರಿಂದ ಭರತನಾಟ್ಯ
ರಾತ್ರಿ 8.15	ರುಮೇಲಾ ಮುಖ್ಯೋಪಾಧ್ಯಾಯ ಟ್ರಸ್ಟ್, ಬೆಂಗಳೂರು ಅವರಿಂದ ಕಥಕ್.
ರಾತ್ರಿ 9.00	ಅರಭಿ ಸಂಸ್ಕೃತ ಟ್ರಸ್ಟ್, ಮೈಸೂರು (ಎನ್. ಕುಲದೀಪ್) ಅವರಿಂದ ಭಾವಗೀತೆ
	ಗಾನಭಾರತಿ, ಕುವೆಂಪುನಗರ
ಸಂಜೆ 5.00	ರವೀಂದ್ರ ಮತ್ತು ತಂಡದಿಂದ ನಾದಸ್ವರ
ಸಂಜೆ 5.30	ನಾಗರಾಜ್ ರಂಗಣ್ಣನವರ್ ಮತ್ತು ತಂಡ, ಹಾವೇರಿ ಅವರಿಂದ ಕರಗ ನೃತ್ಯ
ಸಂಜೆ 6.00	ಪಿ.ಎನ್. ನಿಹಾಲ್ ಮತ್ತು ತಂಡ, ಮೈಸೂರು ಅವರಿಂದ ಕೊಳಲು ವಾದನ
ಸಂಜೆ 7.00	ಸ್ವರವಿ ಕಲಾಕೇಂದ್ರ, ಬೆಂಗಳೂರು ಅವರಿಂದ ಭರತನಾಟ್ಯ 'ಕಲರವ'
ರಾತ್ರಿ 8.00	ವಿದುಷಿ ಚಂದ್ರಿಕಾ ರಾಜಾರಾಂ, ಬೆಂಗಳೂರು ಅವರಿಂದ ಭಾವಗೀತೆ
ರಾತ್ರಿ 9.00	ಯೋಗೇಶ್ ಕುಮಾರ್ ಮತ್ತು ಸ್ನೇಹ ನಾರಾಯಣ್, ಬೆಂಗಳೂರು ಅವರಿಂದ ಭರತನಾಟ್ಯ
	ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ
ಸಂಜೆ 5.00	ಎಸ್.ಎಸ್. ಮಂಜು ಮತ್ತು ತಂಡ, ಮೈಸೂರು ಅವರಿಂದ ವೀರಗಾಸೆ
ಸಂಜೆ 5.30	ಆರ್.ರಾಜ್‌ಕುಮಾರ್ ಮತ್ತು ತಂಡ, ಬೆಂಗಳೂರು ಅವರಿಂದ ಡೊಳ್ಳು ವಾದನ
ಸಂಜೆ 6.00	ಪಿ.ಎಂ. ಬ್ರಹ್ಮೇಶ್ ಮತ್ತು ತಂಡ, ಮೈಸೂರು ಅವರಿಂದ ಭಕ್ತಿಗೀತೆಗಳು
ಸಂಜೆ 7.00	ಮಂಜುಳಾ ಮಹಿಳಾ ಕಲಾತಂಡ, ಮಂಡ್ಯ (ಮಂಜುಳ) ಅವರಿಂದ ಕ್ರಾಂತಿಕಾರಿ ಗೀತೆಗಳು
ರಾತ್ರಿ 8.00	ಜ್ಞಾನಶ್ರೀ ಕೇಸರಿ ಮತ್ತು ತಂಡ, ಮೈಸೂರು ಅವರಿಂದ ಭರತನಾಟ್ಯ
ರಾತ್ರಿ 9.00	ನಾಗರಾಜ ಗಂತಿ ಮತ್ತು ತಂಡ, ವಿಜಯನಗರ ಅವರಿಂದ ಜನಪದ ಕೈಚಳಕ
	ಚಿಕ್ಕಗಡಿಯಾರ
ಸಂಜೆ 5.00	ಟಿ.ಎಂ. ಕೃಷ್ಣಮೂರ್ತಿ ಮತ್ತು ತಂಡದಿಂದ ಕಂಸಾಳೆ
ಸಂಜೆ 5.30	ಬಿ.ಸಿ. ಅಮಿತ್ ಮತ್ತು ತಂಡದಿಂದ ಡೊಳ್ಳು ಕುಣಿತ
ಸಂಜೆ 6.00	ಹೊಂಗಿರಣ ತಂಡ, ಉತ್ತರ ಕನ್ನಡ ಅವರಿಂದ ಪಪ್ಪೆಟ್ ಶೋ
ಸಂಜೆ 7.00	ಹೆಚ್.ಕಾಂತರಾಜು ಮತ್ತು ತಂಡ, ಚಿತ್ರದುರ್ಗ ಅವರಿಂದ ಉರುಮಾ (ಅರೆ ವಾದ್ಯ)
ರಾತ್ರಿ 8.00	ಕೆಮ್ಮರೆ ಮಲ್ಲಿಕಾರ್ಜುನ ಮತ್ತು ತಂಡ, ತುಮಕೂರು ಅವರಿಂದ ಜಾನಪದ ಗೀತೆಗಳು
ರಾತ್ರಿ 9.00	ಶ್ರೀ ಶರಣ ಬಸವೇಶ್ವರ ಸಾಂಸ್ಕೃತಿಕ ಭಜನಾ ಸಂಘ, ವಿಜಯನಗರ ಅವರಿಂದ ನೃತ್ಯ ರೂಪಕ
	ಪುರಭವನ
ಬೆಳಗ್ಗೆ 10.30	ಅಹಿಂದ ಹಕ್ಕುಗಳ ಹೋರಾಟ ವೇದಿಕೆ, ಮೈಸೂರು ಅವರಿಂದ ಪೌರಾಣಿಕ ನಾಟಕ 'ಕುರುಕ್ಷೇತ್ರ'
ಮ. 3.00	ಎಂ.ಎನ್. ಸುರೇಶ್ ಮತ್ತು ತಂಡ, ಬೆಂಗಳೂರು ಅವರಿಂದ 'ಮುದುಕನ ಮದುವೆ' ನಾಟಕ
ಸಂಜೆ 6.00	ರಂಗ ಪನಟ ಉಬ್ಬೈರು, ಮೈಸೂರು (ಯು.ಎಸ್. ರಾಮಣ್ಣ) ತಂಡದಿಂದ ವಿಶ್ವಜ್ವಾಲೆ ನಾಟಕ
	ಕಿರು ರಂಗಮಂದಿರ, ಕಲಾಮಂದಿರ ಆವರಣ
ಮಧ್ಯಾಹ್ನ 2.00	ಗೌರಿ ಭಾರದ್ವಾಜ್ ಮತ್ತು ತಂಡ, ಬೆಂಗಳೂರು ಅವರಿಂದ ಭರತನಾಟ್ಯ
ಮಧ್ಯಾಹ್ನ 3.00	ದೃಶ್ಯ ಕಾವ್ಯ, ಬೆಂಗಳೂರು, (ನಂಜುಂಡೇಗೌಡ) ತಂಡದಿಂದ ನಾಟಕ 'ಮಾಯಾ ಬೇಟೆ'
ಸಂಜೆ 7.00	ಇನ್‌ಫಾರ್ಮ್ ಥಿಯೇಟರ್, ಬೆಂಗಳೂರು (ವಿನೀತ್‌ಕುಮಾರ್) ತಂಡದಿಂದ 'ಗೋಡೆ' ನಾಟಕ ಪ್ರದರ್ಶನ
	ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ
ಸಂಜೆ 5.30	ಶ್ವಾಲಿಗೆಪ್ಪ ಮತ್ತು ತಂಡ, ವಿಜಯನಗರ ಅವರಿಂದ ರಂಗ ಗೀತೆಗಳು
ಸಂಜೆ 6.30	ಆರ್.ದಯಾಕರ್ ಮತ್ತು ತಂಡ, ಬೆಂಗಳೂರು ಅವರಿಂದ ವಯೋಲಿನ್ ಮತ್ತು ಸಿತಾರ್ ವಾದನ
ರಾತ್ರಿ 7.30	ರಂಗಜಲಿ ಸಾಂಸ್ಕೃತಿಕ ಟ್ರಸ್ಟ್, ಮೈಸೂರು (ಎಸ್.ಡಿ. ದಯಾನಂದ) ಅವರಿಂದ 'ಒಂದು ಹಳ್ಳಿಯ ಕಥೆ' ನಾಟಕ ಪ್ರದರ್ಶನ
	ನಟನ ರಂಗಮಂದಿರ, ರಾಮಕೃಷ್ಣನಗರ
ಸಂಜೆ 5.00	ಹನಮಂತ್ರಾಯ ಭೀಮರಾಯ ಯಲಗೋಡ, ವಿಜಯಪುರ ಅವರಿಂದ ಸುಗಮ ಸಂಗೀತ
ಸಂಜೆ 6.30	ಎಂ.ಎಸ್. ಲಕ್ಷ್ಮಿ ಕಾರಂತ್ ಮತ್ತು ತಂಡ, ಬೆಂಗಳೂರು ಅವರಿಂದ ನಾಟಕ 'ಅಧಿನಾಯಕ'
	ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು
ಸಂಜೆ 5.00	ಬಿ.ಆರ್. ಪುನೀತ್ ಕುಮಾರ್ ಮತ್ತು ತಂಡ, ಮಂಡ್ಯ ಅವರಿಂದ ನಾದಸ್ವರ ಲಯತರಂಗ
ಸಂಜೆ 5.30	ಕರ್ನಾಟಕ ಬಂಜಾರ ಕಲಾ ಮತ್ತು ಸಾಂಸ್ಕೃತಿಕ ಸಂಘ, ಹಾವೇರಿ (ಗಿರಿಜವ್ವ ನಾಗಪ್ಪ ಲಮಾಣಿ ಮತ್ತು ತಂಡ) ಅವರಿಂದ ಲಂಬಾಣಿ ನೃತ್ಯ
ಸಂಜೆ 6.00	ಶಿವು ಭಜಂತ್ರಿ ಮತ್ತು ತಂಡ, ಗದಗ್ ಅವರಿಂದ ತಾಳವಾದ್ಯ
ಸಂಜೆ 7.00	ಎನ್.ದೇವಿಕಾ ಮತ್ತು ತಂಡ, ಮೈಸೂರು ಅವರಿಂದ ಭರತನಾಟ್ಯ
ಸಂಜೆ 7.30	ಎಸ್. ಸುನೀತಾ ಮತ್ತು ತಂಡ, ಮೈಸೂರು ಅವರಿಂದ ಭರತನಾಟ್ಯ
ರಾತ್ರಿ 8.00	ಸ್ಪಂದನ ಮಹಿಳಾ ಕಲಾತಂಡ (ವಸಂತ ಹೊನ್ನೇನಹಳ್ಳಿ ಮತ್ತು ತಂಡ, ಮೈಸೂರು) ಅವರಿಂದ ಜಾನಪದ ಗೀತೆಗಳು
	ವನರಂಗ, ರಂಗಾಯಣ ನವರಾತ್ರಿ ಜನಪದ ರಂಗ ಉತ್ಸವ
ಸಂಜೆ 6.30	ಸಂಗಮೇಶ್ವರ ನಾಟಕ ಮಂಡಳಿ, ಸಂಗನಕಲ್ಲು, ಬಳ್ಳಾರಿ ಅವರಿಂದ 'ರೇಣುಕಾ ಮಹಾತ್ಮೆ' ಬಯಲಾಟ

ಪ್ರತಿದಿನದ ಆಕರ್ಷಣೆ

ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಕುಪ್ಪಣ್ಣ ಪಾರ್ಕ್	ಬೆಳಗ್ಗೆ 9 ರಿಂದ ರಾತ್ರಿ 8.30
ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಲಿಂಗಾಂಬುದಿ ಕೆರೆ	ಬೆಳಗ್ಗೆ 9 ರಿಂದ ರಾತ್ರಿ 7
ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಕುಕ್ಕರಹಳ್ಳಿ ಕೆರೆ	ಬೆಳಗ್ಗೆ 9 ರಿಂದ ರಾತ್ರಿ 7
ಪುಸ್ತಕ ಮೇಳ, ಸ್ಥಳ: ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ	ಬೆಳಗ್ಗೆ 10 ರಿಂದ ರಾತ್ರಿ 7
ದಸರಾ ವಸ್ತುಪ್ರದರ್ಶನ, ಸ್ಥಳ: ವಸ್ತುಪ್ರದರ್ಶನ ಮೈದಾನ	ಮಧ್ಯಾಹ್ನ 2.30 ರಿಂದ ರಾತ್ರಿ 8.30
ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ	ಬೆಳಗ್ಗೆ 11 ರಿಂದ ರಾತ್ರಿ 9
ರೈಲ್ ಮ್ಯೂಸಿಯಂ	ಬೆಳಗ್ಗೆ 10 ರಿಂದ ರಾತ್ರಿ 8

ಶೀಘ್ರವೇ ಇಮ್ಮಾವಿನಲ್ಲಿ ಚಿತ್ರನಗರಿ ನಿರ್ಮಾಣ

ದಸರಾ ಚಲನ ಚಿತ್ರೋತ್ಸವ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ



ದಸರಾ ಮಹೋತ್ಸವ ಪ್ರಯುಕ್ತ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಆಯೋಜಿಸಿದ್ದ ದಸರಾ ಚಲನಚಿತ್ರೋತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಚಿವರಾದ ಕೆ.ವೆಂಕಟೇಶ್, ಕೆ.ಹೆಚ್.ಮುನಿಯಪ್ಪ, ಚಿತ್ರ ನಿರ್ದೇಶಕ ರಾಜೇಂದ್ರ ಸಿಂಗ್‌ಬಾಬು, ನಟ ರಮೇಶ್ ಅರವಿಂದ್, ಹಾಸ್ಯನಟ ಸಾಧುಕೋಕಿಲ, ನಟಿಯರಾದ ಸಪ್ತಮಿ ಗೌಡ, ಹಿರಣ್ಯ ಶೆಟ್ಟಿ, ಅಕ್ಷತಾ ಬೋಪಯ್ಯ, ಶಾಸಕರಾದ ಡಿ.ರವಿಶಂಕರ್, ದರ್ಶನ್ ಧ್ರುವನಾರಾಯಣ್, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ ಉಪಸ್ಥಿತರಿದ್ದರು.

ಮೈಸೂರು, ಅ.3(ಆರ್‌ಕೆ)- ಮೈಸೂರು ತಾಲೂಕು ಇಮ್ಮಾವು ಬಳಿ 160 ಎಕರೆ ಪ್ರದೇಶದಲ್ಲಿ ಚಿತ್ರನಗರಿ(ಫಿಲ್ಮ್ ಸಿಟಿ) ನಿರ್ಮಾಣವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ದಸರಾ ಮಹೋತ್ಸವ ಪ್ರಯುಕ್ತ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಆಯೋಜಿಸಿದ್ದ ದಸರಾ ಚಲನ ಚಿತ್ರೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ನಾನು ಈ ಹಿಂದೆ ಸಿಎಂ ಆಗಿದ್ದಾಗಲೇ ಮೈಸೂರಲ್ಲಿ ಸಿನಿಮಾ ನಗರಿ ಮಾಡಲು ನಂಜನಗೂಡು ಸಮೀಪದ ಕಡಕೊಳ ಬಳಿಯ ಇಮ್ಮಾವು ಗ್ರಾಮದಲ್ಲಿ 110 ಎಕರೆ ಪ್ರದೇಶದ ಭೂಮಿ ನೀಡಲಾಗಿತ್ತು. ಈಗ ಹೆಚ್ಚುವರಿಯಾಗಿ 50 ಎಕರೆ ಜಾಗ ನೀಡಲಾಗಿದೆ ಎಂದರು.

ಮುಂದಿನ ಮೂರು ವರ್ಷದೊಳಗೆ ಚಿತ್ರನಗರಿ ನಿರ್ಮಿಸಿ ಲೋಕಾರ್ಪಣೆ ಮಾಡುತ್ತೇವೆ. ಖಾಸಗಿ-ಸಾರ್ವಜನಿಕ ಸಹಭಾಗಿತ್ವದಲ್ಲಿ ಯೋಜನೆ ಅನುಷ್ಠಾನ ಮಾಡಲು ಟೆಂಡರ್ ಪ್ರಕ್ರಿಯೆ ಆರಂಭವಾಗಲಿದೆ ಎಂದ ಸಿದ್ದರಾಮಯ್ಯ, ದಿನದಿಂದ ದಿನಕ್ಕೆ ಕಳೆಗುಂದುತ್ತಿರುವ ಕನ್ನಡ ಚಿತ್ರರಂಗ ಬೆಳೆದು ಮತ್ತಷ್ಟು ಜನಪ್ರಿಯವಾಗಬೇಕು. ಅದಕ್ಕೆ ಬೇಕಾದ ಅಗತ್ಯ ಸೌಲಭ್ಯ ನೀಡಲು ಸರ್ಕಾರ ಬದ್ಧವಾಗಿದೆ ಎಂದರು.

ಕನ್ನಡ ಸಿನಿಮಾಗಳಿಗೆ ಪ್ರೇಕ್ಷಕರ ಕೊರತೆ ಹೆಚ್ಚಾಗುತ್ತಿದೆ. ಸಿನಿರಸಿಕರು ಚಿತ್ರಮಂದಿರಗಳಿಗೆ ತೆರಳಿ ಕನ್ನಡ ಸಿನಿಮಾಗಳನ್ನು ನೋಡಿ ಪ್ರೋತ್ಸಾಹಿಸಬೇಕು. ಕನ್ನಡ ಚಿತ್ರರಂಗದ ಹಿರಿಯ ಕಲಾವಿದರನ್ನು ಸ್ಮರಿಸಿದ ಮುಖ್ಯಮಂತ್ರಿಗಳು, ಚಿತ್ರ ನಿರ್ಮಾಪಕ, ನಟರಾಗಿದ್ದ ದ್ವಾರಕೀಶ್ ಅವರು ಕನ್ನಡ ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ದ್ವಾರಕೀಶ್ ಸ್ಮರಣಾರ್ಥ ದಸರಾ ಚಲನ ಚಿತ್ರೋತ್ಸವವನ್ನು ನಡೆಸುತ್ತಿರುವುದು ಸಂತಸ ತಂದಿದೆ ಎಂದರು.

ಡ್ಯಾನ್ಸ್ ರಾಜಾ ಡ್ಯಾನ್ಸ್ ಚಿತ್ರದ ಚಿತ್ರೀಕರಣದ ವೇಳೆ ನಾನು ಮತ್ತು ದ್ವಾರಕೀಶ್ ಒಟ್ಟಿಗೇ ಹೆಲಿಕಾಪ್ಟರ್‌ನಲ್ಲಿ ಮೈಸೂರಿಗೆ ಬಂದಿದ್ದೆವು. ಅವರ ಮಕ್ಕಳು ಸಹ ತಂದೆಯಂತೆ ಈ ಕ್ಷೇತ್ರಕ್ಕೆ ಉತ್ತಮ ಸೇವೆ ಸಲ್ಲಿಸುವಂತಾಗಲಿ ಎಂದ ಸಿದ್ದರಾಮಯ್ಯ, ಅಕ್ಟೋಬರ್ 10ರವರೆಗೆ ನಡೆಯುವ ಚಲನಚಿತ್ರೋತ್ಸವದಲ್ಲಿ ರಾಜ್ಯ, ದೇಶ-ವಿದೇಶಗಳ ಪ್ರಶಸ್ತಿ ಪುರಸ್ಕೃತ ಚಲನ ಚಿತ್ರಗಳು ಪ್ರದರ್ಶನಗೊಳ್ಳಲಿದ್ದು ಸಾರ್ವಜನಿಕರು ಈ ಅವಕಾಶ ಬಳಸಿಕೊಂಡು ಹಳೆಯ ಹಾಗೂ ಹೊಸ ಸಿನಿಮಾಗಳನ್ನು ವೀಕ್ಷಿಸುವಂತೆ ತಿಳಿಸಿದರು.



ಜಂಬುಪುರದ ಉದ್ಯಮಿ, ಸಿನಿಮಾ ನಿರ್ಮಾಪಕರಾದ ಎಂ.ಮಹದೇವೇಗೌಡ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತಮ ನಿರ್ಮಾಪಕ ಪ್ರಶಸ್ತಿ ನೀಡಿ, ಸನ್ಮಾನಿಸಿದರು.

ಚಿತ್ರ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಮಾತನಾಡಿ, ಚಿತ್ರ ನಗರಿ ನಿರ್ಮಾಣವಾಗುವುದರಿಂದ ಭಾರತೀಯ ಚಿತ್ರರಂಗವೇ ಮೈಸೂರಿನತ್ತ ಮುಖ ಮಾಡಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಯತ್ನದಿಂದ ಈ ಯೋಜನೆ ಸಾಕಾರವಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ದ್ವಾರಕೀಶ್ ಅವರ ಪುತ್ರರಾದ ಯೋಗೇಶ್ ದ್ವಾರಕೀಶ್, ಗಿರೀಶ್ ದ್ವಾರಕೀಶ್ ಸೇರಿದಂತೆ ಕನ್ನಡ ಚಿತ್ರರಂಗದ ಸಾಧಕರನ್ನು ಸನ್ಮಾನಿಸಿದ ಮುಖ್ಯಮಂತ್ರಿಗಳು, ಚಿತ್ರರಂಗ ಕುರಿತ ಕಿರುಚಿತ್ರ ಮತ್ತು ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಚಿವರಾದ ಕೆ.ವೆಂಕಟೇಶ್, ಕೆ.ಹೆಚ್.ಮುನಿಯಪ್ಪ, ನಾಯಕ ನಟ ರಮೇಶ್ ಅರವಿಂದ್, ಸಪ್ತಮಿ ಗೌಡ, ಹಿರಣ್ಯ ಶೆಟ್ಟಿ, ಅಕ್ಷತಾ ಬೋಪಯ್ಯ, ಶಾಸಕರಾದ ಡಿ.ರವಿಶಂಕರ್, ದರ್ಶನ್ ಧ್ರುವನಾರಾಯಣ್, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ದಸರಾ ಆಹಾರ ಮೇಳ ಉದ್ಘಾಟನೆ

108 ಮಳಿಗೆಗಳಲ್ಲಿ 130 ಬಗೆಯ ತಿಂಡಿ-ತಿನಿಸು ಲಭ್ಯ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಹಾರ ಮೇಳಕ್ಕೆ ಚಾಲನೆ ನೀಡಿದರು.

ಮೈಸೂರು, ಅ.3(ಜಿಎ)-ಮೈಸೂರು ದಸರಾ ಮಹೋತ್ಸವದಲ್ಲಿ ಸಾರ್ವಜನಿಕರಿಗೆ ಮತ್ತು ಪ್ರವಾಸಿಗರಿಗೆ ಅತ್ಯಂತ ಪ್ರಿಯವಾದದು ಆಹಾರ ಮೇಳ, ಪ್ರಮುಖ ಆಕರ್ಷಣೆಗಳಲ್ಲಿ ಆಹಾರ ಪ್ರಿಯರ ನೆಚ್ಚಿನ ತಾಣವಾದ ಆಹಾರ ಮೇಳವು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಗುರುವಾರ ಆರಂಭವಾಗಿದ್ದು, ದೇಶದ ವಿವಿಧ ಬಗೆಯ ಆಹಾರ ಬಡಿಸಲು ಸಜ್ಜಾಗಿದೆ.



ಉದ್ಘಾಟನೆಗೆ ಕೆಲವೇ ಕ್ಷಣ ಇರುವಾಗಲೂ ತರಾತುರಿಯಲ್ಲಿ ಸಿದ್ಧಗೊಳ್ಳುತ್ತಿರುವ ಮಳಿಗೆಗಳು.

ಆಹಾರ ಮೇಳವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ, ನಂತರ ಮಾತನಾಡಿ, ಇಂದಿನಿಂದ 9 ದಿನಗಳ ಕಾಲ ನವರಾತ್ರಿ ಹಾಗೂ 10ನೇ ದಿನ ವಿಜಯದಶಮಿ ನಡೆಯುತ್ತದೆ. ನಾಡಹಬ್ಬ ದಸರಾ ಉದ್ದೇಶ ಶಿಷ್ಟರ ರಕ್ಷಣೆ ಹಾಗೂ ದುಷ್ಟರಿಗೆ ಶಿಕ್ಷೆ ನೀಡುವುದಾಗಿದೆ. ಮೈಸೂರು ದಸರಾ ಜನರ ಹಬ್ಬವಾಗಿದ್ದು, ಹೆಚ್ಚು ಜನರು ಭಾಗವಹಿಸುವುದೇ ಅದ್ದೂರಿ ದಸರಾ ಎಂದರು.

ಮೈಸೂರು ದಸರಾ ಜನರ ಹಬ್ಬ. ದೇಶ ವಿದೇಶಗಳಿಂದ ಲಕ್ಷಾಂತರ ಜನ ದಸರಾ ವೀಕ್ಷಣೆಗೆ ಆಗಮಿಸುತ್ತಾರೆ. ಆಹಾರ ಮೇಳದಲ್ಲಿ ನೂರಾರು ಮಳಿಗೆಗಳಿದ್ದು, ಪ್ರವಾಸಿಗರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ಕೆ.ಹೆಚ್.ಮುನಿಯಪ್ಪ ಅವರು ಮಾತನಾಡಿ, ಕರ್ನಾಟಕದಲ್ಲಿ 7 ಕೋಟಿ ಜನರಿದ್ದು, ಇವರಲ್ಲಿ 4.5 ಕೋಟಿ ಜನರಿಗೆ ಅನ್ನಭಾಗ್ಯ ಯೋಜನೆಯಡಿ ಪಡಿತರ ನೀಡಲಾಗುತ್ತಿದೆ. ಬಿಪಿಎಲ್ ಕುಟುಂಬದ ಪ್ರತಿ ಸದಸ್ಯರಿಗೆ 5 ಕೆ.ಜಿ ಅಕ್ಕಿ ಹಾಗೂ ಉಳಿದ 5 ಕೆ.ಜಿ ಅಕ್ಕಿಗೆ ಹಣ ನೀಡಲಾಗುತ್ತಿದೆ ಎಂದರು.

ಸಿದ್ದರಾಮಯ್ಯ ಪೂರ್ಣಾವಧಿ ಸಿಎಂ

ಮುಡಾ ಹಗರಣ ಸಣ್ಣ ವಿಚಾರವಾಗಿದ್ದು, ಮುಡಾದಲ್ಲಿ ಮೂರು ಪಕ್ಷಗಳು ಆಡಳಿತ ನಡೆಸಿವೆ. ಬಿಜೆಪಿ ಸಿದ್ದರಾಮಯ್ಯ ವಿರುದ್ಧ ಕುತಂತ್ರ ಮಾಡುತ್ತಿದೆ ಅಷ್ಟೇ. ಬಿಜೆಪಿ ನಾಯಕರ ಕುತಂತ್ರಕ್ಕೆ ಜಗ್ಗಲ್ಲ, ಬಗ್ಗಲ್ಲ. ನಾವು ಕೂಡ ಹೋರಾಟ ಮಾಡುತ್ತೇವೆ. ಸಿಎಂ ಅಧಿಕಾರದಲ್ಲಿ ಯಾವುದೇ ಶೇರಿಂಗ್ ಇಲ್ಲಾ. ಇಂತಹ ವಿಚಾರಗಳು ಚರ್ಚೆಯೇ ಆಗಿಲ್ಲ. ಸಿದ್ದರಾಮಯ್ಯರೇ ಪೂರ್ಣಾವಧಿ ಸಿಎಂ ಆಗಿ ಮುಂದುವರೆಯುತ್ತಾರೆ. **-ಕೆ.ಹೆಚ್.ಮುನಿಯಪ್ಪ, ಆಹಾರ ಸಚಿವ**

ಆಹಾರ ಮೇಳದಲ್ಲಿ 108 ಮಳಿಗೆಗಳನ್ನು ತೆರೆಯಲಾಗಿದೆ. ಮಳಿಗೆಗಳು ನಾಳೆಯಿಂದ ಪೂರ್ಣ ಪ್ರಮಾಣದಲ್ಲಿ ಪ್ರಾರಂಭವಾಗುತ್ತವೆ. 130 ಬಗೆಯ ವಿವಿಧ ತಿಂಡಿಗಳನ್ನು ಇಲ್ಲಿ ಸವಿಯಬಹುದಾಗಿದೆ ಎಂದು ತಿಳಿಸಿದರು.

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಮನುಷ್ಯ ಬದುಕಲು ಗಾಳಿ ನೀರು ಆಹಾರ ಬಹಳ ಮುಖ್ಯ. ಆಹಾರ ಪದಾರ್ಥಗಳನ್ನು ನಾವು ಬೆಳೆದು ಬೇರೆ ಬೇರೆ ಖಾದ್ಯಗಳನ್ನು ತಯಾರು ಮಾಡುತ್ತೇವೆ. ಆಹಾರದಲ್ಲಿ ಪ್ರೋಟಿನ್, ವಿಟಮಿನ್, ಕಾರ್ಬೋಹೈಡ್ರೇಟ್ ಇರುವ ಸಮತೋಲನ ಆಹಾರವನ್ನು ಸೇವಿಸಬೇಕು. ಆಗ ಮಾತ್ರ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಾಧ್ಯ ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಬಿಪಿ, ಶುಗರ್ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣ ನಮ್ಮ ಆಹಾರ ಪದ್ಧತಿ ಹಾಗೂ ಕೆಲಸದ ಒತ್ತಡ. ನಾವು ಹಿತ ಮಿತವಾಗಿ ಆಹಾರವನ್ನು ಸೇವನೆ ಮಾಡಬೇಕು. ಸರಿಯಾದ ಸಮಯದಲ್ಲಿ ಆಹಾರವನ್ನು ಸೇವಿಸುವ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ರವಿಶಂಕರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಖಾಲಿ... ಖಾಲಿ ಮಳಿಗೆಗಳು

ದಸರಾ ಮಹೋತ್ಸವದಲ್ಲಿ ಅತ್ಯಂತ ಪ್ರಮುಖವಾದದು ಆಹಾರ ಮೇಳ. ಆದರೆ ಇದು ಕಳಾಹೀನವಾಗಿದೆ. ಈ ದೇಶದ ವಿವಿಧ ಭಾಗದ ಬಗೆಯ ಆಹಾರದ ರುಚಿಯನ್ನು ಸವಿಯಲು ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವ ತಾಣ ಇಂದು ಆಹಾರ ಪದಾರ್ಥಗಳು ಸಿಗದೆ ಖಾಲಿ... ಖಾಲಿ ಹೊಡೆಯುತ್ತಿವೆ.

ಯಾವುದೇ ಮಳಿಗೆಗಳಲ್ಲಿಯೂ ಆಹಾರ ಸಿದ್ಧಗೊಂಡಿರಲಿಲ್ಲ. ಬದಲಾಗಿ ಮಳಿಗೆ ಪಡೆದುಕೊಳ್ಳಲು ಅರ್ಜಿ ಸಲ್ಲಿಸಿ, ಡಿಡಿ ಕಟ್ಟಿದವರು ಮಳಿಗೆಗಳು ಸಿಗದೆ ಕಂಗಾಲಾಗಿದ್ದು ಕಂಡುಬಂತು. ಜೊತೆಗೆ ಒಂದೇ ಮಳಿಗೆಯನ್ನು ಇಬ್ಬರಿಗೆ ನೀಡಿದ್ದರಿಂದ ಕೆಲವು ಕ್ಷಣ ವಾಗ್ವಾದವೂ ಕೂಡ ನಡೆಯಿತು. ನಂತರ ಸ್ಥಳಕ್ಕೆ ಆಹಾರ ಮೇಳ ಉಪ ಸಮಿತಿಯ ಕಾರ್ಯಾಧ್ಯಕ್ಷ ಕಾಂತರಾಜು ಭೇಟಿ ನೀಡಿ, ಪೊಲೀಸರ ಸಹಾಯದೊಂದಿಗೆ ಮಳಿಗೆ ವಿತರಿಸಿದರು. ಆಹಾರ ಪ್ರಿಯರಿಗೆ ಮಳಿಗೆ ಆರಂಭವಾಗುವುದೇ, ಆಹಾರ ಸಿಗುವುದೇ ಎಂಬುದು ತಿಳಿಯದೆ ಗೊಂದಲಕ್ಕೊಳಗಾಗಿದ್ದರು.

ಅರ್ಜಿದಾರರ ಪ್ರಕಾರ ಮೈದಾನದಲ್ಲಿ ಸುಮಾರು 200 ಮಳಿಗೆಗಳನ್ನು ನಿರ್ಮಿಸಲಾಗಿತ್ತು. ಆದರೆ, ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆಗೆ ಮಾಡಿದ ಸಂದರ್ಭದಲ್ಲಿ 100 ಮಳಿಗೆಗಳನ್ನು ತೆರವುಗೊಳಿಸಿ, ನಂತರ ಸಸ್ಯಾಹಾರಿ ಮಳಿಗೆಗೆ 50, ಮಾಂಸಾಹಾರಿ 50 ಮಳಿಗೆಗಳನ್ನು ನೀಡುವಂತೆ ಸೂಚಿಸಿದರು ಎನ್ನಲಾಗಿದೆ. ಈ ಬಾರಿ ಆಹಾರ ಮೇಳದಲ್ಲಿ ಪಾಲ್ಗೊಳ್ಳಲು 230 ಅರ್ಜಿಗಳು ಬಂದಿದ್ದು ಅದರಲ್ಲಿ 128 ಅರ್ಜಿದಾರರಿಗೆ ಅವಕಾಶ ಕಲ್ಪಿಸಲು ನಿರ್ಧರಿಸಿದ್ದು, ಕೆಲವು ಅರ್ಜಿದಾರರು ಡಿಡಿ ಕಟ್ಟಿದ್ದಾರೆ. ಅವರಿಗೆ ಮಳಿಗೆಗಳನ್ನು ನೀಡಲಾಗಿತ್ತು. ಮಧ್ಯಾಹ್ನ 1.45ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದ ನಂತರ ಕೆಲವು ಮಳಿಗೆಗಳಲ್ಲಿ ಆಹಾರಗಳು ಸಿದ್ಧವಾಯಿತು. ಕೆಲವು ಪ್ರವಾಸಿಗರು, ವಿದ್ಯಾರ್ಥಿಗಳು ಸಿಕ್ಕಿದ ಆಹಾರವನ್ನು ಸವಿದು ಬೇಸರದಿಂದ ಹೊರ ನಡೆದರು.

ಕುಪ್ಪಣ್ಣ ಪಾರ್ಕಿನಲ್ಲಿ ದಸರಾ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ

ಹೂವುಗಳಿಂದ ತಳೆದಿರುವ ಸಂಸತ್ ಭವನ, ಅನುಭವ ಮಂಟಪ, ಬುದ್ಧನ ಪ್ರಜಾಪ್ರಭುತ್ವ ಮಾದರಿ ಕಂಡು ಸಿಎಂ ಮೆಚ್ಚುಗೆ







ಮೈಸೂರು,ಅ.3(ಎಂಟಿವೈ)- ಕುಪ್ಪಣ್ಣ ಪಾರ್ಕ್‌ನಲ್ಲಿ ದಸರಾ ಮಹೋತ್ಸವದ ಅಂಗವಾಗಿ ಆಯೋಜಿಸಿರುವ ವೈಭವದ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿ, ಗಾಜಿನ ಮನೆಯಲ್ಲಿ ಲಕ್ಷಾಂತರ ಹೂವುಗಳಿಂದ ತಲೆ ಎತ್ತಿರುವ ಸಂಸತ್ ಭವನ, ಅನುಭವ ಮಂಟಪ ಹಾಗೂ ಗೌತಮ ಬುದ್ಧರ ಕಾಲದ ಪ್ರಜಾಪ್ರಭುತ್ವದ ಚಿತ್ರಣ ಕಂಡು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ತೋಟಗಾರಿಕಾ ಇಲಾಖೆ ಹಾಗೂ ತೋಟಗಾರಿಕಾ ಸಂಘದ ವತಿಯಿಂದ ಆಯೋಜಿಸಿರುವ ದಸರಾ ಫಲಪುಷ್ಪ ಪ್ರದರ್ಶನ ಆಕರ್ಷಣೀಯ ಕೇಂದ್ರ ಬಿಂದುವಾಗಿದ್ದು, ಲಕ್ಷಾಂತರ ಹೂವಿನ ಗಿಡಗಳು ಜನಾಕರ್ಷಿಸುತ್ತಿವೆ. ಅದರಲ್ಲೂ ಹೂವಿನಿಂದಲೇ ತಲೆ ಎತ್ತಿರುವ ವಿವಿಧ ಆಕೃತಿಗಳು ಕಣ್ಮನ ಸೆಳೆಯುತ್ತಿವೆ.

ದಸರಾ ಮಹೋತ್ಸವದ ಮೊದಲ ದಿನವಾದ ಗುರುವಾರ ಮಧ್ಯಾಹ್ನ ಕುಪ್ಪಣ್ಣ ಪಾರ್ಕ್‌ಗೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಫಲಪುಷ್ಪ ವೀಕ್ಷಿಸಿ ಸಂಸತ್ ಭವನದ ಆಕೃತಿ ಮುಂದೆ ಮಹಾತ್ಮ ಗಾಂಧೀಜಿ, ಜವಾಹರ್ ಲಾಲ್ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್, ಡಾ.ಬಿ.ಆರ್. ಅಂಬೇಡ್ಕರ್, ಬಾಬು ಜಗಜೀವನ್ ರಾಮ್ ಇನ್ನಿತರ ಮಹನೀಯರ ಪ್ರತಿಮೆಯನ್ನು ಅನಾವರಣ ಮಾಡಲಾಗಿದೆ. ಎಲ್ಲಾ ಆಕೃತಿಗಳನ್ನು ಸಮಾಧಾನದಿಂದ ವೀಕ್ಷಿಸಿದ ಸಿಎಂ ಫಲಪುಷ್ಪ ಪ್ರದರ್ಶನದ ಬಗ್ಗೆ ಮಾಹಿತಿ ಪಡೆದರು.

ಪಂಚ ಗ್ಯಾರಂಟಿ ವಿಶೇಷ: ಫಲಪುಷ್ಪ ಪ್ರದರ್ಶನದಲ್ಲಿ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪಂಚ ಗ್ಯಾರಂಟಿ ಯೋಜನೆಗಳಾದ ಅನ್ನಭಾಗ್ಯ, ಯುವನಿಧಿ, ಗೃಹಜ್ಯೋತಿ, ಶಕ್ತಿ ಯೋಜನೆ ಹಾಗೂ ಗೃಹಲಕ್ಷ್ಮೀ ಯೋಜನೆಗಳ ವಿಷಯಾಧಾರಿತವಾದ ಪುಷ್ಪ ಕಲಾಕೃತಿ ಮಾದರಿ ನಿರ್ಮಾಣವಾಗಿದೆ. ಭದ್ರಾವತಿ ಕಾರ್ಖಾನೆ, ಶಿವನಸಮುದ್ರ ವಿದ್ಯುತ್ ಉತ್ಪಾದನೆ, ಮೈಸೂರು ವಿಶ್ವವಿದ್ಯಾಲಯ, ಹಾಗೂ ಮೈಸೂರು ಆಕಾಶವಾಣಿ ಸೇರಿದಂತೆ ಅಭಿವೃದ್ಧಿ ಸಾಧನೆಗಳ ಕುರಿತ ಮಾದರಿಗಳು ಪುಷ್ಪಗಳಲ್ಲಿ ನಿರ್ಮಿಸಲಾಗಿದೆ.

ಕರ್ನಾಟಕ ಸಂಭ್ರಮ: ಉದ್ಯಾನವನದ ಮುಖ್ಯದ್ವಾರದಲ್ಲಿ ಕರ್ನಾಟಕ ಸಂಭ್ರಮ-50ರ ಕುರಿತು ಹಳದಿ ಮತ್ತು ಕೆಂಪು ಬಣ್ಣದ ಗುಲಾಬಿ ಹೂವಿನಿಂದ ನಿರ್ಮಿಸಲಾದ ಕರ್ನಾಟಕ ಭೂಪಟ, ಎಡ ಬಲದಲ್ಲಿ ಆನೆಯ ಮಾದರಿ, ಟೀಮ್ ಇಂಡಿಯಾ ತನ್ನದಾಗಿಸಿಕೊಂಡ ಟಿ-20 ವಿಶ್ವಕಪ್ ಮಾದರಿಯು ಕ್ರೀಡಾಪ್ರಿಯರನ್ನು ಸೆಳೆಯಲಿದೆ.

ಈ ಬಾರಿ ಭಾರತದ ಮೊದಲ ಮಹಿಳಾ ಶಿಕ್ಷಕಿ, ಸಾವಿತ್ರಿಬಾಯಿ ಫುಲೆ, ಒಂದೇ ಮಾನವನ ದೇಹದಲ್ಲಿ ಅರ್ಧಭಾಗ ರೈತ ಇನ್ನರ್ಧ ಭಾಗ ಗಡಿ ಕಾಯುವ ಸೈನಿಕನ ಮಾದರಿ ಬಹಳ ವಿಶೇಷವಾಗಿದೆ. ಹುಲಿಯನ್ನೇರಿದ ಮಲೆ ಮಹದೇಶ್ವರ ಸ್ವಾಮಿಯ ಪ್ರತಿಮೆ ಹಾಗೂ ಒಂದೇ ಗೋಪುರದಲ್ಲಿ ಅರಳಿದ ಕರ್ನಾಟಕದ ಅತೀ ದೊಡ್ಡ ದೇವಾಲಯವಾದ ನಂಜನಗೂಡಿನ ಶ್ರೀ ಕಂಠೇಶ್ವರ ಹಾಗೂ ಶ್ರೀ ಚಾಮುಂಡೇಶ್ವರಿ ದೇವಾಲಯವನ್ನು ವಿವಿಧ ಬಣ್ಣದ ಹೂವುಗಳಿಂದ ಅಲಂಕರಿಸಿರುವುದು ಭಕ್ತಿಪ್ರಿಯರನ್ನು ಕೈ ಬೀಸಿ ಕರೆಯುತ್ತದೆ. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ, ವಿಧಾನ ಪರಿಷತ್ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಶಾಸಕರಾದ ಡಿ.ರವಿಶಂಕರ್, ಎ.ಆರ್.ಕೃಷ್ಣಮೂರ್ತಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿಪಂ ಸಿಇಒ ಕೆ.ಎಂ.ಗಾಯತ್ರಿ, ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಮಂಜುನಾಥ್ ಅಂಗಡಿ, ಹಿರಿಯ ಸಹಾಯಕ ನಿರ್ದೇಶಕರಾದ ಹಬೀಬಾ ನಿಶಾದ್, ನವೀನ್, ತೋಟಗಾರಿಕಾ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.







ಕುಪ್ಪಣ್ಣ ಪಾರ್ಕಿನಲ್ಲಿ ಆಯೋಜಿಸಿರುವ ದಸರಾ ಫಲಪುಷ್ಪ ಪ್ರದರ್ಶನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು, ವೀಕ್ಷಿಸಿದರು.

ಮೂರನೇ ಪುಟದಿಂದ

ಮೈಸೂರು ದಸರಾ ಪ್ರಾರಂಭ

ದಸರಾ ಕುರಿತ ಬಾಲ್ಯದ ನೆನಪುಗಳನ್ನು ಮೆಲುಕು ಹಾಕಿದರು. ಜೊತೆಗೆ ಮಧ್ಯಪ್ರಾಚ್ಯ ದೇಶಗಳಲ್ಲಿ ಕಾಡುತ್ತಿರುವ ಯುದ್ಧದ ಕಾರ್ಮೋಡದ ಬಗ್ಗೆ ಆತಂಕ ವ್ಯಕ್ತಪಡಿಸಿ, ಶಾಂತಿಯ ಸಂದೇಶ ಸಾರಿದರು.

ಸರ್ಕಾರ ಮತ್ತು ಜನರು ಒಟ್ಟಿಗೆ ಹೆಜ್ಜೆ ಹಾಕುವ ನಾಡ ಹಬ್ಬ ಮೈಸೂರು ದಸರಾಗೆ ಹೆಚ್ಚಿನ ಮಹತ್ವವಿದೆ. ಪ್ರಾಯಶಃ ಮುಂದಿನ ತಲೆಮಾರಿಗೆ ಸಿಗದೆ ಮರೆಯಾಗಬಹುದಾದ ಈ ಮಣ್ಣಿನ, ಈ ನೆಲದ ಘಮಲು ಹಾಗೂ ದೇಶಿ ಸೊಗಡು ತುಂಬಿರುವ ಹಬ್ಬ ನಿಲ್ಲಬಾರದು ಎಂದು ಮನವಿ ಮಾಡಿದರು. ಮೈಸೂರು ದಸರಾ ಮೂಲಕ ಕರ್ನಾಟಕದ ಇತಿಹಾಸ ಹಾಗೂ ಸಾಂಸ್ಕೃತಿಕ ಪರಂಪರೆಯ ಕಿರು ಪರಿಚಯ ಇಂದಿನ ಹೊಸ ತಲೆಮಾರಿಗೆ ತಿಳಿಯುತ್ತದೆ. ದೇಸಿ ವಾದ್ಯ, ಮೇಳಗಳು, ಕಲೆ, ಕುಣಿತ, ಹಾಡು, ಸ್ತಬ್ಧಚಿತ್ರಗಳು, ಬಣ್ಣದ ವೇಷಗಳು, ಕುದುರೆ ಸಂಚಲನ, ಜಂಬೂ ಸವಾರಿ ಸೇರಿದಂತೆ ಹಲವು ಜಾನಪದ ಕಲಾ ಪಂತಿಕೆಗಳ ಪರಿಚಯ ಇಂದಿನ ಮಕ್ಕಳಿಗೆ ಶಾಲಾ-ಕಾಲೇಜಿನಲ್ಲಿ ತಿಳಿಯುವುದಿಲ್ಲ. ಆದರೆ ಮೈಸೂರು ದಸರಾ ಮೂಲಕ ನಾಡಿನ ಬಹುರೂಪಿ ಸಂಸ್ಕೃತಿ ಹಾಗೂ ಅಸ್ಮಿತೆಯ ವಿವಿಧ ಆಯಾಮಗಳು ಇಂದಿನ ತಲೆಮಾರಿಗೆ ಪರಿಚಯವಾಗುತ್ತದೆ ಎಂದು ಡಾ.ಹಂಪನಾ ಅಭಿಪ್ರಾಯಪಟ್ಟರು.

ಕೆಲವು ಹಬ್ಬಗಳು ಆಯಾ ಮತ ಧರ್ಮಗಳಿಗೆ ಮಾತ್ರ ಸೀಮಿತವಾಗಿರುತ್ತವೆ. ಆದರೆ ಮೈಸೂರು ದಸರಾ ಹಬ್ಬ ಮಾತ್ರ ಮತ ಧರ್ಮಗಳ ತಾರತಮ್ಯವಿಲ್ಲದೆ ಇಡೀ ನಾಡು ಆಚರಿಸುವ ಸರ್ವ ಜನಾಂಗದ ಹಬ್ಬವಾಗಿದೆ. ಆಸ್ತಿಕತೆ ಹಾಗೂ ನಾಸ್ತಿಕತೆ ಕುರಿತ ಚರ್ಚೆ ಇಲ್ಲಿ ಅಪ್ರಸ್ತುತ. ದೇವಾಲಯಕ್ಕೆ ಬಂದವರೆಲ್ಲಾ ಆಸ್ತಿಕರಲ್ಲ, ಒಳಗೆ ಬಾರದೆ ದೂರ ಉಳಿದವರೆಲ್ಲಾ ನಾಸ್ತಿಕರಲ್ಲ ಎಂದು ವ್ಯಾಖ್ಯಾನಿಸಿದರು.

ದಸರಾ ಹಬ್ಬದ ನವರಾತ್ರಿ ವೇಳೆ ಬೊಂಬೆ ಕೂರಿಸುತ್ತಿದ್ದ ತಮ್ಮ ಬಾಲ್ಯದ ಸಂಭ್ರಮವನ್ನು ಮೆಲುಕು ಹಾಕಿದ ಡಾ.ಹಂಪ ನಾಗರಾಜಯ್ಯ, ಜೋಡಿ ಬೊಂಬೆಗಳು ಆದರ್ಶವನ್ನು ಬಿತ್ತುವ ರೂಪಕಗಳು, ಅರಮನೆ, ರಾಜ-ರಾಣಿ, ದೇವತೆಗಳು ಇತ್ಯಾದಿ ಮಾತುಗಳು ಅಲಂಕಾರಿಕ ರೂಪಕಗಳು. ಸಹನೆ, ಸೌಹಾರ್ದದಿಂದ ಬಾಳಿದರೆ, ನೆಮ್ಮದಿ ಇದ್ದರೆ ಪ್ರತಿ ಮನೆಯೂ ಅರಮನೆಯೇ, ಎಲ್ಲರೂ ರಾಜ-ರಾಣಿಯರೆ ಎಂದು ತಮ್ಮ ತಾಯಿ ಹೇಳಿದ ಮಾತುಗಳನ್ನು ನೆನೆದರು. ನವರಾತ್ರಿಯ ತೆಂಕಣಗಾಳಿಗೆ ಮೈಸೂರು ಮೈಕೊಡವಿ, ಪೊರೆಬಿಟ್ಟು ಶೃಂಗಾರಗೊಂಡು ಕಂಗೊಳಿಸುತ್ತದೆ. ಮೈಸೂರೆಂದರೆ ದಸರಾ, ಜಂಬೂ ಸವಾರಿ ಎಂಬ ಮಾತು ಲೋಕ ಪ್ರಸಿದ್ಧಿ ಪಡೆದಿದೆ. ಪ್ರಜಾಪ್ರಭುತ್ವ ಬಂದ ನಂತರ ಕೆಲವು ಬದಲಾವಣೆಗಳಾದವು. ಈ ಬದಲಾವಣೆ ಸ್ವರೂಪದಲ್ಲೆ ಹೊರತು ಸತ್ವದಲ್ಲಿ ಅಲ್ಲ. ಚುನಾಯಿತ ಸರ್ಕಾರ ಈ ಹಬ್ಬವನ್ನು ಜನಮುಖಿಯಾಗಿಸಿದೆ. ಇದು ಅರಮನೆ ಹಬ್ಬವಲ್ಲ, ಜನರು ಆಯ್ಕೆ ಮಾಡಿದ ಸರ್ಕಾರ ನಡೆಸುವ ಉತ್ಸವವಾಗಿ ಇನ್ನಷ್ಟು ಅರ್ಥಪೂರ್ಣವಾಗಿ ಹಿಂದಿನಂತೆ ಸಂಭ್ರಮದಿಂದ ನಡೆಸಲಾಗುತ್ತಿದೆ. ಸರ್ಕಾರ ಮತ್ತು ಜನರು ಒಟ್ಟಿಗೆ ಹೆಜ್ಜೆ ಹಾಕುತ್ತಾ ನಡೆಸುವ ನಾಡ ಹಬ್ಬ ದಸರಾಗೆ ಹೆಚ್ಚಿನ ಮಹತ್ವವಿದೆ ಎಂದು ಅಭಿಪ್ರಾಯಪಟ್ಟರು.

ಸಾಮಾನ್ಯ ಪ್ರಜೆಯೊಬ್ಬರು ನಾಡಹಬ್ಬ ಉದ್ಘಾಟನೆ ಮಾಡುತ್ತಿರುವುದು ಸಂತಸದ ಸಂಗತಿ. ಪ್ರಜಾ ಪ್ರಭುತ್ವದಲ್ಲಿ ಪ್ರಜೆಯೇ ಪ್ರಭು ಎಂಬ ಸಿದ್ಧಾಂತ ಮಾನ್ಯ ಮಾಡಿದಂತೆ ಜನ ಮುಖಿ ಕಾಳಜಿ ಎತ್ತಿ ಹಿಡಿದಂತೆ ದಸರಾ ಮಹೋತ್ಸವದ ಉದ್ಘಾಟನೆಯನ್ನು ನಾಡಿನ ಜನರ ಪರವಾಗಿ ವಿನಯ ಹಾಗೂ ಧನ್ಯತಾ ಭಾವದಿಂದ ನೆರವೇರಿಸುತ್ತಿದ್ದೇನೆ ಎಂದು ಹೇಳಿದರು.

ಚಾಮುಂಡಿಬೆಟ್ಟದಲ್ಲಿ ಇಂದು ದಸರಾ ಮಹೋತ್ಸವಕ್ಕೆ ವಿಧ್ಯುಕ್ತ ಚಾಲನೆ ದೊರೆಯುವುದರ ಮೂಲಕ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಎಲ್ಲಾ ಕಾರ್ಯಕ್ರಮಗಳು ಇಂದಿನಿಂದ ಆರಂಭವಾಗಿದೆ. ಇವತ್ತಿನಿಂದ 9 ದಿನಗಳ ಕಾಲ ಮೈಸೂರಿನಲ್ಲಿ ದಸರಾ ಸಂಭ್ರಮ ಮೇಳೈಸಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ.ಹರೀಶ್‌ಗೌಡ, ಕೆ.ಹರೀಶ್‌ಗೌಡ, ಸಿ.ಎನ್.ಮಂಜೇಗೌಡ, ಅನಿಲ್ ಚಿಕ್ಕಮಾದು, ರಮೇಶ್ ಬಂಡಿಸಿದ್ದೇಗೌಡ, ತನ್ವೀರ್ ಸೇಠ್, ರವಿಶಂಕರ್, ಎ.ಆರ್.ಕೃಷ್ಣಮೂರ್ತಿ, ಡಾ.ತಿಮ್ಮಯ್ಯ, ಮುಡಾ ಅಧ್ಯಕ್ಷ ಮರೀಗೌಡ, ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಗರಡಿಯಲ್ಲಿ ಕಸರತ್ತು ಮಾಡಿರಬೇಕು

ಹಲವು ಅಡ್ಡಿ-ಆತಂಕಗಳನ್ನು ಎದುರಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗರಡಿ ಮನೆಯಲ್ಲಿ ಸಾಮು (ಕಸರತ್ತು) ಮಾಡಿರಬೇಕೆಂಬ ಗುಮಾನಿ ಇದೆ ಎಂದು ನಾಡೋಜ ಡಾ.ಹಂಪ ನಾಗರಾಜಯ್ಯ ಅಭಿಪ್ರಾಯಪಟ್ಟರು.

ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಎಷ್ಟೇ ಅಡ್ಡಿ-ಆತಂಕಗಳು ಎದುರಾಗುತ್ತಿದ್ದರೂ ಎದೆಗುಂದದೆ ಸೆಡ್ಡು ಹೊಡೆದು ಗಟ್ಟಿಯಾಗಿ ನಿಂತಿರುವುದನ್ನು ನೋಡಿದರೆ ಇವರು ಕೂಡ ಗರಡಿ ಮನೆಯಲ್ಲಿ ಕಸರತ್ತು ಮಾಡಿರುವ ಸಾಧ್ಯತೆ ಇದೆ ಎಂದರು. ಜೀವನ ದೊಡ್ಡ ಅಖಾಡ. ಇದರಲ್ಲಿ ಧೃತಿಗೆಡದೆ ತೊಡೆ ತಟ್ಟಿ ನಿಲ್ಲಬೇಕು. ಸಜ್ಜನಿಕೆ, ಸೌಮ್ಯತೆ ದೌರ್ಬಲ್ಯವಲ್ಲ. ಆದರೆ ಪ್ರತಿಕೂಲ ಪ್ರವಾಹವನ್ನು ಎದುರಿಸುವ ಶಕ್ತಿ ಪ್ರತಿಯೊಬ್ಬರಲ್ಲೂ ಇರಬೇಕು ಎಂದು ಪ್ರಸ್ತುತ ಸಿದ್ದರಾಮಯ್ಯ ಎದುರಿಸುತ್ತಿರುವ ಕಾನೂನು ಹೋರಾಟವನ್ನು ಪರೋಕ್ಷವಾಗಿ ಉಲ್ಲೇಖಿಸಿ ಡಾ.ಹಂಪ ನಾಗರಾಜಯ್ಯ ಇಬ್ಬರಲ್ಲೂ ಧೈರ್ಯ ತುಂಬಿದರು. ಬಾಲ್ಯದ ಗರಡಿ ಮನೆಯ ಬಾಂಧವ್ಯವನ್ನು ಮೆಲುಕು ಹಾಕಿದ ಡಾ. ಹಂಪ ನಾಗರಾಜಯ್ಯ, ನಾನು ಕೂಡ ಒಬ್ಬ ಶ್ರೇಷ್ಠ ಪೈಲ್ವಾನ ಆಗಬೇಕೆಂಬ ಆಸೆ ಹೊಂದಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲವೆಂಬ ವ್ಯಸನವಿದೆ ಎಂದರು.

ಬಲಿಷ್ಠರನ್ನು ಕಂಡರೆ ದೇವರಿಗೂ ಭಯ...

ಬಲಿಷ್ಠರನ್ನು ಕಂಡರೆ ದೇವರಿಗೂ ಭಯವಿದೆ ಎಂದು ನಾಡೋಜ ಡಾ.ಹಂಪ ನಾಗರಾಜಯ್ಯ ಅಭಿಪ್ರಾಯಪಟ್ಟರು. ಹೆಣ್ಣು ದೇವತೆಗಳು ತೆಪ್ಪಗಿರುವುದನ್ನು ನೋಡಿ ಅಚ್ಚರಿಯಾಗುತ್ತದೆ. ದೇವರುಗಳಿಗೂ ಬಲಿಷ್ಠರ ಕಂಡು ಭಯವಾಗಿದೆ ಅಮಾಯಕರು ಹಾಗೂ ಮುಗ್ಧರಿಗೇ ದೇವರು ಕಷ್ಟ ಕೊಡುತ್ತವೆ ಎಂದು ಬೇಸರ ವ್ಯಕ್ತಪಡಿಸಿದರು. ದೇವರು ಕುರಿ, ಕೋಳಿ, ಮೇಕೆ ಬಲಿ ಬೇಡುತ್ತವೆಯೇ ಹೊರತು ಹುಲಿ, ಸಿಂಹ, ಚಿರತೆ, ಕಿರುಬ ಬಲಿ ಕೊಡಿ ಎಂದು ಕೇಳುವುದಿಲ್ಲ. ಏಕೆಂದರೆ ಇವುಗಳ ಬಲಿ ಕೇಳಲು ದೇವರಿಗೂ ಕೂಡ ಹೆದರಿಕೆ ಇದೆ ಎಂದರು.

ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಇನ್ನು ಕೂಡ ಶಾಸನ ಸಭೆ ಹಾಗೂ ಸಂಸತ್ತಿನಲ್ಲಿ ಸ್ತ್ರೀಯರಿಗೆ ಸೂಕ್ತ ಪ್ರಾತಿನಿಧ್ಯವಿಲ್ಲ. ಹೆಣ್ಣು ಮಕ್ಕಳು ಶಾಲೆಗೆ ಹೋಗಬಾರದು ಎಂದು ಬೆದರಿಸುವ ಪರಿಸ್ಥಿತಿ ಶೋಚನೀಯ ಎಂದು ವಿಷಾಧ ವ್ಯಕ್ತಪಡಿಸಿದರು. ತಾಯಿ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ದಸರಾ ಉದ್ಘಾಟಿಸಿದ ಹಂಪ ನಾಗರಾಜಯ್ಯ, ವಿಶ್ವದಲ್ಲಿ ಶಾಂತಿ ಸ್ಥಾಪನೆ ಸೇರಿದಂತೆ ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ದೇವಿಯನ್ನು ಬೇಡಿದರು.

ಸೇತುವೆಗಳನ್ನು ಧ್ವಂಸ ಮಾಡಿ ಕಂದಕ ಪ್ರಪಾತಗಳನ್ನು ನಿರ್ಮಿಸುವ ದುರಂತವನ್ನು ನಿವಾರಿಸಲು ಮನುಷ್ಯ ಮನುಷ್ಯರನ್ನು, ರಾಷ್ಟ್ರ-ರಾಷ್ಟ್ರಗಳನ್ನು ಕೂಡಿಸುವ ಸರಪಳಿಗಳು ಇಂದಿನ ಜರೂರು ಎಂದು ಅಭಿಪ್ರಾಯಪಟ್ಟ ಡಾ.ಹಂಪ ನಾಗರಾಜಯ್ಯ, ಮಧ್ಯಪ್ರಾಚ್ಯ ದೇಶದಲ್ಲಿ ನಡೆಯುತ್ತಿರುವ ಯುದ್ಧ ಕಾರ್ಮೋಡ ದೂರವಾಗಬೇಕೆಂದು ದೇವರಲ್ಲಿ ಪ್ರಾರ್ಥಿಸಿದರು. ಕನ್ನಡ ನಾಡು, ನುಡಿ, ನೆಲ, ಜಲ, ಕಲೆ, ಸಂಸ್ಕೃತಿ, ಸಂರಕ್ಷಣೆಗಾಗಿ ಹೋರಾಟ ಮಾಡುವವರನ್ನು ಕೊಲೆಗಾರರಂತೆ ಕಾಣದೆ ಪ್ರೀತಿಯಿಂದ ಕಾಣಲು ಆಡಳಿತಾಂಗಕ್ಕೆ ಸೂಚಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದ ಹಂಪ ನಾಗರಾಜಯ್ಯ, ದೇಶದ ನಿರುದ್ಯೋಗ ಸಮಸ್ಯೆ ಪರಿಹಾರ ಮಾಡಬೇಕೆಂದು ಕೋರಿದರು. ಪ್ರತಿ ನಿತ್ಯ ಆರೋಪ ಪ್ರತ್ಯಾರೋಪ, ವೈಯಕ್ತಿಕ ನಿಂದನೆ, ಅವಾಚ್ಯ ಶಬ್ದ ಬಳಕೆಗಳನ್ನು ಪತ್ರಿಕೆಗಳಲ್ಲಿ ಓದಿ ಯುವ ಪೀಳಿಗೆ ಮಾದರಿಯಾಗಿಟ್ಟುಕೊಂಡರೆ ಏನು ಗತಿ ಎಂದು ಆತಂಕ ವ್ಯಕ್ತಪಡಿಸಿದರು. ಆದ ಕಾರಣ ಸಮಾಜ ಮುಖಿ ಚಿಂತನೆ ಒಳಗೊಂಡ ಸಮೃದ್ಧ ರಾಷ್ಟ್ರ ನಿರ್ಮಾಣಕ್ಕೆ ರೂಪಿಸಿದ ಯೋಜನೆ, ಯೋಚನೆ ಜಾರಿಗೊಳ್ಳಬೇಕೆಂದು ಡಾ.ಹಂಪ ನಾಗರಾಜಯ್ಯ ಆಗ್ರಹಿಸಿದರು.

ಸರ್ಕಾರ ಉರುಳಿಸುವ ದುರಾಲೋಚನೆ ಮಾಡಬಾರದು

ಆಗಾಗ್ಗೆ ಚುನಾವಣೆಗಳು ನಡೆದರೆ ಈಗಾಗಲೇ ಬಸವಳಿದಿರುವ ಶ್ರೀಸಾಮಾನ್ಯರ ಹೆಗಲಿಗೆ ಮತ್ತಷ್ಟು ಭಾರವಾಗುವ ಕಾರಣ ಯಾರೂ ಸರ್ಕಾರ ಉರುಳಿಸುವ ದುರಾಲೋಚನೆ ಮಾಡಬಾರದು ಎಂದು ನಾಡೋಜ ಡಾ.ಹಂಪ ನಾಗರಾಜಯ್ಯ ವಿರೋಧ ಪಕ್ಷಗಳಿಗೆ ಸಲಹೆ ನೀಡಿದರು.

ಚುನಾಯಿತ ಸರ್ಕಾರ ಉರುಳಿಸುವ ಚಿಂತನೆಗಳನ್ನು ಕೈ ಬಿಡಬೇಕು. ಮೊದಲೆ ದೊಡ್ಡ ಹೊರೆಗಳಿಂದ ಬಸವಳಿದಿರುವ ಶ್ರೀಸಾಮಾನ್ಯನ ಹೆಗಲಿಗೆ ಚುನಾವಣೆಗಳು ದೊಡ್ಡ ಹೊರೆಯಾಗುತ್ತವೆ. ಚುನಾವಣೆ ಮೂಲಕ ಇನ್ನಷ್ಟು ಭಾರ ಹೇರಿದರೆ ಶ್ರೀಸಾಮಾನ್ಯ ಕುಸಿಯುತ್ತಾನೆ ಎಂದು ಎಚ್ಚರಿಸಿದರು.

ಯಾವ ಪಕ್ಷವೂ ಶಾಶ್ವತವಾಗಿ ಅಧಿಕಾರದಲ್ಲಿ ಇರುವುದು ಅಸಾಧ್ಯ. ಸೋತ ಪಕ್ಷ ಮತ್ತೆ ಅಧಿಕಾರಕ್ಕೆ ಬರಲು ಐದು ವರ್ಷ ಕಾಯಬೇಕು. ಚುನಾವಣೆಗೆ ಹಾತೊರೆಯಬಾರದು ಎಂದು ವಿಪಕ್ಷಗಳಿಗೆ ಡಾ.ಹಂಪ ನಾಗರಾಜಯ್ಯ ಕಿವಿಮಾತು ಹೇಳಿದರು. ಈ ಮೂಲಕ ರಾಜ್ಯದಲ್ಲಿ ಪ್ರಸ್ತುತ ನಡೆಯುತ್ತಿರುವ ರಾಜಕೀಯ ಬೆಳವಣಿಗೆಯನ್ನು ಪರೋಕ್ಷವಾಗಿ ಉಲ್ಲೇಖಿಸಿ ಸರ್ಕಾರ ಬೀಳಿಸುವ ಪ್ರಯತ್ನ ಮಾಡದಂತೆ ವಿರೋಧ ಪಕ್ಷಗಳಿಗೆ ಸಲಹೆ ನೀಡಿದರು.

ರಾಜೀನಾಮೆ ನೀಡುವ ಅಗತ್ಯವಿಲ್ಲ...!

ರಾಜಕಾರಣದ ಆರಂಭದಲ್ಲಿ ಹೆಂಡತಿ, ಮಕ್ಕಳ ಬಗ್ಗೆ ಚಿಂತನೆ ಮಾಡದ ಸಿದ್ದರಾಮಯ್ಯ, ಅವರಿಗೆ ವಯಸ್ಸಾದ ಮೇಲೆ ಪತ್ನಿ ಮೇಲೆ ಪ್ರೀತಿ ಬಂದಿದೆ ಎಂದು ಗಂಭೀರ ಮಾತಿನಲ್ಲೂ ಜಿ.ಟಿ.ದೇವೇಗೌಡರು ಹಾಸ್ಯ ಚಟಾಕಿ ಹಾರಿಸಿದರು.

ಇವತ್ತಿನ ಪರಿಸ್ಥಿತಿ ಹೇಗಿದೆ ಅಂದರೆ ಎಫ್‌ಐಆರ್ ಬಿತ್ತು ಅಂದ ಕೂಡಲೇ ರಾಜೀನಾಮೆ ಕೇಳುತ್ತಾರೆ. ಎಫ್‌ಐಆರ್ ಇರುವವರೆಲ್ಲಾ ರಾಜೀನಾಮೆ ನೀಡುತ್ತಾ ಹೋದರೆ ಯಾರೂ ಇರುವಂತಿಲ್ಲ ಎಂದು ಅಭಿಪ್ರಾಯಪಟ್ಟರು.

ಸಿದ್ದರಾಮಯ್ಯ ಅವರಿಗೆ ಆಕಸ್ಮಿಕ ಹಾಗೂ ಅನಿರೀಕ್ಷಿತವಾಗಿ ಈ ಪರಿಸ್ಥಿತಿ ಎದುರಾಗಿದೆ. ಈಗ ಸಿದ್ದರಾಮಯ್ಯ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅವರು ರಾಜೀನಾಮೆ ನೀಡಬೇಕು, ಜೈಲಿಗೆ ಹಾಕಬೇಕು ಎಂಬ ನಿಯಮ ಯಾವ ಕಾನೂನಿನಲ್ಲಿ ಇದೆ ಹೇಳಿ ಎಂದು ಕೋಪೋದ್ರಿಕ್ತರಾಗಿ ಪ್ರಶ್ನಿಸಿದರು. ರಾಜೀನಾಮೆ ನೀಡುವಂತೆ ನ್ಯಾಯಾಲಯವೇನಾದರೂ ಹೇಳಿದೆಯೇ ಎಂದು ಖಾರವಾಗಿ ಪ್ರಶ್ನಿಸಿದ ಜಿ.ಟಿ.ದೇವೇಗೌಡರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಸಿದ್ದರಾಮಯ್ಯ ರಾಜೀನಾಮೆ ಕೇಳುತ್ತಾರೆ. 136 ಸ್ಥಾನ ಗೆದ್ದಿರುವ ಸಿದ್ದರಾಮಯ್ಯ ರಾಜೀನಾಮೆ ನೀಡಲು ಸಾಧ್ಯವೇ, ಕೇಂದ್ರದಲ್ಲಿ ಮಂತ್ರಿಯಾದ ಅವರಿಗೆ ಜವಾಬ್ದಾರಿ ಬೇಡವೇ. ಹಾಗಾದರೆ 2 ಲಕ್ಷ ಮತಗಳ ಅಂತರದಿಂದ ಗೆದ್ದಿರುವ ನೀವು ರಾಜೀನಾಮೆ ನೀಡುತ್ತೀರಾ ಎಂದು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳುತ್ತಾರಲ್ಲ, ಅದು ಯಾವ ಕಾನೂನು ಪುಸ್ತಕದಲ್ಲಿದೆ ಎಂದು ತೋರಿಸಪ್ಪಾ ಎಂದು ದಸರಾ ಆಹ್ವಾನ ಪತ್ರಿಕೆಯನ್ನೇ ಪ್ರದರ್ಶಿಸಿದರು.

ನಾನು ಸಿದ್ದರಾಮಯ್ಯ ಅವರನ್ನು ಮೆಚ್ಚಿಸಲು ಈ ಮಾತುಗಳನ್ನು ಆಡುತ್ತಿಲ್ಲ. ಈ ತನಕ ಅವರಿಂದ ನಾನು ಒಂದು ಶಿಫಾರಸು ಪತ್ರವನ್ನಾಗಲಿ, ಬೇರೆ ಯಾವುದಾದರೂ ಲೆಟರನ್ನಾಗಲಿ ಪಡೆದಿಲ್ಲ, ಯಾವುದೇ ಕೆಲಸವನ್ನಾಗಲಿ ಮಾಡಿಸಿಕೊಂಡಿಲ್ಲ ಎಂದು ಸ್ಪಷ್ಟಪಡಿಸಿದರು.

ಒಳ್ಳೆಯ ಕೆಲಸ ಮಾಡುವವರನ್ನು ಪ್ರೋತ್ಸಾಹಿಸಬೇಕು. ಅದು ಬಿಟ್ಟು ಎಫ್‌ಐಆರ್ ದಾಖಲಾದ ಕೂಡಲೇ ರಾಜೀನಾಮೆ ಕೇಳಬಾರದು. ಹಾಗಾದರೆ ಎಫ್‌ಐಆರ್ ಆದವರೆಲ್ಲಾ ತಾಕತ್ತು ಇದ್ದರೆ ವಿಧಾನಸೌಧಕ್ಕೆ ಬಂದು ರಾಜೀನಾಮೆ ನೀಡಲಿ, ಅವರಿಗೆಲ್ಲಾ ನಿಜವಾಗಿ ತಾಕತ್ತು ಇದೆಯೇ ಎಂದು ಜಿ.ಟಿ.ದೇವೇಗೌಡರು ಸವಾಲು ಹಾಕಿದರು. ಮೊದಲು ಕೇಂದ್ರ ಸರ್ಕಾರದಿಂದ ಯಾವ ಯೋಜನೆ ತರಬೇಕು, ರಾಜ್ಯ ಸರ್ಕಾರದ ನೆರವಿನಿಂದ ಯಾವ ಜನಪರ ಕೆಲಸ ಮಾಡಬೇಕು ಎಂಬುದರ ಬಗ್ಗೆ ಚಿಂತನೆ ಮಾಡಲಿ. ಅದು ಬಿಟ್ಟು ರಾಜೀನಾಮೆ ಕೇಳುವುದಲ್ಲ ಎಂದು ಹೆಚ್.ಡಿ.ಕುಮಾರಸ್ವಾಮಿಗೆ ಸಲಹೆ ನೀಡಿದರು.

ಮೈಸೂರಿನ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ಮಾಡಿ

ಮೈಸೂರು ನಗರ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಆಗಿಲ್ಲ. ಆದ ಕಾರಣ ಮೈಸೂರಿನ ಸರ್ವಾಂಗೀಣ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ಮಾಡಿ ಎಂದು ಶಾಸಕ ಜಿ.ಟಿ.ದೇವೇಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದರು. ಮೈಸೂರು ಮಹಾರಾಜರ ಹೆಸರು ಉಳಿದಂತೆ ನಿಮ್ಮ ಹೆಸರು ಉಳಿಯಬೇಕು ಅಂದರೆ ಮೊದಲು ಇಂತಹ ವಿಶಿಷ್ಟ ಕಾರ್ಯಕ್ರಮ ರೂಪಿಸಿ ಎಂದು ಒತ್ತಾಯಿಸಿದರು. ಸಿದ್ದರಾಮಯ್ಯ ಚಾಮುಂಡೇಶ್ವರಿಯ ವರಪುತ್ರ. 1985ರಿಂದ ಇಲ್ಲಿ ತನಕ ರಾಜಕಾರಣ ಮಾಡಿಕೊಂಡು ಬಂದಿರುವ ಸಿದ್ದರಾಮಯ್ಯ ಶಾಸಕರಾಗಿ, ಮಂತ್ರಿಯಾಗಿ, ಈಗ ಮುಖ್ಯಮಂತ್ರಿಯಾಗಿದ್ದಾರೆ, 15 ಬಜೆಟ್ ಮಂಡಿಸಿದ್ದಾರೆ ಎಂದರು.

ಎಂತಹ ಸಂದರ್ಭ ಬಂದರೂ ಸಿದ್ದರಾಮಯ್ಯ ಸವಾಲುಗಳನ್ನು ಸಮರ್ಥವಾಗಿ ಎದುರಿಸುತ್ತಾರೆ. ಕಾಂಗ್ರೆಸ್ ಸೇರಿದ ಸಂದರ್ಭದಲ್ಲಿ ಉಪ ಚುನಾವಣೆಯಲ್ಲಿ ಸಿದ್ದರಾಮಯ್ಯ ಸೋಲಿಸಲು ನಾನು ಹಾಗೂ ಹೆಚ್.ಡಿ.ಕುಮಾರಸ್ವಾಮಿ ಇನ್ನಿಲ್ಲದ ಪ್ರಯತ್ನ ಮಾಡಿದ್ದೆವು. ಆದರೆ ಅದು ಸಾಧ್ಯವಾಗಲಿಲ್ಲ. ಅಂತಹ ಕಠಿಣ ಪರಿಸ್ಥಿತಿಯಲ್ಲಿ ತಾಯಿ ಚಾಮುಂಡೇಶ್ವರಿ ಆಶೀರ್ವಾದ ಸಿದ್ದರಾಮಯ್ಯ ಅವರ ಮೇಲಿತ್ತು ಎಂದು ಹೇಳಿದರು. ಸಿದ್ದರಾಮಯ್ಯ ಜೊತೆ ಈಗ ಡಿ.ಕೆ.ಶಿವಕುಮಾರ್ ಕೈ ಜೋಡಿಸಿದ್ದಾರೆ. ಇಬ್ಬರು ಜೋಡೆತ್ತಿನ ರೀತಿ ಕೆಲಸ ಮಾಡುತ್ತಿದ್ದಾರೆ. ಇನ್ನು ದಲಿತ ನಾಯಕರಾದ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ರಾಜ್ಯ ಮಟ್ಟಕ್ಕೆ ಕರೆದೊಯ್ದಿದ್ದಾರೆ. ಎಲ್ಲರೂ ಶಕ್ತಿ ಮೀರಿ ಕೆಲಸ ಮಾಡುತ್ತಿದ್ದು, ಇದು ಸಾಕಾಗುವುದಿಲ್ಲ, ಮತ್ತಷ್ಟು ಕೆಲಸ ಮಾಡಬೇಕು ಎಂದು ಸಲಹೆಯಿತ್ತರು.

ಟಿವಿ ಪುಣ್ಯಾತ್ಮರೇ ನಿಮಗೆ ಕೈ ಮುಗಿಯಬೇಕು....!

ಅತ್ಯಾಚಾರ ಪ್ರಕರಣವನ್ನು ಮೂರು ತಿಂಗಳು ಸತತವಾಗಿ ತೋರಿಸಿದ್ರೆ, ಕೊಲೆ ಪ್ರಕರಣವನ್ನು ಒಂದು ತಿಂಗಳು ತೋರಿಸಿದ್ರೆ, ಈಗ ಸಿದ್ದರಾಮಯ್ಯ ಅವರ ಎಫ್‌ಐಆರ್ ಪ್ರಕರಣವನ್ನು ತೋರಿಸುತ್ತಿದ್ದೀರಾ, ಟಿವಿ ಪುಣ್ಯಾತ್ಮರೇ ನಿಮಗೆ ಕೈ ಮುಗಿಯಬೇಕು. ಒಂದು ಎಫ್‌ಐಆರ್‌ನಾ ಎಷ್ಟು ದಿನ ಅಂತ ತೋರಿಸುತ್ತೀರಾ ಎಂದು ಪ್ರಶ್ನಿಸಿದರು. ಸಮಾಜದಲ್ಲಿ ಬಹಳಷ್ಟು ವಿಚಾರಗಳಿರುತ್ತವೆ. ಆದರೆ ಇಂತಹ ವಿಚಾರಗಳನ್ನು ನಿರಂತರವಾಗಿ ತೋರಿಸುತ್ತಿದ್ದೀರಲ್ಲಾ... ಇದು ಸರಿನಾ ಎಂದು ಜಿ.ಟಿ.ದೇವೇಗೌಡರು ಪ್ರಶ್ನಿಸಿದರು.

'ರಾಜಕೀಯ'

ದಸರಾ ಬಗ್ಗೆ ಒಂದೇ ಒಂದು ಮಾತನಾಡಿ, ಉಳಿದಂತೆ ತಮ್ಮ ಮಾತು ಗಳನ್ನು ಸಿದ್ದರಾಮಯ್ಯ ರಾಜೀನಾಮೆ ಕೇಳಿದ ನಾಯಕರ ವಿರುದ್ಧ ಟೀಕೆಗಳ ಸುರಿಮಳೆಗೈಯ್ದರು. ಜೆಡಿಎಸ್ ನಾಯಕ ರೊಂದಿಗಿನ ತಮ್ಮ ಅಸಮಾಧಾನವನ್ನು ಹೊರಹಾಕಲು ನಾಡಹಬ್ಬ ದಸರಾ ಕಾರ್ಯಕ್ರಮವನ್ನು ಬಳಸಿಕೊಂಡರು. ದಸರಾ ಉದ್ಘಾಟಕರಾದ ನಾಡೋಜ ಡಾ. ಹಂಪ ನಾಗರಾಜಯ್ಯನವರು ರಾಜಕೀಯ ವಿಚಾರ ಪ್ರಸ್ತಾಪಿಸಿದರು. ಸರ್ಕಾರ ಪತನಗೊಳಿಸುವ ಕೆಲಸಕ್ಕೆ ವಿರೋಧ ಪಕ್ಷಗಳು ಕೈ ಹಾಕಬಾರದು ಎಂದು ಮನವಿ ಮಾಡಿದರು. ದಸರಾ ವಿಚಾರಗಳ ಬಗ್ಗೆ ಡಾ. ಹಂಪ ನಾಗರಾಜಯ್ಯ ಅವರ ಭಾಷಣದಲ್ಲಿ ಉಲ್ಲೇಖ ವಿದ್ದರೂ ಚುನಾವಣೆ, ಸರ್ಕಾರದ ಅಸ್ತಿತ್ವ ಹೀಗೆ ಹಲವು ವಿಷಯಗಳನ್ನು ಹೆಚ್ಚಾಗಿಯೇ ಪ್ರಸ್ತಾಪಿಸಿದರು. ಒಟ್ಟಾರೆ ಇಡೀ ದಸರಾ ಉದ್ಘಾಟನಾ ವೇದಿಕೆ ರಾಜಕೀಯ ವೇದಿಕೆ ಯಾಗಿಯೂ ಪರಿಣಮಿಸಿತು. ಪ್ರಾಯಶಃ ಈ ಹಿಂದೆಂದೂ ಇಷ್ಟರ ಮಟ್ಟಿಗೆ ದಸರಾ ಉದ್ಘಾಟನೆ ವೇದಿಕೆಯಲ್ಲಿ ರಾಜಕೀಯ ಪ್ರಸ್ತಾಪವಾಗಿರಲಿಲ್ಲ ಎಂದು ನೆರೆದಿದ್ದವರು ಮಾತನಾಡಿಕೊಳ್ಳುವಂತಾಯಿತು.

ಅ.20,'ಗಾತಾ ರಹೇ ಮೇರಾ ದಿಲ್' ಸಂಗೀತ ಕಾರ್ಯಕ್ರಮ

ಮೈಸೂರು, ಅ.2(ಪಿಎಂ)- ಮೆಲೋಡಿಕ್ ಮೆಡಿಕ್ಸ್ ವತಿಯಿಂದ 'ಗಾತಾ ರಹೇ ಮೇರಾ ದಿಲ್' ಶೀರ್ಷಿಕೆಯಡಿ ಅ.20ರಂದು ಖ್ಯಾತ ಗಾಯಕರಾದ ಕಿಶೋರ್ ಕುಮಾರ್ ಮತ್ತು ಲತಾ ಮಂಗೇಶ್ಕರ್ ಅವರ 60, 70 ಮತ್ತು 80ರ ದಶಕದ ಸೂಪರ್‌ಹಿಟ್ ಚಲನಚಿತ್ರಗಳ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಅಂದು ಸಂಜೆ 5.15ರಿಂದ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ.

ಮೈಸೂರು ಅರಮನೆಯಲ್ಲಿ ಖಾಸಗಿ ದರ್ಬಾರ್ ವೈಭವ

●ರತ್ನಖಚಿತ ಸಿಂಹಾಸನವನ್ನೇರಿ ದರ್ಬಾರ್ ನಡೆಸಿದ ಯದುವೀರ್ ●ಪಟ್ಟದ ಆನೆ, ಕುದುರೆ, ಹಸು, ಪುರೋಹಿತರಿಂದ ಯದುವೀರ್‌ಗೆ ಶುಭ ಹಾರೈಕೆ



ಹೊಗಳುಭಟ್ಟರು, ದೀವಟಿಗೆ ಹಾಗೂ ಚೋಪ್ದಾರ್‌ರು ಯದುವೀರರಿಗೆ ಬಹುಪರಾಕ್ ಹಾಕಿ ದರ್ಬಾರ್ ಹಾಲ್‌ಗೆ ಕರೆತರುತ್ತಿರುವುದು.



ತ್ರಿಶಿಕಾ ಕುಮಾರಿ ಒಡೆಯರ್ ಅವರು ಯದುವೀರ ಅವರಿಗೆ ಪಾದಪೂಜೆ ಮಾಡುತ್ತಿರುವುದು.



ಆದ್ಯವೀರ್ ಒಡೆಯರ್ ಅವರು ಯದುವೀರ ಒಡೆಯರ್ ಅವರ ಪಾದಕ್ಕೆ ಪುಷ್ಪಾರ್ಚನೆ

ಮೈಸೂರು, ಅ.3(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಅರಮನೆಯಲ್ಲಿ ರಾಜವಂಶಸ್ಥರ ಖಾಸಗಿ ದರ್ಬಾರ್ ಗುರುವಾರದಿಂದ ಆರಂಭವಾಗಿದ್ದು, ಸಂಸದರಾಗಿ ಆಯ್ಕೆಯಾದ ಬಳಿಕ ಇದೇ ಮೊದಲ ಬಾರಿಗೆ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ರತ್ನಖಚಿತ ಸಿಂಹಾಸನರೂಢರಾಗಿ ಖಾಸಗಿ ದರ್ಬಾರ್ ನಡೆಸಿದರು.

ಅರಮನೆಯಲ್ಲಿ ಸಂಭ್ರಮ ಮನೆ ಮಾಡಿದ್ದು, ಖಾಸಗಿ ದರ್ಬಾರ್ ರಾಜರ ಕಾಲದ ಗತವೈಭವಕ್ಕೆ ಸಾಕ್ಷಿಯಾಯಿತು. ಅರಮನೆಯಲ್ಲಿ ಇಂದು ನವರಾತ್ರಿಯ ಅಂಗವಾಗಿ ನಡೆದ ವಿವಿಧ ಪೂಜಾ ಕೈಂಕರ್ಯಗಳಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್, ಆದ್ಯವೀರ್ ಒಡೆಯರ್ ಪಾಲ್ಗೊಂಡು ಯದುವಂಶದ ಪರಂಪರೆ ಆಚರಣೆಗೆ ನಾಂದಿ ಹಾಡಿದರು.

ಖಾಸಗಿ ದರ್ಬಾರ್: ನವರಾತ್ರಿ ಮೊದಲ ದಿನವಾದ ಇಂದು ಮುಂಜಾನೆ 4.30ಕ್ಕೆ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಎಣ್ಣೆ ಶಾಸ್ತ್ರ ಮಾಡಿಸಲಾಯಿತು. ಬೆಳಗ್ಗೆ 5.45ರಿಂದ 6.10ರೊಳಗೆ ಸಿಂಹಾಸನಕ್ಕೆ ಸಿಂಹದ ಮುಖ ಜೋಡಣೆ ನಡೆಯಿತು. ಬಳಿಕ ಅರಮನೆಯ ಚಾಮುಂಡಿ ತೊಟ್ಟಿಯಲ್ಲಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಕಂಕಣ ಧಾರಣೆ ಮಾಡಲಾಯಿತು. ಕೆಲ ಪೂಜಾ ಕಾರ್ಯ ಜರುಗಿದ ನಂತರ ಬೆಳಗ್ಗೆ 10.30ಕ್ಕೆ ಪಟ್ಟದ ಆನೆಗಳಾದ ಕಂಜನ್, ಭೀಮಾ, ಪಟ್ಟದ ಕುದುರೆ, ಪಟ್ಟದ ಹಸು, ಒಂಟೆ, ಸವಾರಿ ತೊಟ್ಟಿಗೆ ಕರೆತರಲಾಯಿತು. ಅರಮನೆಯ ಆವರಣದಲ್ಲಿರುವ ಶ್ರೀ ಕೋಡಿ ಸೋಮೇಶ್ವರ ದೇವಾಲಯದ ಕಳಸದೊಂದಿಗೆ ದೇವರನ್ನು ತರಲಾಯಿತು. ಪಟ್ಟದ ಆನೆ, ಕುದುರೆ, ಹಸು ಸೇರಿದಂತೆ ಅರಮನೆಯ ಪುರೋಹಿತರು ಕಂಕಣ ಧರಿಸಿದ್ದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಹರಸಿದರು.

ಸವಾರಿ ತೊಟ್ಟಿಯಿಂದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ದರ್ಬಾರ್ ಹಾಲ್‌ಗೆ ಕಟ್ಟಿಗೆಯವರು, ಚೋಪ್ದಾರ್, ದೀವಟಿಗೆ ಹಾಗೂ ರಾಜಮನೆತನದವರು ಸಕಲ ಬಿರುದು ಬಾವಲಿಯೊಂದಿಗೆ ಬಹುಪರಾಕ್ ಹಾಕಿ ಕರೆತಂದರು. ನಂತರ 11 ಗಂಟೆಗೆ ಸಿಂಹಾಸನಾರೋಹಣಕ್ಕೂ ಮುನ್ನ ಕಳಸ ಪೂಜೆ, ಸಿಂಹಾಸನ ಪೂಜೆ ಜರುಗಿತು. ಸಿಂಹಾಸನದ ಸಮೀಪವೇ ನಡೆದ ಕಳಸ ಪೂಜೆಯಲ್ಲಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪಾಲ್ಗೊಂಡು ವಿಧಿ ವಿಧಾನದಂತೆ ಪೂಜೆ ನೆರವೇರಿಸಿದರು. ಪೂಜೆ ಮುಗಿದ ನಂತರ ಸಿಂಹಾಸನಕ್ಕೆ ಮೂರು ಸುತ್ತು ಪ್ರದಕ್ಷಿಣೆ ಹಾಕಿದರು. ಸಿಂಹಾಸನಕ್ಕೆ ಜೋಡಿಸಲಾಗಿದ್ದ ಸಿಂಹಕ್ಕೆ ಹೂವಿನ ಹಾರ ಹಾಕಿ ಪೂಜೆ ಸಲ್ಲಿಸಿದರು. ನಂತರ ರತ್ನಖಚಿತ ಸಿಂಹಾಸನವೇರಿ ವಿರಾಜಮಾನರಾಗಿ ಕಂಗೊಳಿಸಿದರು.

ಸಿಂಹಾಸನವೇರಿದ ನಂತರ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯ, ಪರಕಾಲ ಮಠ, ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ದೇವಾಲಯ, ಉತ್ತನಹಳ್ಳಿ ಶ್ರೀ ತ್ರಿಪುರಸುಂದರಿ ಜ್ವಾಲಾಮುಖಿ ದೇವಾಲಯ, ಶ್ರೀರಂಗಪಟ್ಟಣದ ಶ್ರೀರಂಗನಾಥೇಶ್ವರ ದೇವಾಲಯ, ಮೇಲುಕೋಟೆಯ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯ, ಅರಮನೆಯ ಆವರಣದಲ್ಲಿರುವ ಎಲ್ಲಾ ದೇವಾಲಯಗಳು ಸೇರಿದಂತೆ ಸುಮಾರು 23 ದೇವಾಲಯಗಳಿಂದ ತಂದಿದ್ದ ಪ್ರಸಾದವನ್ನು ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ನೀಡಿ ತೀರ್ಥವನ್ನು ಪ್ರೋಕ್ಷಣೆ ಮಾಡಲಾಯಿತು.

ಎಲ್ಲಾ ದೇವಾಲಯಗಳಿಂದ ಆಗಮಿಸಿದ್ದ ಅರ್ಚಕರಿಂದ ಪ್ರಸಾದ ವಿನಿಯೋಗವಾದ ಬಳಿಕ ಸಿಂಹಾಸನದ ಮುಂದೆ ಪರದೆಯನ್ನು ಬಿಟ್ಟು ಯದುವೀರ ಒಡೆಯರ್ ಅವರಿಗೆ ದೃಷ್ಟಿ ತೆಗೆಸಲಾಯಿತು. ನಂತರ ಯದುವೀರ್ ಅವರು ಸಿಂಹಾಸನದ ಮೇಲೆ ಎದ್ದುನಿಂತು ಸೆಲ್ಯೂಟ್ ಹೊಡೆದು ಹೊಗಳುಭಟ್ಟರು ಹಾಗೂ ದೀವಟಿಗೆಕಾರರಿಂದ ಗೌರವ ಹಾಗೂ ಬಹುಪರಾಕ್ ಪಡೆದು ಸವಾರಿ ತೊಟ್ಟಿಯತ್ತ ತೆರಳಿದರು. ಸವಾರಿ ತೊಟ್ಟಿಗೆ ಆಗಮಿಸಿದ ಯದುವೀರ್ ಅವರಿಗೆ ತ್ರಿಶಿಕಾ ಕುಮಾರಿ ಒಡೆಯರ್ ಅವರು ಪಾದ ಪೂಜೆ ಮಾಡಿದರೆ, ಪುತ್ರ ಆದ್ಯವೀರ್ ಒಡೆಯರ್ ಅವರು ಪ್ರಮೋದಾ ದೇವಿ ಹಾಗೂ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ನಮನ ಸಲ್ಲಿಸಿದರು.

ಪೊಲೀಸ್ ಬ್ಯಾಂಡ್ ವಾದನ: ಖಾಸಗಿ ದರ್ಬಾರ್‌ಗೆ ಇಂದು ಎಂದಿನಂತೆ ಪೊಲೀಸ್ ಬ್ಯಾಂಡ್ ವಾದನದ ಸದಸ್ಯರು ನುಡಿಸಿದ ಸಂಗೀತ ಖಾಸಗಿ ದರ್ಬಾರ್‌ಗೆ ಕಳೆ ಹೆಚ್ಚಿಸಿತ್ತು. ಪ್ರತಿ ವರ್ಷವೂ ದರ್ಬಾರ್ ವೇಳೆ ಪೊಲೀಸ್ ಬ್ಯಾಂಡ್ ವಾದನ ಇರಲಿದ್ದು, ಇಂದು ಚಾಮರಾಜೇಂದ್ರ ಒಡೆಯರ್ ವಿರಚಿತ ಗೀತೆಗಳನ್ನು ನುಡಿಸಿದರು.

ಬಿಗಿ ಬಂದೋಬಸ್ತ್: ಖಾಸಗಿ ದರ್ಬಾರ್ ಹಿನ್ನೆಲೆಯಲ್ಲಿ ಅರಮನೆಯ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು. ಇದರಿಂದ ಯಾರೂ ದರ್ಬಾರ್ ಹಾಲ್‌ಗೆ ಪ್ರವೇಶಿಸಲು ಅವಕಾಶ ನೀಡದೆ, ಕೇವಲ ರಾಜಮನೆತನದ ಪ್ರಮುಖರ ಸಮ್ಮುಖದಲ್ಲಿ ಖಾಸಗಿ ದರ್ಬಾರ್ ನಡೆಯಿತು.

ಕಾಂಗ್ರೆಸ್ ಸರ್ಕಾರ 9 ವರ್ಷ ಆಡಳಿತ ನಡೆಸಲು ಚಾಮುಂಡೇಶ್ವರಿ ಆಶೀರ್ವಾದವಿದೆ



ಮೈಸೂರು, ಅ.3(ಬಿಎಲ್‌ಯು)– ಶರನ್ನವರಾತ್ರಿ ಸಂದರ್ಭದಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರ 9 ವರ್ಷ ಆಡಳಿತ ನಡೆಸಲು ತಾಯಿ ಚಾಮುಂಡೇಶ್ವರಿ ಆಶೀರ್ವಾದವಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು. ಕಳೆದ ವರ್ಷ ಬರಗಾಲದ ಕಾರಣ ಸರಳ ದಸರಾ ಆಚರಣೆ ಮಾಡಿದ್ದೆವು. ಆದರೆ ಈ ಬಾರಿ ಸಮೃದ್ಧ ಮಳೆಯಾಗಿದ್ದು, ಎಲ್ಲಾ ಅಣೆಕಟ್ಟೆಗಳು ತುಂಬಿವೆ. ಇದರಿಂದ ನಾನು ಹಾಗೂ ಸಿದ್ದರಾಮಯ್ಯ ನಾಲ್ಕು ಅಣೆಕಟ್ಟೆಗಳಲ್ಲಿ ಗಂಗೆ ಪೂಜೆ ಮಾಡಿದ್ದೇವೆ ಎಂದರು. ದೇವರ ಪ್ರಾರ್ಥನೆ ಮಾಡಿದರೆ ಯಾವುದೇ ಕಾರಣಕ್ಕೂ ಸೋಲಾಗುವುದಿಲ್ಲ. ನಾಡಿನಲ್ಲಿ ಜಲಕ್ಷಾಮ ದೂರವಾಗಿ ಉತ್ತಮ ಮಳೆ, ಬೆಳೆಯಾಗಲು ಶಕ್ತಿ ದೇವತೆ ತಾಯಿ ಚಾಮುಂಡೇಶ್ವರಿ ಕೃಪಾಶೀರ್ವಾದ ಕಾರಣ ಎಂದು ಹೇಳಿದರು.

ಚುನಾವಣಾಪೂರ್ವದಲ್ಲಿ ಇದೇ ಚಾಮುಂಡಿಬೆಟ್ಟಕ್ಕೆ ಬಂದು 2 ಸಾವಿರ ರೂ. ಕಾಣಿಕೆ ನೀಡಿ ಗೃಹಲಕ್ಷ್ಮಿ ಸೇರಿದಂತೆ ಇತರೆ ಗ್ಯಾರಂಟಿ ಯೋಜನೆ ಸಾಕಾರಗೊಳ್ಳಲು ತಾಯಿ ಆಶೀರ್ವಾದ ಪಡೆದೆವು. ಅದರಂತೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ದೇವಿ ಮುಂದೆ ನುಡಿದಂತೆ ಗ್ಯಾರಂಟಿ ಯೋಜನೆ ಜಾರಿ ಮಾಡಿದ್ದೇವೆ ಎಂದರು.

ಪ್ರಜಾಪ್ರಭುತ್ವ ವಿರೋಧಿಗಳನ್ನು ತಡೆಯಲು ಪ್ರತಿಜ್ಞೆ ಮಾಡೋಣ



ಮೈಸೂರು, ಅ.3(ಬಿಎಲ್‌ಯು)– ಪ್ರಜಾಪ್ರಭುತ್ವ ವಿರೋಧಿಗಳನ್ನು ತಡೆಯುವ ನಿಟ್ಟಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಿರ್ಮಾಣ ಮಾಡಲು ದಸರಾದಲ್ಲಿ ಪ್ರತಿಜ್ಞೆ ಮಾಡೋಣ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕರೆ ನೀಡಿದರು. ನಮ್ಮ ಆಚಾರ–ವಿಚಾರ, ಧರ್ಮ ಉಪಾಸನೆ ಮಾಡಲು ಸಂವಿಧಾನ ನಮಗೆ ಮುಕ್ತ ಅವಕಾಶ ನೀಡಿದೆ. ಜನರು ಸಂವಿಧಾನಬದ್ಧವಾಗಿ ಹಕ್ಕುಗಳನ್ನು ಅನುಭವಿಸಲು ಜಾಗೃತಿಗಾಗಿ ಸಂವಿಧಾನ ಜಾಗೃತಿ ಜಾಥಾ ನಡೆಸಲಾಯಿತು ಎಂದರು. ನಮ್ಮ ಸರ್ಕಾರ ಪಂಚ ಗ್ಯಾರಂಟಿಗಳನ್ನು ನೀಡಿ ಜನರ ಜೀವನ ಸುಧಾರಣೆಗಾಗಿ ಸರ್ವ ಪ್ರಯತ್ನ ಮಾಡುತ್ತಿದೆ ಎಂದು ಡಾ.ಮಹದೇವಪ್ಪ ತಿಳಿಸಿದರು.

ಚಾಮುಂಡಿಗೆ ಬ್ರಾಹ್ಮಿ ಅಲಂಕಾರ; ಕೆಂಪು ರೇಷ್ಮೆ ಸೀರೆಯಲ್ಲಿ ಕಂಗೊಳಿಸಿದ ಶಕ್ತಿದೇವತೆ, ಆಸನಗಳು ಖಾಲಿ ಖಾಲಿ...!

ಮೈಸೂರು, ಅ.3(ಬಿಎಲ್‌ಯು)– ಬ್ರಾಹ್ಮಿ ಮುಹೂರ್ತದಲ್ಲಿ ಚಾಮುಂಡೇಶ್ವರಿಗೆ ಪೂಜೆ, ಕೆಂಪು ರೇಷ್ಮೆ ಸೀರೆಯಲ್ಲಿ ಕಂಗೊಳಿಸಿದ ಶಕ್ತಿದೇವತೆ, ಜನರಿಗೆ ಮುಕ್ತ ಅವಕಾಶವಿಲ್ಲದೆ ಆಸನಗಳು ಖಾಲಿ... ಖಾಲಿ... ಯದುವೀರ್ ಗೈರು, ತಳಿರು ತೋರಣ, ಆಕರ್ಷಕ ರಂಗೋಲಿಯ ಚಿತ್ತಾರ, ಬರ, ಕಾವೇರಿ ಗಲಾಟೆ ಇಲ್ಲದೆ ಅದ್ಧೂರಿ ದಸರಾ.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಇಂದು ನಡೆದ ವಿಶ್ವ ವಿಖ್ಯಾತ ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭದ ವಿಶೇಷತೆಗಳಿವು.

ಶರನ್ನವರಾತ್ರಿಯ ಆರಂಭದ ದಿನವಾದ ಇಂದು ಚಾಮುಂಡಿಬೆಟ್ಟದಲ್ಲಿ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ಮುಂಜಾನೆ ವಿಶೇಷ ಪೂಜೆ ನೆರವೇರಿಸಲಾಯಿತು.

ಬ್ರಾಹ್ಮಿ ಮುಹೂರ್ತದಲ್ಲಿ ಶಕ್ತಿ ದೇವತೆಗೆ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ರುದ್ರಾಭಿಷೇಕ, ಪಂಚಾಮೃತಾಭಿಷೇಕ, ಕುಂಕುಮಾರ್ಚನೆ ಸೇರಿದಂತೆ ಹಲವು ವಿಶೇಷ ಪೂಜೆ ನಡೆಯಿತು. ನಾಡದೇವತೆಗೆ ಬ್ರಾಹ್ಮಿ ಅಲಂಕಾರ ನೆರವೇರಿತು.

ದಸರಾ ಉದ್ಘಾಟನಾ ಸಮಾರಂಭದ ವೇದಿಕೆಯಲ್ಲಿ ಬೆಳ್ಳಿರಥದಲ್ಲಿದ್ದ ತಾಯಿ ಚಾಮುಂಡೇಶ್ವರಿ ದೇವಿ ಉತ್ಸವ ಮೂರ್ತಿ ಕೆಂಪು ರೇಷ್ಮೆ ಸೀರೆಯಲ್ಲಿ ವಿವಿಧ ಪುಷ್ಪಗಳಿಂದ ಕಂಗೊಳಿಸುತ್ತಿತ್ತು. ದಸರಾ ಉದ್ಘಾಟನೆ ವೇಳೆ ಹಾಗೂ ತರುವಾಯ ಜನಪ್ರತಿನಿಧಿಗಳು ಸೇರಿದಂತೆ ಅಧಿಕಾರಿಗಳು ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡಿ ಇಷ್ಟಾರ್ಥ ನೆರವೇರಿಸುವಂತೆ ಪ್ರಾರ್ಥಿಸಿದರು.



ಕೆಂಪು ರೇಷ್ಮೆ ಸೀರೆಯಲ್ಲಿ ಕಂಗೊಳಿಸಿದ ಶಕ್ತಿದೇವತೆ ಚಾಮುಂಡೇಶ್ವರಿ.

ಉದ್ಘಾಟನಾ ಸಮಾರಂಭದಲ್ಲಿ ಸಾವಿರಕ್ಕೂ ಹೆಚ್ಚು ಆಸನಗಳನ್ನು ಹಾಕಲಾಗಿತ್ತು. ಆದರೆ ಸಾರ್ವಜನಿಕರನ್ನು ಒಳಗೆ ಬಿಡಲಿಲ್ಲ. ಇದರಿಂದ ಇದು ಜನಸಾಮಾನ್ಯರ ದಸರಾವೋ, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ದಸರಾವೋ ಎಂಬ ಅನುಮಾನಗಳು ಕಾಡಿದವು.

ಕಂಕಣಧಾರಿಯಾಗಿ ಖಾಸಗಿ ದರ್ಬಾರ್‌ನಲ್ಲಿ ಭಾಗಿಯಾಗಿದ್ದ ಕಾರಣ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ದಸರಾ ಉದ್ಘಾಟನಾ ಸಮಾರಂಭಕ್ಕೆ ಗೈರಾಗಿದ್ದರು.

ದಸರಾ ಉತ್ಸವ ಉದ್ಘಾಟನಾ ಸಮಾರಂಭದ ವಿಶೇಷತೆಗಳು

ದಸರಾ ಉದ್ಘಾಟನೆ ಹಿನ್ನೆಲೆಯಲ್ಲಿ ಚಾಮುಂಡಿ ಬೆಟ್ಟದ ಮೇಲೆ ರಸ್ತೆ ಉದ್ದಕ್ಕೂ ಹಾಕಿದ್ದ ತಳಿರು ತೋರಣ, ಸ್ವಾಗತ ಕಮಾನು, ರಸ್ತೆಯಲ್ಲಿ ವರ್ಣರಂಜಿತ ಬಿಡಿಸಿದ್ದ ರಂಗೋಲಿಯ ಚಿತ್ತಾರ ಅತ್ಯಾಕರ್ಷಕವಾಗಿತ್ತು. ಸಾಮಾನ್ಯವಾಗಿ ದಸರಾ ಸಂದರ್ಭದಲ್ಲಿ ಬರಗಾಲ, ಕಾವೇರಿ ಗಲಾಟೆಯಂತಹ ಘಟನೆಗಳು ಅದ್ಧೂರಿ ದಸರಾಗೆ ಅಡ್ಡಿಯಾಗಿರುತ್ತಿತ್ತು. ಆದರೆ ಈ ಬಾರಿ ಸಮೃದ್ಧ ಮಳೆ, ಬೆಳೆಯಾಗಿರುವ ಕಾರಣ ವಿಜೃಂಭಣೆಯ ದಸರಾ ಆಚರಿಸಲಾಗುತ್ತಿದೆ.



ಉದ್ಘಾಟನಾ ಸಮಾರಂಭದಲ್ಲಿ ಸಾವಿರಕ್ಕೂ ಹೆಚ್ಚು ಆಸನಗಳಿದ್ದರೂ ಜನರಿಲ್ಲದೆ ಖಾಲಿಯಾಗಿತ್ತು.

ಸಿಎಂ ಸಿದ್ದರಾಮಯ್ಯ ಪತ್ನಿ ಪಾರ್ವತಿ ಹೆಸರಿನ 14 ನಿವೇಶನಗಳ ಕ್ರಯಪತ್ರ ರದ್ದು

ಪಾರ್ವತಿ ಖಾಸಗಿ ಹಾಜರಾತಿ ಪಡೆದು ನೋಂದಣಿ ರದ್ದುಪಡಿಸಿದ ಉಪ ನೋಂದಣಾಧಿಕಾರಿ ರುಕ್ಮಿಣಿ

ಮೈಸೂರು, ಅ.3(ಆರ್‌ಕೆ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ ಹೆಸರಿಗೆ ಮಾಡಲಾಗಿದ್ದ 14 ನಿವೇಶನಗಳ ಕ್ರಯಪತ್ರಗಳ ನೋಂದಣಿಯನ್ನು ಕಡೆಗೂ ರದ್ದುಗೊಳಿಸಲಾಗಿದೆ.

ವಿವಾದಾತ್ಮಕ 14 ನಿವೇಶನಗಳ ಕ್ರಯಪತ್ರ ನೋಂದಣಿ ರದ್ದುಗೊಳಿಸುವಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಆಯುಕ್ತ ಎ.ಎನ್. ರಘುನಂದನ್ ಅವರು ಅಧಿಕೃತ ಜ್ಞಾಪನ ಹೊರಡಿಸಿದ ಹಿನ್ನೆಲೆಯಲ್ಲಿ ಮಂಗಳವಾರ ಸಂಜೆ 6.30 ಗಂಟೆ ವೇಳೆಗೆ ಮೈಸೂರಿನ ಟಿ.ಕೆ. ಲೇಔಟ್‌ನಲ್ಲಿರುವ ಸಿಎಂ ಸಿದ್ದರಾಮಯ್ಯ ನಿವಾಸಕ್ಕೆ ತೆರಳಿದ ಜಿಲ್ಲಾ ಹೆಚ್ಚುವರಿ ನೋಂದಣಾಧಿಕಾರಿ ಕಚೇರಿ ಉಪ ನೋಂದಣಾಧಿಕಾರಿ ಪಿ.ರುಕ್ಮಿಣಿ ಹಾಗೂ ಪ್ರಥಮ ದರ್ಜೆ ಸಹಾಯಕ ಕುಮಾರ್ ಸ್ವಾಮಿ ಅವರು, ಪ್ರತೀ ನಿವೇಶನಕ್ಕೆ 1,000 ರೂ. ಹೆಚ್ಚುವರಿ ಶುಲ್ಕ ಪಾವತಿಸಿಕೊಂಡು ಬಿ.ಎಂ.ಪಾರ್ವತಿ ಅವರ ಖಾಸಗಿ ಹಾಜರಾತಿ ಸಹಿ ಪಡೆದು ಸೇಲ್ ಡೀಡ್ ಪತ್ರಗಳನ್ನು ಇಂದು ರದ್ದುಪಡಿಸಿದ್ದಾರೆ.

ಸೇಲ್ ಡೀಡ್ ರದ್ದುಗೊಳಿಸಿರುವ ದಾಖಲೆಗಳಿಗೆ ಮುಡಾ ಕಾರ್ಯದರ್ಶಿ ಪ್ರಸನ್ನ ಕುಮಾರ್ ಸಹ ಸಹಿ ಮಾಡಿದ್ದಾರೆ. ಇಂದು ಬೆಳಗ್ಗೆ 10 ಗಂಟೆಯಿಂದಲೇ ಪ್ರಕ್ರಿಯೆ ಆರಂಭಿಸಿದ ಉಪ ನೋಂದಣಾಧಿಕಾರಿ ರುಕ್ಮಿಣಿ ಅವರು ಮಧ್ಯಾಹ್ನದ ವೇಳೆಗೆ ಪಾರ್ವತಿ ಅವರ ಹೆಸರಿನಲ್ಲಿ ನೋಂದಣಿಯಾಗಿದ್ದ ಕ್ರಯಪತ್ರಗಳನ್ನು ರದ್ದುಗೊಳಿಸಿದರು.

ಇದರಿಂದಾಗಿ ಮೈಸೂರಿನ ವಿಜಯನಗರ 3 ಮತ್ತು 4ನೇ ಹಂತದ 14 ನಿವೇಶನಗಳೂ ಮೂಲ ಮುಡಾ ಹೆಸರಿಗೆ ಬಂದಂತಾಗಿದ್ದು, ಇಸಿಯಲ್ಲೂ ಮಾಲೀಕತ್ವ 'ಮುಡಾ' ಎಂದು ನಮೂದಾಗಿದೆ. ತದ ನಂತರ, ಪಾರ್ವತಿ ಅವರ ವಶದಲ್ಲಿ ರುವ 14 ನಿವೇಶನಗಳ ಮಂಜೂರಾತಿ ಆದೇಶ, ಹಂಚಿಕೆ ಪತ್ರ, ಸ್ವಾಧೀನಪತ್ರ, ಕ್ರಯಪತ್ರ, ಖಾತಾ ನೋಂದಣಿ, ಕಂದಾಯ ನಿಗದಿ ಪತ್ರ, ಹಣ ಸಂದಾಯ ರಶೀದಿ ಮೂಲ ಪ್ರತಿಗಳನ್ನು ಮುಡಾ ಅಧಿಕಾರಿಗಳು ಪಡೆದುಕೊಳ್ಳಬೇಕಾಗಿದೆ.

ಇಡಿ ವಿಚಾರಣೆಗೆ ಹಾಜರಾದ ದೂರುದಾರ ಸ್ನೇಹಮಯಿ ಕೃಷ್ಣ

ಮೈಸೂರು, ಅ.3(ಆರ್‌ಕೆ)–ನಿಯಮ ಉಲ್ಲಂಘಿಸಿ 50:50ರ ಅನುಪಾತದಡಿ ಮುಡಾ ನಿವೇಶನಗಳ ಹಂಚಿಕೆ ಸಂಬಂಧ ಮುಖ್ಯಮಂತ್ರಿಗಳ ವಿರುದ್ಧ ಕೇಳಿಬಂದಿರುವ ಗಂಭೀರ ದೂರಿನ ಹಿನ್ನೆಲೆಯಲ್ಲಿ ದೂರುದಾರನಾದ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಇಂದು ಬೆಂಗಳೂರಿನ ಶಾಂತಿನಗರದಲ್ಲಿರುವ ಜಾರಿ ನಿರ್ದೇಶನಾಲಯ (ಇಡಿ)ದ ಜಂಟಿ ನಿರ್ದೇಶಕರ ಮುಂದೆ ವಿಚಾರಣೆಗೆ ಹಾಜರಾಗಿದ್ದರು.

ಜಾರಿ ನಿರ್ದೇಶನಾಲಯ ಸಮನ್ಸ್ ಜಾರಿ ಮಾಡಿತ್ತು. ಕೃಷ್ಣರಿಂದ ಆಧಾರ್, ಪಾನ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಪ್ರತಿ, ಹೊಂದಿರುವ ಸ್ಥಿರಾಸ್ತಿಗಳ ಸಂಬಂಧದ ದಾಖಲೆ ಪ್ರತಿಗಳನ್ನು ಅಧಿಕಾರಿಗಳು ಪಡೆದುಕೊಂಡರು.

ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ ಮಂಜೂರು ಮಾಡಿದ್ದ ಸಿಎ ನಿವೇಶನಗಳ ದಾಖಲಾತಿ, ಈ ಹಿಂದೆ ದೇವನೂರು 2ನೇ ಹಂತ ಬಡಾವಣೆ ನಿರ್ಮಾಣಕ್ಕೆ ಬಳಸಿಕೊಳ್ಳಲಾದ ಕೆಸರೆಯ ಭೂಮಿ ಪಾರ್ವತಿ ಅವರ ಹೆಸರಿಗೆ ಬರುವ ಮುಂದಿನ ಸ್ಥಿತಿಗತಿಗಳ ಮಾಹಿತಿಯನ್ನು ವಿಚಾರಣೆ ವೇಳೆ ಇಡಿ ಅಧಿಕಾರಿಗಳು ಸ್ನೇಹಮಯಿ ಕೃಷ್ಣರಿಂದ ಪಡೆದು, ಹೇಳಿಕೆಯನ್ನು ದಾಖಲಿಸಿದರು.

ಅದೇ ವೇಳೆ ಮೈಸೂರು ನಗರದಾದ್ಯಂತ ಲಭ್ಯವಾಗಿರುವ ಖಾಲಿ ನಿವೇಶನಗಳನ್ನು ಪತ್ತೆ ಮಾಡಿ ಸೈಟ್ ನಂಬರ್ ಸಮೇತ ಪಟ್ಟಿಯನ್ನು ಈ ಹಿಂದಿನ ಮುಡಾ ಆಯುಕ್ತ ಪಿ.ಎಸ್.ಕಾಂತರಾಜು, ಕಾರ್ಯದರ್ಶಿ ಎಂ.ಕೆ.ಸವಿತ ಅವರು ಸಿದ್ಧಪಡಿಸಿದ್ದರು. ಹೀಗೆ 8,000 ನಿವೇಶನಗಳನ್ನು ನಂತರ 2019ರಿಂದೀಚೆಗೆ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿದ ಡಾ. ಡಿ.ಬಿ.ನಟೇಶ್ ಮತ್ತು ಜಿ.ಟಿ.ದಿನೇಶ್ ಕುಮಾರ್ 50:50, ಪ್ರೋತ್ಸಾಹದಾಯಕ ಹಾಗೂ ಬದಲಿ ನಿವೇಶನಗಳಾಗಿ ಕರ್ನಾಟಕ ನಗರ ಅಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ ಉಲ್ಲಂಘಿಸಿ ಮನಬಂದಂತೆ ಹಂಚಿಕೆ ಮಾಡಿದ್ದಾರೆ ಎಂಬ ವಿಷಯವನ್ನು ದೂರುದಾರ ಸ್ನೇಹಮಯಿ ಕೃಷ್ಣ ವಿಚಾರಣೆ ವೇಳೆ ಇಡಿ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ದೇಶ - ವಿದೇಶ

ಗಾಜಾ ಸರ್ಕಾರದ ಮುಖ್ಯಸ್ಥ, ಇಬ್ಬರು ಹಿರಿಯ ಹಮಾಸ್ ನಾಯಕರ ಹತ್ಯೆ: ಇಸ್ರೇಲ್



ಜೆರುಸಲೇಂ: ಸುಮಾರು ಒಂದು ವರ್ಷದಿಂದ ಪ್ಯಾಲೆಸ್ತೀನ್ ಉಗ್ರಗಾಮಿಗಳೊಂದಿಗೆ ಹೋರಾಡುತ್ತಿರುವ ನಮ್ಮ ಸೇನೆಯು ಗಾಜಾದಲ್ಲಿ 3 ತಿಂಗಳ ಹಿಂದೆ ನಡೆದ ದಾಳಿಯಲ್ಲಿ ಮೂವರು ಹಿರಿಯ ಹಮಾಸ್ ನಾಯಕರನ್ನು ಕೊಂದಿದೆ ಎಂದು ಇಸ್ರೇಲಿ ಮಿಲಿಟರಿ ಹೇಳಿದೆ. ಈ ದಾಳಿಯಲ್ಲಿ ಗಾಜಾ ಪಟ್ಟಿಯಲ್ಲಿರುವ ಹಮಾಸ್ ಸರ್ಕಾರದ ಮುಖ್ಯಸ್ಥ ರಾಹ್ವಿ ಮುಶ್ತಾಹಾ, ಹಮಾಸ್ ರಾಜಕೀಯ ಬ್ಯೂರೋದ ಭದ್ರತಾ ಖಾತೆ ಹೊಂದಿದ್ದ ಸಮೇಹ್ ಅಲ್–ಸಿರಾಜ್ ಮತ್ತು ಕಮಾಂಡರ್ ಸಮಿ ಔದೆ ಅವರನ್ನು ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್ ಮಿಲಿಟರಿ ತಿಳಿಸಿದೆ. ಮುಷ್ತಾಹಾ ಹಮಾಸ್‌ನ ಅತ್ಯಂತ ಹಿರಿಯ ನಾಯಕರಲ್ಲಿ ಒಬ್ಬರಾಗಿದ್ದರು ಮತ್ತು ಹಮಾಸ್‌ನ ಪಡೆ ನಿಯೋಜನೆಗೆ ಸಂಬಂಧಿಸಿದ ನಿರ್ಧಾರಗಳ ಮೇಲೆ ನೇರ ಪರಿಣಾಮ ಬೀರಿದ್ದರು. ಹಮಾಸ್‌ನ ಉನ್ನತ ನಾಯಕ ಯಾಹ್ಯಾ ಸಿನ್ವಾರ್‌ಗೆ ಮುಶ್ತಾಹಾ "ಬಲಗೈ" ಬಂಟ ಆಗಿದ್ದರು ಎಂದು ಇಸ್ರೇಲ್ ಸೇನೆ ಹೇಳಿದೆ.

ಮಣಿಪುರ: ಅಪಹರಣಗೊಂಡಿದ್ದ ಇಬ್ಬರು ಯುವಕರ ಬಿಡುಗಡೆ



ಇಂಫಾಲ್: ಮಣಿಪುರದ ಕಾಂಗ್‌ಪೊಕ್ಪಿ ಜಿಲ್ಲೆಯಲ್ಲಿ ಅಪಹರಣಕ್ಕೆ ಒಳಗಾಗಿದ್ದ ಇಬ್ಬರು ಯುವಕರನ್ನು ಬಿಡುಗಡೆಗೊಳಿಸಲಾಗಿದೆ. ಏಳು ದಿನಗಳ ಬಳಿಕ ಇಂದು (ಗುರುವಾರ) ಮುಂಜಾನೆ ಅವರನ್ನು ಪೊಲೀಸರಿಗೆ ಒಪ್ಪಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ರಾಜ್ಯ ಪೊಲೀಸರು ಮತ್ತು ಅಸ್ಸಾಂ ಪಡೆಗಳ ಬೆಂಗಾವಲಿನಲ್ಲಿ ಇಬ್ಬರು ಯುವಕರು ಸುರಕ್ಷಿತವಾಗಿ ಇಂಫಾಲ್ ತಲುಪಿದ್ದಾರೆ. ಯುವಕರು ಈಗ ಇಂಫಾಲ್ ಪೊಲೀಸ್ ಠಾಣೆಯಲ್ಲಿದ್ದು, ಕೆಲವು ಔಪಚಾರಿಕ ಕಾರ್ಯಗಳನ್ನು ಪೂರ್ಣಗೊಳಿಸುತ್ತಿದ್ದಾರೆ.

ಅವರ ಕುಟುಂಬ ಸದಸ್ಯರು ಕೂಡ ಠಾಣೆಯಲ್ಲಿದ್ದು, ಅವರನ್ನು ಶೀಘ್ರವೇ ಅವರ ಕುಟುಂಬದವರಿಗೆ ಒಪ್ಪಿಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ಸೆಪ್ಟೆಂಬರ್ 27ರಂದು ಥೌಬಲ್ ಜಿಲ್ಲೆಯ ಮೂವರು ಯುವಕರನ್ನು, ಕಾಂಗ್‌ಪೊಕ್ಪಿಯಲ್ಲಿ ಅಪಹರಿಸಲಾಗಿತ್ತು. ಈ ಪೈಕಿ ಒಬ್ಬನನ್ನು ಬಿಡುಗಡೆ ಮಾಡಿದ್ದು, ಇನ್ನಿಬ್ಬರನ್ನು ಸೆರೆಯಲ್ಲಿ ಇಡಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ನೇಪಾಳ ಪ್ರವಾಹ: ಮೃತರ ಸಂಖ್ಯೆ 224ಕ್ಕೆ ಏರಿಕೆ



ಕಠ್ಮಂಡು: ಇತ್ತೀಚೆಗೆ ಸಂಭವಿಸಿದ ಪ್ರವಾಹ ಮತ್ತು ಭೂಕುಸಿತದಿಂದ ಇದುವರೆಗೆ 224 ಮಂದಿ ಸಾವನ್ನಪ್ಪಿರುವುದು ದೃಢಪಟ್ಟಿದೆ. 126 ಮಂದಿ ಗಾಯಗೊಂಡಿದ್ದು 29 ಮಂದಿ ನಾಪತ್ತೆಯಾಗಿದ್ದಾರೆ ಎಂದು ನೇಪಾಳದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ರಕ್ಷಣಾ ಕಾರ್ಯಾಚರಣೆಗೆ 30,700 ಸಿಬ್ಬಂದಿ ಬಳಸಲಾಗಿದ್ದು ಸುಮಾರು 4,331 ಮಂದಿಯನ್ನು ರಕ್ಷಿಸಲಾಗಿದೆ. ಪ್ರವಾಹ ಮತ್ತು ಭೂಕುಸಿತದಿಂದ ಸುಮಾರು 17 ಶತಕೋಟಿ ರೂ. (ನೇಪಾಳ ಕರೆನ್ಸಿ) ನಷ್ಟ ಸಂಭವಿಸಿರುವುದಾಗಿ ಅಂದಾಜು ಮಾಡಲಾಗಿದೆ ಎಂದು ಮುಖ್ಯ ಕಾರ್ಯದರ್ಶಿ ನಾರಾಯಣ ಅರ್ಯಾಲ್ ಹೇಳಿದ್ದಾರೆ. ಪ್ರವಾಹ ಪೀಡಿತ ಪ್ರದೇಶದಿಂದ ವಿದೇಶಿ ಚಾರಣಿಗರ ಸಹಿತ ಸುಮಾರು 900 ಮಂದಿಯನ್ನು ಹೆಲಿಕಾಪ್ಟರ್ ಮೂಲಕ ರಕ್ಷಿಸಲಾಗಿದೆ. ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ. ಪರ್ವತ ಪ್ರದೇಶದಲ್ಲಿ ಸಿಕ್ಕಿಬಿದ್ದಿರುವ ಪ್ರವಾಸಿಗರನ್ನು ರಕ್ಷಿಸಲು ಬಾಡಿಗೆ ಹೆಲಿಕಾಪ್ಟರ್‌ಗಳನ್ನು ಬಳಸಲಾಗುತ್ತಿದೆ ಎಂದು ವರದಿಯಾಗಿದೆ. ಕಳೆದ ಗುರುವಾರ ಆರಂಭಗೊಂಡಿರುವ ಮಳೆ ಪ್ರವಾಹದ ಸ್ಥಿತಿ ಮುಂದುವರಿದಿದೆ.

ಟೀಮ್ ಇಂಡಿಯಾ ಮಾಜಿ ನಾಯಕ ಅಜರುದ್ದೀನ್‌ಗೆ ಇಡಿ ಸಮನ್ಸ್



ಹೈದರಾಬಾದ್: ಹೈದರಾಬಾದ್ ಕ್ರಿಕೆಟ್ ಸಂಸ್ಥೆಯಲ್ಲಿ ನಡೆದಿದೆ ಎನ್ನಲಾದ ಹಣ ದುರುಪಯೋಗ ಕುರಿತಂತೆ ವಿಚಾರಣೆಗೆ ಹಾಜರಾಗಲು ಭಾರತೀಯ ಕ್ರಿಕೆಟ್ ತಂಡದ ಮಾಜಿ ನಾಯಕ ಮೊಹಮದ್ ಅಜರುದ್ದೀನ್‌ಗೆ ಜಾರಿ ನಿರ್ದೇಶನಾಲಯ ಸಮನ್ಸ್ ಜಾರಿ ಮಾಡಿದೆ.

ಹೆಚ್‌ಸಿಎ ಮಾಜಿ ಅಧ್ಯಕ್ಷ ಮೊಹಮದ್ ಅಜರುದ್ದೀನ್ ಅವರ ಅಧಿಕಾರಾವಧಿಯಲ್ಲಿ ಹಣ ದುರುಪಯೋಗದ ಆರೋಪವಿದ್ದು, ಪ್ರಸ್ತುತ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದಾರೆ. ಹೈದರಾಬಾದ್‌ನ ಉಪ್ಪಲ್ನಲ್ಲಿರುವ ರಾಜೀವ್ ಗಾಂಧಿ ಕ್ರಿಕೆಟ್ ಸ್ಟೇಡಿಯಂಗಾಗಿ ಡೀಸೆಲ್ ಜನರೇಟರ್, ಅಗ್ನಿಶಾಮಕ ವ್ಯವಸ್ಥೆಗಳು, ಕ್ಯಾನೋಪಿಗಳ ಖರೀದಿಗೆ ಮಂಜೂರು ಮಾಡಿದ 20 ಕೋಟಿ ದುರ್ಬಳಕೆಯಾಗಿರುವ ಆರೋಪ ಕೇಳಿಬಂದಿದೆ. ತನಿಖೆಗೊಳಪಟ್ಟಿರುವ ಹಣಕಾಸು ವಹಿವಾಟಿನಲ್ಲಿ ಅವರ ಪಾತ್ರವನ್ನು ಸ್ಪಷ್ಟಪಡಿಸಲು ಇಡಿ ಮುಂದೆ ಹಾಜರಾಗಲು ಕಾಂಗ್ರೆಸ್ ನಾಯಕನಿಗೆ ಇದೇ ಮೊದಲ ಬಾರಿಗೆ ಸಮನ್ಸ್ ನೀಡಲಾಗಿದೆ. ಹೈದರಾಬಾದ್ ಕ್ರಿಕೆಟ್ ಸಂಸ್ಥೆ ನಿಧಿಯನ್ನು ಕ್ರಿಮಿನಲ್ ದುರುಪಯೋಗಕ್ಕೆ ಸಂಬಂಧಿಸಿದಂತೆ ಎಸಿಬಿ ಸಲ್ಲಿಸಿದ ಚಾರ್ಜ್‌ಶೀಟ್‌ಗಳ ಆಧಾರದ ಮೇಲೆ ಇಡಿ ತನಿಖೆ ಆರಂಭಿಸಿದೆ

ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಟ್ಟ ವೈದ್ಯರನ್ನೇ ಗುಂಡಿಟ್ಟು ಕೊಂದರು!



ನವದೆಹಲಿ: ಕೋಲ್ಕತಾ ಆರ್‌ಜಿಕರ್ ಆಸ್ಪತ್ರೆ ಪ್ರಕರಣ ಹಸಿರಾಗಿರುವಂತೆಯೇ ಇತ್ತ ದೆಹಲಿ ಆಸ್ಪತ್ರೆಯಲ್ಲಿ ಇಬ್ಬರು ಅಪ್ರಾಪ್ತ ಯುವಕರು ತಮಗೆ ಚಿಕಿತ್ಸೆ ನೀಡಿದ ವೈದ್ಯರನ್ನೇ ಗುಂಡಿಟ್ಟು ಹತ್ಯೆ ಮಾಡಿರುವ ಘಟನೆ ಬೆಳಕಿಗೆ ಬಂದಿದೆ. ದೆಹಲಿಯ ಜೈತ್‌ಪುರದ ಖಾಸಗಿ ಆಸ್ಪತ್ರೆಯಲ್ಲಿ ಇಬ್ಬರು ಅಪ್ರಾಪ್ತರು 55 ವರ್ಷದ ವೈದ್ಯ ಡಾ.ಜಾವೇದ್ ಅಖ್ತರ್‌ರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಆಸ್ಪತ್ರೆ ಮೂಲಗಳ ಪ್ರಕಾರ ಇಬ್ಬರು 16–17 ವರ್ಷ ವಯಸ್ಸಿನವರು ತಡರಾತ್ರಿ ಆಸ್ಪತ್ರೆಗೆ ಬಂದಿದ್ದರು. ಅದರಲ್ಲಿ ಒಬ್ಬ ತನ್ನ ಗಾಯಗೊಂಡ ಕಾಲ್ಬೆರಳಿಗೆ ಡ್ರೆಸ್ಸಿಂಗ್ ಮಾಡಲು ಕೇಳಿದ. ಆತನಿಗೆ ಚಿಕಿತ್ಸೆ ನೀಡಿ, ಡ್ರೆಸ್ಸಿಂಗ್ ಮಾಡಲಾಯಿತು.

ಬಳಿಕ ತನಗೆ ಪ್ರಿಸ್ಕ್ರಿಪ್ಷನ್ ಬೇಕು ಎಂದು ಕೇಳಿದ. ಈ ವೇಳೆ ಡಾ.ಜಾವೇದ್ ಅಖ್ತರ್ ಅವರ ಕ್ಯಾಬಿನ್‌ಗೆ ಹೋದರು. ಅವರು ಕ್ಯಾಬಿನ್‌ನತ್ತ ತಿರುಗುತ್ತಲೇ ಯುವಕರು ವೈದ್ಯನ ಮೇಲೆ ಗುಂಡಿನ ದಾಳಿ ನಡೆಸಿದ್ದು, ವೈದ್ಯರ ತಲೆಗೆ ಗುಂಡು ತಗುಲಿ ತೀವ್ರ ರಕ್ತಸ್ರಾವದಿಂದ ಅವರು ಮೃತಪಟ್ಟಿದ್ದಾರೆ ಎಂದು ಹೇಳಲಾಗಿದೆ.

ಮೈಸೂರು ಮಿತ್ರ ಶುಕ್ರವಾರ 4 ಅಕ್ಟೋಬರ್ 2024

ಅದ್ಧೂರಿ ಮಡಿಕೇರಿ ದಸರಾಗೆ ಸಿದ್ಧತೆ

• ಇಂದಿನಿಂದ ವೈಶಿಷ್ಟ ಸಾಂಸ್ಕೃತಿಕ ಕಾರ್ಯಕ್ರಮ • ಸಮಿತಿ ಪ್ರಧಾನ ಕಾರ್ಯದರ್ಶಿ ರಾಜೇಶ್ ಯಲ್ಲಪ್ಪ

ಮಡಿಕೇರಿ, ಅ.3–ಐತಿಹಾಸಿಕ ಮಡಿಕೇರಿ ದಸರಾ ಜನೋತ್ಸವವನ್ನು ವೈಶಿಷ್ಟ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅದ್ಧೂರಿಯಾಗಿ ಆಚರಿಸಲು ಅಗತ್ಯ ಸಿದ್ಧತೆ ನಡೆಸಲಾಗಿದೆ ಎಂದು ಮಡಿಕೇರಿ ದಸರಾ ಸಮಿತಿ ಪ್ರಧಾನ ಕಾರ್ಯದರ್ಶಿ ರಾಜೇಶ್ ಯಲ್ಲಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಗಾಂಧಿ ಮೈದಾನದ ಕಲಾ ಸಂಭ್ರಮ ವೇದಿಕೆಯಲ್ಲಿ ಶುಕ್ರವಾರ (ಅ.4) ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ ಚಾಲನೆ ನೀಡಲಿದ್ದಾರೆ. ಅಂದಿನಿಂದ ವಿಜಯದಶಮಿ ದಿನದವರೆಗೆ ವೈವಿಧ್ಯಮಯ ಕಾರ್ಯಕ್ರಮ ನಡೆಯಲಿವೆ ಎಂದು ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಡಿಕೇರಿ ದಸರಾ ಸಮಿತಿ ಪ್ರಧಾನ ಕಾರ್ಯದರ್ಶಿ ರಾಜೇಶ್ ಯಲ್ಲಪ್ಪ ಮಾತನಾಡಿದರು.

ಪ್ರಯುತ್ನದಿಂದ ಹೆಚ್ಚಿನ ಅನುದಾನ: ಈ ಬಾರಿ ಜಿಲ್ಲೆಯ ಇಬ್ಬರು ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವ ಭೋಸರಾಜು ಅವರ ಪ್ರಯತ್ನದಿಂದ 1.50 ಕೋಟಿ ರೂ. ಅನುದಾನ ಮಡಿಕೇರಿ ದಸರಾ ಉತ್ಸವಕ್ಕೆ ದೊರಕಿದೆ. ನಗರಸಭೆಯಲ್ಲಿ ಅಧ್ಯಕ್ಷರ ಆಯ್ಕೆ ಇನ್ನಷ್ಟೇ ನಡೆಯಬೇಕಿರುವುದರಿಂದ ದಸರಾ ಉತ್ಸವ ಈ ಬಾರಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಡೆಯಲಿದೆ. ದಸರಾ ಸಮಿತಿ ಮತ್ತು ಜಿಲ್ಲಾಡಳಿತ ಹೊಂದಾಣಿಕೆಯಿಂದ ದಸರಾ ಜನೋತ್ಸವವನ್ನು ಅತ್ಯಂತ ಅಚ್ಚುಕಟ್ಟಾಗಿ ಮತ್ತು ವೈಭವದಿಂದ ನಡೆಸುವುದಾಗಿ ಹೇಳಿದರು.

ಹೆಚ್ಚಿನ ಅನುದಾನದ ನಿರೀಕ್ಷೆ: ದಸರಾ ಉತ್ಸವಕ್ಕೆ ವಿಶೇಷ ಮೆರುಗು ನೀಡುವ ದಶ ಮಂಟಪಗಳಿಗೆ ಈ ಬಾರಿ ತಲಾ 4 ಲಕ್ಷ ರೂ. ಮತ್ತು ನಾಲ್ಕು ಕರಗಗಳಿಗೆ ತಲಾ 2.50 ಲಕ್ಷ ರೂ. ಅನುದಾನ ದೊರಕುವ ನಿರೀಕ್ಷೆ ಇದೆ. ಈ ಬಗ್ಗೆ ಸಭೆ ನಡೆದು ಅಂತಿಮ ತೀರ್ಮಾನ ಕೈಗೊಳ್ಳಬೇಕಿದೆ ಎಂದು ತಿಳಿಸಿದರು.

ದಸರಾ ಸಮಿತಿ ಕಾರ್ಯಾಧ್ಯಕ್ಷ ಪ್ರಕಾಶ್ ಆಚಾರ್ಯ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಹಿಂದಿನ ಸಾಲಿನಂತೆ ಸರ್ಕಾರದ ಅನುದಾನಕ್ಕಾಗಿ ಕಾಯುವ ಸ್ಥಿತಿ ನಿರ್ಮಾಣವಾಗುವುದಕ್ಕೆ ಬದಲಾಗಿ, ಜಿಲ್ಲೆಯ ಶಾಸಕರು, ಉಸ್ತುವಾರಿ ಸಚಿವರೇ ಮುತುವರ್ಜಿ ವಹಿಸಿ ಹೆಚ್ಚಿನ ಅನುದಾನ ಒದಗಿಸಿದ್ದಾರೆ. ಮುಂಬರುವ ವರ್ಷಗಳಲ್ಲಿ ಮತ್ತಷ್ಟು ಹೆಚ್ಚಿನ ಅನುದಾನದೊಂದಿಗೆ ಮಡಿಕೇರಿ ದಸರಾ ಮತ್ತಷ್ಟು ವೈಭವದಿಂದ ನಡೆಯುವ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ದಸರಾ ಸಮಿತಿ ಖಜಾಂಚಿ ಅರುಣ್ ಶೆಟ್ಟಿ, ಲೋಕೇಶ್ ಉಪಸ್ಥಿತರಿದ್ದರು.

ಇಂದು ದಸರಾಗೆ ವಿಧ್ಯುಕ್ತ ಚಾಲನೆ

ಮಡಿಕೇರಿ: ಮಡಿಕೇರಿ ಕರಗ ಉತ್ಸವದೊಂದಿಗೆ ದಸರಾಗೆ ಶುಕ್ರವಾರ (ಅ.4) ವಿಧ್ಯುಕ್ತ ಚಾಲನೆ ದೊರೆಯಲಿದ್ದು, ಅ.12 ರವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಗರದ ಗಾಂಧಿ ಮೈದಾನದಲ್ಲಿ ನಡೆಯಲಿವೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಡಿಕೇರಿ ದಸರಾ ಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದಸರಾ ಜನೋತ್ಸವ ಸಾಂಸ್ಕೃತಿಕ ಕಾರ್ಯಕ್ರಮ ಸಮಿತಿ ವತಿಯಿಂದ ವಿವಿಧ ಕಾರ್ಯಕ್ರಮ ಜರುಗಲಿವೆ ಎಂದರು.

ಅ.4ರಂದು ಸಂಜೆ 6 ಗಂಟೆಗೆ ರಸಮಂಜರಿ ಸೇರಿದಂತೆ ವಿವಿಧ ಕಾರ್ಯಕ್ರಮ ನಡೆಯಲಿವೆ. 5ರಂದು ಬೆಳಗ್ಗೆ 9ಕ್ಕೆ ಮಕ್ಕಳ ದಸರಾ, ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, 6ರಂದು ಬೆಳಗ್ಗೆ 10ಕ್ಕೆ ಕಾಫಿ ದಸರಾ ನಡೆಯಲಿದ್ದು, ಕೃಷಿ ಸಂಬಂಧಿಸಿದ ಉಪಯುಕ್ತ ಮಾಹಿತಿ ಉಳ್ಳ ಪ್ರದರ್ಶನ ನಡೆಯಲಿದೆ. ಸಂಜೆ 6ಕ್ಕೆ ಹೆಸರಾಂತ ಕಲಾವಿದರಿಂದ ರಸಮಂಜರಿ ಕಾರ್ಯಕ್ರಮ. 7ರಂದು ಸೋನಿ ಟಿವಿ ರಿಯಾಲಿಟಿ ಶೋ ಸೂಪರ್ ಸ್ಟಾರ್ ಸಿಂಗರ್ ಪ್ರಶಸ್ತಿ ವಿಜೇತ ಆವಿರ್ಭವ್ ಅವರಿಂದ ಗಾನಸುಧೆ ನಡೆಯಲಿದೆ. 8ರಂದು ಬೆಳಗ್ಗೆ 10ಕ್ಕೆ ಮಹಿಳಾ ದಸರಾ ಹಾಗೂ 9ರಂದು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ಮಾಹಿತಿ ನೀಡಿದರು.




ಜಿಲ್ಲಾಧಿಕಾರಿ ವೆಂಕಟ್ ರಾಜಾ

10ರಂದು ಬೆಳಗ್ಗೆ 10 ಗಂಟೆಗೆ ಕೊಡಗು ಜಿಲ್ಲಾ ಜಾನಪದ ಪರಿಷತ್ ಸಹಯೋಗದಲ್ಲಿ ಜಾನಪದ ದಸರಾ ನಡೆಯಲಿದೆ. ಸಂಜೆ 6ಕ್ಕೆ ಯುವದಸರಾ ನಡೆಯಲಿದೆ.

11ರ ಆಯುಧ ಪೂಜೆ ದಿನ ಸಂಜೆ 6ಕ್ಕೆ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ಪ್ರಸಿದ್ಧ ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್ ಮತ್ತು ತಂಡದಿಂದ ಸಂಗೀತ ರಸಮಂಜರಿ ನಡೆಯಲಿದೆ. 12ರಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಆಗಮಿಸುವ ಸಾಧ್ಯತೆ ಇದೆ ಎಂದರು.

ದಸರಾ ಆಚರಣೆಗೆ ಎಲ್ಲರ ಸಹಕಾರ ಅತ್ಯಗತ್ಯ. ಆ ನಿಟ್ಟಿನಲ್ಲಿ ಯಾರೂ ಪ್ಲಾಸ್ಟಿಕ್ ಬಳಸದಂತೆ ಗಮನಹರಿಸಬೇಕು. ತ್ಯಾಜ್ಯವನ್ನು ಡಸ್ಟ್‌ಬಿನ್‌ನಲ್ಲಿ ಕಡ್ಡಾಯವಾಗಿ ಹಾಕಬೇಕು. ಅಗತ್ಯವಿರುವ ಕಡೆ ತಾತ್ಕಾಲಿಕ ಶೌಚಾಲಯ ನಿರ್ಮಿಸಲಾಗುವುದು. ಒಟ್ಟಾರೆ ಪರಿಸರ ಸ್ನೇಹಿ ದಸರಾ ಆಚರಿಸಲು ಎಲ್ಲರೂ ಕೈಜೋಡಿಸಬೇಕಿದೆ ಎಂದು ಜಿಲ್ಲಾಧಿಕಾರಿ ಮನವಿ ಮಾಡಿದರು.

ಗೋಣಿಕೊಪ್ಪ ದಸರಾ ಜನೋತ್ಸವ ಆರಂಭ



ಗೋಣಿಕೊಪ್ಪ ಸ್ವಾತಂತ್ರ್ಯ ಹೋರಾಟಗಾರರ ಭವನದಲ್ಲಿ ಚಾಮುಂಡೇಶ್ವರಿ ದೇವಿ ಪ್ರತಿಷ್ಠಾಪಿಸಿರುವುದು.

ಗೋಣಿಕೊಪ್ಪ: ಇಲ್ಲಿನ ಸ್ವಾತಂತ್ರ್ಯ ಹೋರಾಟಗಾರರ ಭವನದಲ್ಲಿ ಚಾಮುಂಡೇಶ್ವರಿ ದೇವಿ ಪ್ರತಿಷ್ಠಾಪನೆಯೊಂದಿಗೆ 46ನೇ ವರ್ಷದ ಗೋಣಿಕೊಪ್ಪ ದಸರಾ ಜನೋತ್ಸವಕ್ಕೆ ಧಾರ್ಮಿಕ ವಿಧಿವಿಧಾನದ ಮೂಲಕ ಗುರುವಾರ ಚಾಲನೆ ನೀಡಲಾಯಿತು.


ಬೆಳಗ್ಗೆ 6 ಗಂಟೆಗೆ ಗಣಪತಿ ಹೋಮ, 7 ಗಂಟೆಗೆ ದೇವಿ ಪ್ರತಿಷ್ಠಾಪನೆಯೊಂದಿಗೆ ಪೂಜಾ ಕಾರ್ಯಕ್ಕೆ ಚಾಲನೆ ನೀಡಲಾಗಿದ್ದು, ಬೆಳಗ್ಗೆ 7 ಮತ್ತು ಸಂಜೆ 7 ಗಂಟೆಗೆ ದೇವಿಗೆ ಪೂಜೆ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಯಿತು. ಕಾವೇರಿ ದಸರಾ ಸಮಿತಿ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ ಮತ್ತಿತರ ಗಣ್ಯರು ಪೂಜಾ ಕಾರ್ಯ ನೆರವೇರಿಸಿದರು.

ಸಮಿತಿ ಪ್ರಧಾನ ಕಾರ್ಯದರ್ಶಿ ಕಂದಾ ದೇವಯ್ಯ, ಖಜಾಂಚಿ ಚೆಪ್ಪುಡೀರ ಧ್ಯಾನ್ ಸುಬ್ಬಯ್ಯ, ಪಿಡಿಓ ಕುಟ್ಟಂಜೆಟ್ಟಿರ ತಿಮ್ಮಯ್ಯ, ಗ್ರಾಪಂ ಉಪಾಧ್ಯಕ್ಷೆ ಎಂ.ಮಂಜುಳಾ, ದೇವಿ ಮೂರ್ತಿ ದಾನಿಗಳಾದ ಕೇಶವ ಕಾಮತ್, ಸಮಿತಿ ಉಪಾಧ್ಯಕ್ಷ ನಾಯಂದರ ಶಿವಾಜಿ, ಸಾಂಸ್ಕೃತಿಕ ಸಮಿತಿ ಸಂಚಾಲಕ ದಿಲನ್ ಚಂಗಪ್ಪ, ಪ್ರಮುಖ ಚಂದನ್ ಕಾಮತ್, ಮಹಿಳಾ ದಸರಾ ಉಪಾಧ್ಯಕ್ಷೆ ಕಡೇಮಾಡ ಕುಸುಮ ಜೋಯಪ್ಪ, ಹಿರಿಯರಾದ ಸುಮಿ ಸುಬ್ಬಯ್ಯ, ಡಾ.ಕಾಳಿಮಾಡ ಕೆ.ಶಿವಪ್ಪ, ಪೂಜಾ ಸಮಿತಿ ಸಂಚಾಲಕ ಪಿ.ಜಿ.ರಾಜಶೇಖರ್ ಪಾಲ್ಗೊಂಡಿದ್ದರು.

ದಸರಾ ಆರಂಭದ ಭಾಗವಾಗಿ ಸೈಕ್ಲೋನ್ ಡ್ಯಾನ್ಸ್ ಇನ್‌ಸ್ಟಿಟ್ಯೂಟ್ ವತಿಯಿಂದ ಬಸ್ ನಿಲ್ದಾಣದಲ್ಲಿ ಫ್ಲ್ಯಾಶ್ ಮೊಬ್ ನೃತ್ಯ ಗಮನ ಸೆಳೆಯಿತು. 28 ನೃತ್ಯಪಟುಗಳು ಕಲಾ ಪ್ರದರ್ಶನ ನೀಡಿದರು. ಮೂವರು ಸ್ಟಂಟ್ ಮೂಲಕ ಹುಬ್ಬೇರಿಸುವಂತೆ ಮಾಡಿದರು.

ಇಂದಿನ ಕಾರ್ಯಕ್ರಮ: ಶುಕ್ರವಾರ ಸಂಜೆ 6 ಗಂಟೆಗೆ ವಿರಾಜಪೇಟೆ ನಾಟ್ಯಮಯೂರಿ ತಂಡದಿಂದ ಭರತನಾಟ್ಯ, ರಾತ್ರಿ 7 ಗಂಟೆಗೆ ಬಳ್ಳಾರಿ ಬಸವರಾಜ ತಂಡದಿಂದ ನೃತ್ಯ, ಮೈಸೂರು ಶೋಭಾ ರಾಜಕುಮಾರ ತಂಡದಿಂದ ಮಾತನಾಡುವ ಗೊಂಬೆ, ಮಂಗಳೂರಿನ ನಂದಗೋಕುಲ ತಂಡದಿಂದ ನೃತ್ಯ ವೈಭವ, ಮೈಸೂರು ಯೂನಿಕ್ ಸಿಜಲರ್ಸ್ ಅಕಾಡೆಮಿಯಿಂದ ನೃತ್ಯ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ನಂದಿನಿ ಹಾಲಿನ ಮಾರಾಟ ಅಂಗಡಿ ಬೀಗ ಮುರಿದು 50 ಸಾವಿರ ರೂ. ನಗದು ಕಳವು



ಮಡಿಕೇರಿ, ಅ.3–ನಗರದ ಜಿಲ್ಲಾಸ್ಪತ್ರೆ ಎದುರಿನ ನಂದಿನಿ ಹಾಲಿನ ಮಾರಾಟ ಅಂಗಡಿ ಬೀಗ ಮುರಿದು 50 ಸಾವಿರ ರೂ. ನಗದು ಮತ್ತು ನಂದಿನಿ ಉತ್ಪನ್ನಗಳನ್ನು ಕಳವು ಮಾಡಿರುವ ಘಟನೆ ಗುರುವಾರ ರಾತ್ರಿ ನಡೆದಿದೆ.

ಬೈಕ್‌ನಲ್ಲಿ ನಂದಿನಿ ಕೇಂದ್ರದ ಬಳಿ ಬಂದ ಇಬ್ಬರು ಕಳ್ಳರ ಪೈಕಿ ಮುಸುಕು ಹಾಕಿದ್ದ ಓರ್ವ ರಾಡ್‌ನಿಂದ ಬಾಗಿಲ ಬೀಗವನ್ನು ಮುರಿದು ಒಳ ನುಗ್ಗಿ ಗಲ್ಲಾಪೆಟ್ಟಿಯಲ್ಲಿದ್ದ 50 ಸಾವಿರ ರೂ. ನಗದು ಮತ್ತು ನಂದಿನಿ ಉತ್ಪನ್ನಗಳನ್ನು ಕಳವು ಮಾಡಿದ್ದಾನೆ. ಮತ್ತೋರ್ವ ಬೈಕ್ ಅನ್ನು ಚಾಲನೆಯಲ್ಲಿರಿಸಿ, ಯಾರು ಬರದಂತೆ ನೋಡಿಕೊಳ್ಳುತ್ತಿರುವ ದೃಶ್ಯ ನಂದಿನಿ ಕೇಂದ್ರದಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಅಂಗಡಿ ಮಾಲೀಕ ಮುರುಗೇಶ್ ಎಂದಿನಂತೆ ಗುರುವಾರ ಬೆಳಗ್ಗೆ ಅಂಗಡಿಗೆ ಬಂದಾಗ ಅಂಗಡಿಯ ಬೀಗ ಮುರಿದು ಕಳವು ಮಾಡಿರುವುದು ಪತ್ತೆಯಾಗಿದೆ. ಈ ಸಂಬಂಧ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಐತಿಹಾಸಿಕ ಕರಗೋತ್ಸವಕ್ಕೆ ಸಾಂಪ್ರದಾಯಿಕ ಚಾಲನೆ

ಮಡಿಕೇರಿ, ಅ.3–ಐತಿಹಾಸಿಕ ಹಿನ್ನೆಲೆಯ ಮಡಿಕೇರಿ ದಸರಾ ಕರಗೋತ್ಸವಕ್ಕೆ ಗುರುವಾರ ಸಾಂಪ್ರದಾಯಿಕ ಚಾಲನೆ ದೊರೆಯಿತು.

ನಗರದ ಪಂಪಿನ ಕೆರೆಯಲ್ಲಿ 4 ಶಕ್ತಿ ದೇವತೆಗಳಾದ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ, ದಂಡಿನ ಮಾರಿಯಮ್ಮ, ಕೋಟೆ ಮಾರಿಯಮ್ಮ ಹಾಗೂ ಕಂಚಿ ಕಾಮಾಕ್ಷಿಯಮ್ಮ ಕರಗಗಳನ್ನು ಹೊರಡಿಸುವ ಮೂಲಕ ನಾಡಿನ ಸುಭಿಕ್ಷೆಗಾಗಿ ಪ್ರಾರ್ಥಿಸಲಾಯಿತು.

ನವರಾತ್ರಿ ಆರಂಭದ ಮೊದಲ ದಿನವಾದ ಗುರುವಾರ 4 ಕರಗಗಳನ್ನು ಹೊರುವ ವ್ರತಧಾರಿಗಳು ಶಕ್ತಿ ದೇವಾಲಯಗಳಲ್ಲಿ ಪೂಜೆ ಸಲ್ಲಿಸಿ, ಸಾಂಪ್ರದಾಯಿಕ ವಾದ್ಯದೊಂದಿಗೆ ಕರಗ ಕಟ್ಟಲು ಅಗತ್ಯವಿರುವ ಶಕ್ತಿ ದೇವತೆಗಳ ಬೆಳ್ಳಿ ಮುಖವಾಡ, ಮಲ್ಲಿಗೆ, ಸೇವಂತಿಗೆ, ಕನಕಾಂಬರ ಹೂವು, ದೇವಿಯ ಪವಿತ್ರ ಆಯುಧಗಳಾದ ಬೆತ್ತ, ಚೂರಿ ಹಾಗೂ ಇತರ ಪೂಜಾ ಪರಿಕರಗಳೊಂದಿಗೆ ಪಂಪಿನಕೆರೆಗೆ ಆಗಮಿಸಿದರು. ಬಳಿಕ ಶ್ರದ್ಧಾಭಕ್ತಿ ಪ್ರಾರ್ಥನೆ ಮೂಲಕ ಕರಗ ಕಟ್ಟಲು ಪ್ರಾರಂಭಿಸಿದರು. ಕರಗ ಶೃಂಗಾರ ಪೂರ್ಣಗೊಂಡ ನಂತರ 4 ಶಕ್ತಿ ದೇವತೆಗಳನ್ನು ಆಹ್ವಾನಿಸಿ, ಕರಗಗಳಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

ಈ ಸಂದರ್ಭ ಶಾಸಕ ಡಾ.ಮಂತರ್‌ಗೌಡ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಅಪರ ಜಿಲ್ಲಾಧಿಕಾರಿ ಐಶ್ವರ್ಯ, ದಸರಾ ಸಮಿತಿ ಕಾರ್ಯಾಧ್ಯಕ್ಷ ಪ್ರಕಾಶ್ ಆಚಾರ್ಯ, ಪ್ರಧಾನ ಕಾರ್ಯದರ್ಶಿ ರಾಜೇಶ್ ಯಲ್ಲಪ್ಪ, ದಶಮಂಟಪ ಸಮಿತಿ ಅಧ್ಯಕ್ಷ ಜಗದೀಶ್, ದಶಮಂಟಪಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಕರಗ ದೇವಾಲಯ ಸಮಿತಿ ಪ್ರಮುಖರು ಹಾಜರಿದ್ದರು.



ಮಡಿಕೇರಿ ದಸರಾ ಕರಗೋತ್ಸವಕ್ಕೆ ಸಾಂಪ್ರದಾಯಿಕ ಚಾಲನೆ ನೀಡಯಿತು.

ಬಳಿಕ ಕರಗಗಳನ್ನು ತಲೆ ಮೇಲೆ ಹೊತ್ತ ವ್ರತಧಾರಿಗಳು ಪಂಪಿನಕೆರೆಯಿಂದ ವಾದ್ಯಗಳಿಗೆ ನರ್ತಿಸುತ್ತಾ ನಗರದ ಬನ್ನಿಮಂಟಪಕ್ಕೆ ಆಗಮಿಸಿ, ಅಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಚೌಡೇಶ್ವರಿ ದೇವಾಲಯ ಮತ್ತು ವಿಷ್ಣುವಿನ ಅವತಾರವಾದ ಪೇಟೆ ರಾಮಮಂದಿರಕ್ಕೆ ತೆರಳಿ ಕರಗಗಳಿಗೆ ಪೂಜೆ ನೆರವೇರಿಸಿದರು. ಬಳಿಕ ತಮ್ಮ ದೇವಾಲಯದ ನೆಲೆಗಳಿಗೆ ಮರಳಿದವು.

ಕರಗ ಇತಿಹಾಸ: ಶಕ್ತಿ ದೇವತೆಗಳ ಕರಗಗಳನ್ನು ಹೊರಡಿಸುವ ಮೂಲಕ ಮಡಿಕೇರಿ ದಸರಾ ಆರಂಭಗೊಳ್ಳುವುದು ಮತ್ತೊಂದು ವಿಶೇಷ. 225 ವರ್ಷಗಳ ಹಿಂದೆ ಅಂದರೆ, ಕೊಡಗಿನ ಅರಸರ ಆಳ್ವಿಕೆ ಕಾಲದಲ್ಲಿ ಮಡಿಕೇರಿ ನಾಡಿಗೆ ಸಾಂಕ್ರಮಿಕ ಕಾಯಿಲೆಗಳು ಕಾಣಿಸಿಕೊಂಡಿತ್ತು. ಅಲ್ಲದೆ, ಸಾವು–ನೋವು ಸಂಭವಿಸುವುದರೊಂದಿಗೆ ಜನರು ಕೊಡಗಿನಿಂದ ಗುಳೆ ಹೋಗುವ ಪರಿಸ್ಥಿತಿ ತಲೆದೋರಿತ್ತು. ಇದರಿಂದ ಚಿಂತೆಗೀಡಾದ ಅರಸರು ನಾಡಿನಲ್ಲಿ ನೆಲೆಸಿದ್ದ 4 ಶಕ್ತಿ ದೇವತೆಗಳ ಮೊರೆ ಹೋಗಿ ಜನರನ್ನು ಕಾಪಾಡುವಂತೆ ಬೇಡಿಕೊಂಡಿದ್ದರು.

ಈ ಸಂದರ್ಭ ಮಡಿಕೇರಿಯಲ್ಲಿ ನೆಲೆಸಿರುವ ಶಕ್ತಿ ದೇವತೆಗಳ ಕರಗಗಳು ಅಷ್ಟ ದಿಕ್ಕುಗಳಿಗೆ ತೆರಳಿದರೆ ಎದುರಾಗಿರುವ ಸಂಕಷ್ಟಗಳಿಗೆ ಪರಿಹಾರ ದೊರೆಯಲಿದೆ ಎಂದು ದೈವವಾಣಿಯ ಮೂಲಕ ಉತ್ತರ ದೊರಕಿತ್ತು ಈ ಹಿನ್ನೆಲೆಯಲ್ಲಿ ಅರಸರು ಶಕ್ತಿ ದೇವತೆಗಳ ಕರಗಗಳನ್ನು ಮಡಿಕೇರಿ ದೊಡ್ಡಪೇಟೆಗೆ ಕರೆತಂದು ನಗರ ಪ್ರದಕ್ಷಿಣೆ ನಡೆಸಿದ್ದರು. ಅಂದು ಅರಸರಿಂದ ಪ್ರಾರಂಭವಾದ ಕರಗಗಳ ನಗರ ಪ್ರದಕ್ಷಿಣೆ ಇಂದು ಉತ್ಸವದ ರೂಪದಲ್ಲಿ ಆಚರಿಸಿಕೊಂಡು ಬರಲಾಗುತ್ತಿದೆ.

ಶ್ರೀರಂಗಪಟ್ಟಣದಲ್ಲಿ ಗಂಗಾರತಿ ಮಾದರಿ ಕಾವೇರಿ ಆರತಿಗೆ ಚಾಲನೆ

ಪ್ರಚಾರದ ಕೊರತೆಯಿಂದ ಬಾರದ ಜನ, ಜಿಲ್ಲಾಡಳಿತದ ವಿರುದ್ಧ ಸ್ಥಳೀಯರ ಆಕ್ರೋಶ

ಶ್ರೀರಂಗಪಟ್ಟಣ,ಅ.3– ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಅಂಗವಾಗಿ ಪಟ್ಟಣದ ಸ್ನಾನಘಟ್ಟದಲ್ಲಿ ಕಾವೇರಿ ಮಾತೆಗೆ ಉತ್ತರ ಭಾರತದ ಗಂಗಾರತಿ ಮಾದರಿಯಲ್ಲಿ ಕಾವೇರಿ ಆರತಿಗೆ ಜಿಲ್ಲಾಡಳಿತ ಅಧಿಕೃತವಾಗಿ ಚಾಲನೆ ನೀಡಿತು.

ಜಿಲ್ಲಾಧಿಕಾರಿ ಡಾ.ಕುಮಾರ್ ನೇತೃತ್ವದಲ್ಲಿ ವೇದಬ್ರಹ್ಮ ಡಾ.ಭಾನುಪ್ರಕಾಶ್‌ಶರ್ಮಾ ಸಾರಥ್ಯದ ವೈದಿಕರ ತಂಡವು ಇಲ್ಲಿನ ಕಾವೇರಿ ನದಿಗೆ ವಿಧಿ ವಿಧಾನಗಳ ಮೂಲಕ ಗಂಧದಕಟ್ಟಿ ಪೂಜೆ, ಧೂಪಾರತಿ, ಕರ್ಪೂರದ ಆರತಿ ಬೆಳಗಿ ಕಾವೇರಿ ಮಾತೆಗೆ ನಮನ ಸಲ್ಲಿಸಿದರು. ಗಣಪತಿ ಪಾರ್ಥನೆ, ಅಷ್ಟೋತ್ತರ ಪೂಜೆ, ಧೂಪ ದೀಪಗಳೊಂದಿಗೆ ಕಾವೇರಿ ಮಾತೆಗೆ ಸಂಕಲ್ಪ ಮಾಡಲಾಯಿತು. ಪಟ್ಟಣದಲ್ಲಿ ದಸರಾ ಮಹೋತ್ಸವ ನಡೆಯುವ ಹಾಗೆ ಕಾವೇರಿ ನದಿಗೆ ಅ.3 ರಿಂದ 5 ದಿನಗಳ ಕಾಲ ನಡೆಸಲು ತೀರ್ಮಾನಿಸಲಾಗಿದೆ.



ಕಾವೇರಿ ಮಾತೆಗೆ ಉತ್ತರ ಭಾರತದ ಗಂಗಾರತಿ ಮಾದರಿಯಲ್ಲಿ 15ಕ್ಕೂ ಹೆಚ್ಚು ವೈದಿಕರ ತಂಡದೊಂದಿಗೆ ಕಾವೇರಿ ಆರತಿ ಮಾಡುತ್ತಿರುವುದು.

ಉತ್ತರ ಭಾರತದಲ್ಲಿನ ಗಂಗಾರತಿ ಮಾದರಿಯಲ್ಲಿ ದಕ್ಷಿಣ ಭಾರತದಲ್ಲಿ ಪ್ರಥಮ ಭಾರಿಗೆ ಭಾಗಮಂಡಲದಿಂದ ಪುಂಪಾರ್‌ಗೆ ಹರಿಯುವ ಕಾವೇರಿ ನದಿಗೆ ನಮನ ಸಲ್ಲಿಸುವ ಸಲುವಾಗಿ ಕಾವೇರಿ ಆರತಿ ನಡೆಸಲಾಯಿತು. ಶಾಸ್ವತಿ ಧಾರ್ಮಿಕ ಕ್ರಿಯಾ ಸಮಿತಿ ವತಿಯಿಂದ ಪ್ರತಿ ವರ್ಷ ತುಲಾಮಾಸದಲ್ಲಿ ಕಾವೇರಿ ಆರತಿ ಮಾಡಲಾಗುತ್ತಿತ್ತು, ಆದರೆ ದಸರಾ ಹಿನ್ನೆಲೆಯಲ್ಲಿ ಒಂದು ತಿಂಗಳು ಮುಂಚಿತವಾಗಿ ಆಚರಣೆ ಮಾಡಲಾಗಿದೆ ಎಂದು ವೇದಬ್ರಹ್ಮ ಡಾ. ಭಾನುಪ್ರಕಾಶ್‌ಶರ್ಮಾ ತಿಳಿಸಿದರು.

ಹೆಚ್ಚಿನ ಸಂಖ್ಯೆಯಲ್ಲಿ ಬಾರದ ಜನರು: ಇತ್ತೀಚೆಗೆ ಉತ್ತರ ಭಾರತದ ಕಾಶಿಯ ವಾರಣಾಸಿ ಸೇರಿದಂತೆ ಇತರೆ ಪ್ರದೇಶಗಳಿಗೆ ಮೈಸೂರು, ಮಂಡ್ಯ ಭಾಗದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಕಾವೇರಿ ಆರತಿ ಸಮಿತಿ ತೆರಳಿ ಗಂಗೆ ಮಾದರಿಯಲ್ಲೇ ಕಾವೇರಿ ಮಾತೆಗೆ ಆರತಿ ಮಾಡುವ ಸಂಬಂಧ ಅಧ್ಯಯನ ನಡೆಸಿ ಬಂದಿತ್ತು. ಜಿಲ್ಲಾಡಳಿತದಿಂದ ಸಮರ್ಪಕ ಪ್ರಚಾರವಿಲ್ಲದ ಕಾರಣ ಹೆಚ್ಚಿನ ಸಾರ್ವಜನಿಕರಿಲ್ಲದೆ ಪೂಜಾಕಾರ್ಯ ನೆರವೇರಿತು. ಸ್ನಾನಘಟ್ಟ ಬಳಿಯ ಕಾವೇರಿ ನದಿಗೆ ತೆರಳುವ ಮಾರ್ಗ ಮಧ್ಯೆ ಮಾತ್ರ ಜಿಲ್ಲಾಡಳಿತ ಎಂದು ನಾಮ ಫಲಕ ಅಳವಡಿಸಿರುವುದು ಹೊರತು ಪಡಿಸಿ ಯಾವುದೇ ಪ್ರಚಾರ ಕೈಗೊಂಡಿಲ್ಲ. ಸಾರ್ವಜನಿಕರ ತೆರಿಗೆ ಹಣ ವ್ಯಯಿಸಿ, ಪ್ರವಾಸ ಮಾಡಿ ಬಂದಿದ್ದರೂ ಅಂದುಕೊಂಡಂತೆ ಕಾವೇರಿ ಆರತಿ ನಡೆದಿಲ್ಲ. ಇದಕ್ಕೆ ಜಿಲ್ಲಾಡಳಿತ ಸರಿಯಾದ ಸ್ಪಷ್ಟನೆ ನೀಡುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

ಮಾಜಿ ಶಾಸಕಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ, ಜಿ.ಪಂ ಸಿಇಓ ಶೇಖ್ ತನ್ವೀರ್ ಆಸೀಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್‌ಪಿ ಸಿ.ಇ ತಿಮ್ಮಯ್ಯ, ಡಿವೈಎಸ್‌ಪಿ ಮುರಳಿ, ಪುರಸಭಾ ಸದಸ್ಯರು ಇದ್ದರು.

ಅ.7ರಿಂದ ಚಾ.ನಗರ ದಸರಾ ಮಹೋತ್ಸವ

ಚಾಮರಾಜನಗರ, ಅ.3–ವಿಶ್ವವಿಖ್ಯಾತ ಮೈಸೂರು ದಸರಾ ಭಾಗವಾಗಿ ಚಾಮರಾಜನಗರ ಜಿಲ್ಲೆಯಲ್ಲೂ ಅ.7ರಿಂದ 9ರವರೆಗೆ ಮೂರು ದಿನ ದಸರಾ ಮಹೋತ್ಸವ ಆಯೋಜಿಸಲಾಗಿದೆ.

ದಸರಾ ಮಹೋತ್ಸವ ಅಂಗವಾಗಿ ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಾಲಯ ಮುಂಭಾಗದ ಪ್ರಧಾನ ವೇದಿಕೆಯಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ. ಜಿಲ್ಲಾಡಳಿತ ಭವನ ಆವರಣದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ದಸರಾ ಕವಿಗೋಷ್ಠಿ ನಡೆಯಲಿವೆ.

ಅ.7ರಂದು ಮಧ್ಯಾಹ್ನ 12.15ಕ್ಕೆ ಚಾಮರಾಜೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ದಸರಾಗೆ ಚಾಲನೆ ನೀಡಲಾಗುವುದು. ನಂತರ ಭುವನೇಶ್ವರಿ ತಾಯಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುವುದು. ಚಾಮರಾಜೇಶ್ವರ ಉದ್ಯಾನದಲ್ಲಿ ಚಿತ್ರಸಂತೆ ಉದ್ಘಾಟಿಸಲಾಗುವುದು. ಬಳಿಕ ಮಹಿಳೆಯರಿಂದ ತಯಾರಿಸಿದ ವಸ್ತುಗಳ ಮಾರಾಟ ಮತ್ತು ಪ್ರದರ್ಶನಕ್ಕೆ ಚಾಲನೆ ನೀಡಲಾಗುವುದು.

ಮಧ್ಯಾಹ್ನ 1 ಗಂಟೆಗೆ ಜಿಲ್ಲಾಡಳಿತ ಭವನದ ಮುಂಭಾಗ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಲಾಗುವುದು. ಬಳಿಕ ಜಿಲ್ಲಾ ರಂಗಮಂದಿರದಲ್ಲಿ ಕವಿಗೋಷ್ಠಿ ನಡೆಯಲಿದೆ. ಜಿಲ್ಲಾಡಳಿತ ಭವನದಿಂದ ಮುಖ್ಯ ವೇದಿಕೆ ವರೆಗೆ ಜಾನಪದ ಕಲಾತಂಡಗಳ ದಸರಾ ಮೆರವಣಿಗೆಗೆ ನಡೆಯಲಿದೆ. ಸಂಜೆ 5.30ಕ್ಕೆ ಪ್ರಧಾನ ವೇದಿಕೆಯಲ್ಲಿ ವಿಧ್ಯುಕ್ತವಾಗಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆಯಾಗಲಿದೆ.

ಅ.8ರಂದು ಬೆಳಗ್ಗೆ 6.30ಕ್ಕೆ ಚಾಮರಾಜೇಶ್ವರಸ್ವಾಮಿ ದೇವಾಲಯ ಮುಂಭಾಗ ಮ್ಯಾರಥಾನ್ ಆಯೋಜಿಸಲಾಗಿದೆ. ಮಧ್ಯಾಹ್ನ 2.30ರಿಂದ ರಾತ್ರಿ 9.45ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ 9ರಂದು ಬೆಳಗ್ಗೆ 6.30ಕ್ಕೆ ಪಾರಂಪರಿಕ ನಡಿಗೆ, 9.30ಕ್ಕೆ ರೈತ ದಸರಾ ಮೆರವಣಿಗೆ ನಡೆಯಲಿದ್ದು, ಸಂಜೆ 6.30ಕ್ಕೆ ಸಮಾರೋಪ ನಡೆಯಲಿದೆ.



ಚಾಮರಾಜನಗರ ಪ್ರಮುಖ ರಸ್ತೆಯಲ್ಲಿ ಅಳವಡಿಸಿರುವ ದೀಪಾಲಂಕಾರ ಕಂಗೊಳಿಸುತ್ತಿರುವುದು.



ಕಂಗೊಳಿಸುತ್ತಿರುವ ವಿದ್ಯುತ್ ದೀಪಾಲಂಕಾರ

ಚೆಲುವ ಚಾಮರಾಜನಗರ ಜಿಲ್ಲಾ ದಸರಾ ಮಹೋತ್ಸವದ ಅಂಗವಾಗಿ ಜಿಲ್ಲಾ ಕೇಂದ್ರದಲ್ಲಿ ಆಯೋಜಿಸಿರುವ ವಿದ್ಯುತ್ ದೀಪಾಲಂಕಾರಕ್ಕೆ ಗುರುವಾರ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ನಗರದ ಚಾಮರಾಜೇಶ್ವರ ದೇವಸ್ಥಾನ ಮುಂಭಾಗ ಸ್ವಿಚ್ ಆನ್ ಮಾಡುವ ಮೂಲಕ ಚಾಲನೆ ನೀಡಿದರು. ಭುವನೇಶ್ವರಿ ವೃತ್ತ, ಚಾಮರಾಜೇಶ್ವರ ದೇವಸ್ಥಾನ, ಬಿ.ರಾಚಯ್ಯ ಜೋಡಿರಸ್ತೆ, ಜಿಲ್ಲಾಡಳಿತ ಭವನ, ಜಿಲ್ಲಾಸ್ಪತ್ರೆ, ಕೆಇಬಿ ಕಚೇರಿ, ಡಿವಿಯೇಷನ್ ರಸ್ತೆ, ಸಂತೇಮರಹಳ್ಳಿ ವೃತ್ತ ಹಾಗೂ ವಿವಿಧ ಕಡೆ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದ್ದು, ಜಿಲ್ಲಾ ಕೇಂದ್ರ ವಿವಿಧ ಬಣ್ಣದ ದೀಪಾಲಂಕಾರದಿಂದ ಕಂಗೊಳಿಸುತ್ತಿದೆ.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಪಂ ಸಿಇಓ ಮೋನಾ ರೋತ್, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಎಡಿಸಿ ಗೀತಾ ಹುಡೇದಾ, ಪೌರಾಯುಕ್ತ ರಾಮದಾಸ್ ಹಾಗೂ ಇತರರು ಇದ್ದರು.

ಗಜಪಡೆಗೆ ಸ್ವಾಗತ: ಇಂದು ನಂದಿಧ್ವಜಕ್ಕೆ ಪೂಜೆ



ಜಿಲ್ಲಾಡಳಿತದಿಂದ ದಸರಾ ಗಜಪಡೆಗೆ ಸ್ವಾಗತ ನೀಡಲಾಯಿತು.

ಶ್ರೀರಂಗಪಟ್ಟಣ,ಅ.3– ಶ್ರೀರಂಗಪಟ್ಟಣ ದಸರಾ ಹಿನ್ನಲೆಯಲ್ಲಿ ಪಟ್ಟಣಕ್ಕೆ ಆಗಮಿಸಿದ ಗಜಪಡೆಗಳನ್ನು ಜಿಲ್ಲಾಡಳಿತ ಸ್ವಾಗತಿಸಿ ಬರಮಾಡಿಕೊಂಡು ಶ್ರೀರಂಗನಾಥಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಶ್ರೀರಂಗನಾಥಸ್ವಾಮಿ ದೇಗುಲದ ಆವರಣಕ್ಕೆ ಇಂದು ಸಂಜೆ ಆಗಮಿಸಿದ ಮಹೇಂದ್ರ, ಲಕ್ಷ್ಮಿ ಹಾಗೂ ಹಿರಣ್ಯ ಆನೆಗಳನ್ನು ಜಿಲ್ಲಾಡಳಿತ ಮತ್ತು ತಾಲೂಕು ಆಡಳಿತದ ವತಿಯಿಂದ ಆತ್ಮೀಯವಾಗಿ ಸ್ವಾಗತಿಸಲಾಯಿತು.

ನಾಳೆ(ಅ.4)ಮಧ್ಯಾಹ್ನ 12.30ಕ್ಕೆ ಶ್ರೀರಂಗಪಟ್ಟಣದ ಕಿರಂಗೂರಿನ ಬನ್ನಿಮಂಟಪದಲ್ಲಿ ನಂದಿ ಧ್ವಜಪೂಜೆ ನಡೆಯಲಿದೆ. ಮಧ್ಯಾಹ್ನ 2.30 ರಿಂದ 3 ರವರೆಗೆ ಕಿರಗೂರಿನ ಬನ್ನಿ ಮಂಟಪದಿಂದ ಶ್ರೀ ಚಾಮುಂಡೇಶ್ವರಿ ದೇವಿಯ ವಿಗ್ರಹ ಹೊತ್ತ ಅಂಬಾರಿ ಮೆರವಣಿಗೆಗೆ ಚಾಲನೆ ನೀಡಲಾಗುವುದು.

ಬಿಳಿ ಕುದುರೆಗೆ ಬೆಚ್ಚಿದ ಹಿರಣ್ಯ: ಗಜಪಡೆಗಳು ಶ್ರೀರಂಗನಾಥಸ್ವಾಮಿ ದೇಗುಲಕ್ಕೆ ತೆರಳುತ್ತಿದ್ದ ವೇಳೆ ಹಿರಣ್ಯ ಎಂಬ ಆನೆ ಬಿಳಿ ಕುದುರೆಯನ್ನು ಕಂಡು ಬೆಚ್ಚಿದ್ದರಿಂದ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಶ್ರೀರಂಗನಾಥಸ್ವಾಮಿ ದೇಗುಲದಲ್ಲಿ ಪೂಜೆ ಸಲ್ಲಿಸಿ ಗಜಪಡೆಗಳನ್ನು ಸ್ವಾಗತಿಸುವ ವೇಳೆ ಈ ಘಟನೆ ನಡೆಯಿತು. ದೇವಾಲಯಕ್ಕೆ ತೆರಳುತ್ತಿದ್ದ ವೇಳೆ ದೇವಾಲಯದ ಆವರಣದಲ್ಲಿದ್ದ ಬಿಳಿ ಕುದುರೆಯನ್ನು ಕಂಡು ಬೆಚ್ಚಿದ ಹಿರಣ್ಯ, ಸ್ವಲ್ಪ ದೂರ ಹಿಂದೆ ಸಂಚರಿಸಿ ಘರ್ಜಿಸತೊಡಗಿತು. ಕೂಡಲೇ ಆನೆಯನ್ನು ಸುತ್ತುವರಿದ ಮಾವುತರು ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಹಿರಣ್ಯ ಆನೆಯನ್ನು ಸಮಾಧಾನ ಪಡಿಸಿ ದೇವಾಲಯಕ್ಕೆ ಕರೆದೊಯ್ದರು.

ಚಾ.ನಗರದಲ್ಲಿ ಅಂಗಡಿಗಳ ಸರಣಿ ಕಳ್ಳತನ

ಚಾಮರಾಜನಗರ, ಅ.3– ನಗರದ ಭುವನೇಶ್ವರಿ ವೃತ್ತದ ಆಸುಪಾಸಿನಲ್ಲಿ ಬುಧವಾರ ಮಧ್ಯರಾತ್ರಿ ಸರಣಿ ಕಳ್ಳತನ ನಡೆದಿದ್ದು, ಜಿಲ್ಲೆಯ ಜನರಲ್ಲಿ ಆತಂಕ ಹೆಚ್ಚಿಸಿದೆ.

ಪ್ರಭು ಎಲೆಕ್ಟ್ರಿಕಲ್ಸ್ ಅಂಡ್ ಹಾರ್ಡ್‌ವೇರ್, ವಿನಾಯಕ ಮೋಟಾರ್ಸ್ ಹಾಗೂ ಸ್ವಾಗತ್ ಟ್ರೇಡರ್ಸ್ ಅಂಗಡಿಗಳ ಕಿಟಕಿ ಗಾಜುಗಳನ್ನು ಒಡೆದು ಒಳ ನುಗ್ಗಿರುವ ಕಳ್ಳರು ಅಂಗಡಿಗಳಲ್ಲಿದ್ದ ನಗದನ್ನು ದೋಚಿದ್ದಾರೆ. ಸ್ವಾಗತ್ ಟ್ರೇಡರ್ಸ್ ಹಾಗೂ ಪ್ರಭು ಎಲೆಕ್ಟ್ರಿಕಲ್ಸ್‌ನಲ್ಲಿ ತಲಾ 40 ಸಾವಿರ ರೂ., ಒಂದು ಡಿವಿಆರ್, ವಿನಾಯಕ ಮೋಟಾರ್ಸ್‌ನಲ್ಲಿ 20 ಸಾವಿರ ರೂ. ಹಾಗೂ ಡಿವಿಆರ್ ಕಳ್ಳ ತನ ಮಾಡಿದ್ದಾರೆ ಎಂದು ಪಟ್ಟಣ ಠಾಣೆಯಲ್ಲಿ ದೂರು ದಾಖಲಾಗಿದೆ.



ಕಳ್ಳತವಾದ ಅಂಗಡಿಯಲ್ಲಿ ಚಾಮರಾಜನಗರ ಪಟ್ಟಣ ಠಾಣೆ ಪೊಲೀಸರು, ಶ್ವಾನದಳದೊಂದಿಗೆ ಪರಿಶೀಲಿಸಿದರು.

ಗುರುವಾರ ಬೆಳಗ್ಗೆ ಅಂಗಡಿಗಳನ್ನು ತೆರೆಯಲು ಬಂದಾಗ ಕಳ್ಳತನ ಪ್ರಕರಣ ಬೆಳಕಿಗೆ ಬಂದಿದೆ. ಕೂಡಲೇ ಅಂಗಡಿಗಳ ಮಾಲೀಕರು ಪೊಲೀಸರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಪಟ್ಟಣ ಠಾಣೆ ಪೊಲೀಸರು, ಶ್ವಾನದಳ, ಬೆರಳಚ್ಚು ತಜ್ಞರು ಭೇಟಿ ನೀಡಿ, ಪರಿಶೀಲಿಸಿದರು.

ಮೂರು ಅಂಗಡಿಗಳಿಗೆ ಬೆದರಿಕೆ ಪತ್ರ: ಅಂಗಡಿ ಮುಂಭಾಗವಿರುವ ಸಿಸಿ ಕ್ಯಾಮರಾಗಳನ್ನು ತೆರವು ಮಾಡುವಂತೆ ಮೂರು ಅಂಗಡಿಗಳ ಮಾಲೀಕರಿಗೆ ಅ.1ರಂದು ಮಧ್ಯಾಹ್ನ ಅಪರಿಚಿತ ಪತ್ರವೊಂದು ಬಂದಿದ್ದು, ಜನತೆಯಲ್ಲಿ ಭೀತಿ ಉಂಟು ಮಾಡಿದೆ.

ನಗರದ ದೊಡ್ಡಂಗಡಿ ಬೀದಿಯಲ್ಲಿರುವ ಕಾರ್ತಿಕ್ ಜ್ಯೂಯಲರ್ಸ್, ಮಯೂರ ಜ್ಯೂಯಲರ್ಸ್ ಹಾಗೂ ವಾಸುಕಿ ಯೂ ಶಾಪ್ ಅಂಗಡಿ ಮಾಲೀಕರಿಗೆ ಬೇನಾಮಿ ಬೆದರಿಕೆ ಪತ್ರ ಬಂದಿದ್ದು, ಸದರಿ ಪತ್ರದಲ್ಲಿ ಅಪಾಯ ಸೂಚನೆ ಇದೆ. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ತೆಲುಗು, ತಮಿಳಲ್ಲಿ ಮಿಂಚುತ್ತಿರುವ ರುಕ್ಮಿಣಿ ವಸಂತ್



'ಸಪ್ತಸಾಗರದಾಚೆ ಎಲ್ಲೋ' ಖ್ಯಾತಿಯ ನಟಿ ರುಕ್ಮಿಣಿ ವಸಂತ್ ಕೈಲೀಗ ಹಲವಾರು ಪ್ರಾಜೆಕ್ಟ್‌ಗಳಿವೆ. ಕನ್ನಡ ಅಲ್ಲದೆ ತೆಲುಗು, ತಮಿಳಿನಲ್ಲೂ ಮಿಂಚುತ್ತಿರುವ ಈ ಕೃಷ್ಣಸುಂದರಿಗೆ ಸೌತ್ ಸಿನಿಮಾ ರಂಗದಲ್ಲಿ ಹೆಚ್ಚಿನ ಬೇಡಿಕೆಯಿದೆ. ಸದ್ಯ ಕನ್ನಡ ಚಿತ್ರಗಳ ಜೊತೆ ಬೇರೆ ಭಾಷೆಯ ಚಿತ್ರಗಳಲ್ಲೂ ಬ್ಯುಸಿಯಾಗಿರುವ ಈ ಬೆಡಗಿಗೆ ಇದೀಗ ತೆಲುಗು ಚಿತ್ರರಂಗದಿಂದ ದೊಡ್ಡ ಆಫರ್ ಬಂದಿದೆ. ಟಾಲಿವುಡ್‌ನ ಸ್ಟಾರ್ ನಟನ ಚಿತ್ರದ ನಾಯಕಿಯಾಗಿ ರುಕ್ಮಿಣಿ ವಸಂತ್ ಆಯ್ಕೆಯಾಗಿದ್ದಾರೆ.

ಜ್ಯೂನಿಯರ್ ಎನ್‌ಟಿಆರ್ ನಟಿಸುತ್ತಿರುವ ಹೊಸ ಚಿತ್ರ ಇನ್ನೂ ಫೈನಲ್ ಆಗಿಲ್ಲ. ಇದೊಂದು ಆಕ್ಷನ್ ಡ್ರಾಮಾ ಕಥಾಹಂದರ ಹೊಂದಿದ ಚಿತ್ರವಾಗಿದ್ದು, ಈ ಚಿತ್ರಕ್ಕೆ ಕೆಜಿಎಫ್, ಸಲಾರ್ ಖ್ಯಾತಿಯ ನಿರ್ದೇಶಕ ಪ್ರಶಾಂತ್ ನೀಲ್ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ.

ಇತ್ತೀಚೆಗಷ್ಟೇ ಪ್ರಶಾಂತ್‌ನೀಲ್ ಮತ್ತು ತಾರಕ್ ಕಾಂಬಿನೇಷನ್‌ನ ಈ ಹೊಸ ಚಿತ್ರದ ಮುಹೂರ್ತ ಸಮಾರಂಭ ಹೈದರಾಬಾದ್‌ನಲ್ಲಿ ನಡೆದಿದೆ. ಈ ಚಿತ್ರದಲ್ಲಿ ಕನ್ನಡದ ನಟಿ ರುಕ್ಮಿಣಿ ವಸಂತ್ ಅವರು ನಾಯಕಿ ಪಾತ್ರಕ್ಕೆ ಆಯ್ಕೆಯಾಗಿದ್ದಾರೆ. ಈ ಬಗ್ಗೆ ನಿರ್ದೇಶಕ ಪ್ರಶಾಂತ್‌ನೀಲ್ ಅವರನ್ನು ವಿಚಾರಿಸಿದಾಗ ಮಾತುಕತೆ ನಡೆದಿದ್ದು, ಫೈನಲ್ ಆಗುವ ಹಂತದಲ್ಲಿದೆ. ಸದ್ಯದಲ್ಲೇ ಅನೌನ್ಸ್ ಮಾಡುತ್ತೇವೆ ಎಂದು ಹೇಳಿದ್ದಾರೆ.

ಅಂದಹಾಗೆ, ಪ್ರಶಾಂತ್‌ನೀಲ್ ನಿರ್ದೇಶನದ, ಶ್ರೀಮುರಳಿ ನಾಯಕನಾಗಿ ಅಭಿನಯಿಸುತ್ತಿರುವ 'ಬಘೀರ' ಚಿತ್ರದಲ್ಲೂ ರುಕ್ಮಿಣಿ ವಸಂತ್ ನಾಯಕಿಯಾಗಿ ನಟಿಸಿದ್ದಾರೆ. ಶಿವರಾಜ್‌ಕುಮಾರ್ ಅವರ ಜೊತೆ 'ಬೈರತಿ ರಣಗಲ್' ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದರ ಜೊತೆಗೆ ವಿಜಯ್ ಸೇತುಪತಿ ಅಭಿನಯದ ಹೊಸ ಚಿತ್ರ, ಶಿವಕಾರ್ತಿಕೇಯನ್ ನಟನೆಯ ನೂತನ ಚಿತ್ರ ಸೇರಿದಂತೆ, ಬೇರೆ ಭಾಷೆಯ ಹಲವು ಸಿನಿಮಾಗಳಲ್ಲಿ ರುಕ್ಮಿಣಿ ವಸಂತ್ ನಾಯಕಿಯಾಗಿ ಅಭಿನಯಿಸುತ್ತಿದ್ದಾರೆ. ಹೀಗೆ ಕನ್ನಡದ ನಟಿಯೊಬ್ಬಳು ಬೇರೆ ಭಾಷೆಯಲ್ಲಿ ಮಿಂಚುತ್ತಿರುವುದು ಹೆಮ್ಮೆಯ ಸಂಗತಿ.

ಬ್ರಹ್ಮ ವಿಷ್ಣು ಮಹೇಶ್ವರರಾದ
ಶಿವಣ್ಣ-ಉಪೇಂದ್ರ-ರಾಜ್‌ಶೆಟ್ಟಿ



ಕನ್ನಡದಲ್ಲಿ ಮಲ್ಟಿಸ್ಟಾರ್ ಸಿನಿಮಾಗಳು ವಿರಳ. ಆಪ್ತಮಿತ್ರ, ವಿಲನ್, ಮಫ್ತಿ, ಮುಕುಂದ ಮುರಾರಿ ನಂತರ ಮತ್ತೊಂದು ಮಲ್ಟಿಸ್ಟಾರ್ ಚಿತ್ರ ತೆರೆಗೆ ಬರುತ್ತಿದೆ. ಸಂಗೀತ ನಿರ್ದೇಶಕರಾಗಿ ಹೆಸರು ಮಾಡಿದ ಅರ್ಜುನ್ ಜನ್ಯ ಅವರ ಪ್ರಥಮ ನಿರ್ದೇಶನದ "45" ಚಿತ್ರದಲ್ಲಿ ಶಿವರಾಜ್ ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಹೀಗೆ ಮೂವರು ಸ್ಟಾರ್‌ಗಳು ಅಭಿನಯಿಸಿದ್ದು, ಸೂರಜ್ ಫಿಲಂಸ್ ಮೂಲಕ ರಮೇಶ್ ರೆಡ್ಡಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಬರೋಬ್ಬರಿ 106 ದಿನಗಳವರೆಗೆ ಚಿತ್ರೀಕರಣ ನಡೆಸಲಾಗಿದೆ. ಶೂಟಿಂಗ್ ಮುಗಿಸಿದ ಸಂಭ್ರಮವನ್ನು ಚಿತ್ರತಂಡ ಮಾಧ್ಯಮಗಳ ಮುಂದೆ ಹಂಚಿಕೊಂಡಿತು.

ಮೊದಲು ಮಾತನಾಡಿದ ಶಿವಣ್ಣ, ಚಿತ್ರದಲ್ಲಿ ಮೂವರದೂ ಅದ್ಭುತ ಪಾತ್ರ. ನಾನು, ಉಪೇಂದ್ರ ಈಗಾಗಲೇ ಒಟ್ಟಿಗೆ ಅಭಿನಯಿಸಿದ್ದೇವೆ. ರಾಜ್ ಬಿ.ಶೆಟ್ಟಿ ನನ್ನ ಫೇವರಿಟ್ ಆಕ್ಟರ್, ನಮ್ಮ ಜೊತೆ ಅವರೂ ಇದ್ದಾರೆ. ಅರ್ಜುನ್ ಜನ್ಯ ಅವರದು ಮೊದಲ ನಿರ್ದೇಶನ ಅಂತ ಹೇಳಲಿಕ್ಕೆ ಆಗಲ್ಲ. ಅಷ್ಟು ಅದ್ಭುತವಾಗಿ ಸಿನಿಮಾ ಮಾಡಿದ್ದಾರೆ, "45" ಇಡೀ ಭಾರತೀಯರೆಲ್ಲ ಮೆಚ್ಚುವಂಥ ಆಕ್ಷನ್ ಚಿತ್ರವಾಗಲಿದೆ ಎಂದರು.

ನಂತರ ಉಪೇಂದ್ರ ಮಾತನಾಡಿ, ನಾನೊಬ್ಬ ನಿರ್ದೇಶಕನಾಗಿ ಹೇಳುತ್ತಿದ್ದೇನೆ, ಅರ್ಜುನ್ ಜನ್ಯ ನಮ್ಮಂಥ ಮೂರು ಜನರನ್ನಿಟ್ಟುಕೊಂಡು ತುಂಬಾ ಕಾನ್ಫಿಡೆಂಟ್ ಆಗಿ ಈ ಚಿತ್ರ ಮಾಡಿದ್ದಾರೆ. ನಾವೆಲ್ಲ ಒಪ್ಪಿದ್ದೇವೆ ಎಂದರೆ ಅದಕ್ಕೆ ಅದ್ಭುತ ಸ್ಟೋರಿ ಕಾರಣ. ಒಂದು ಕಥೆಯನ್ನು ಅನಿಮೇಷನ್ ಮೂಲಕ ಹೇಳಿದ್ದನ್ನು ನಾನು ಹಾಲಿವುಡ್‌ನಲ್ಲಿ ಕೇಳಿದ್ದೆ. ಆದರೆ ಜನ್ಯ ಅದನ್ನು ಕನ್ನಡದಲ್ಲೇ ಮಾಡಿದ್ದಾರೆ. ಅಷ್ಟೇ ಅಲ್ಲದೇ ಅನಿಮೇಷನ್ ಮೂಲಕ ಕಥೆ ಹೇಳಿದ ರೀತಿಯಲ್ಲೇ ಚಿತ್ರವನ್ನೂ ಮಾಡಿದ್ದಾರೆ. ನಾನಾಗಲೇ ಶಿವಣ್ಣ ಜೊತೆ 3 ಸಿನಿಮಾ ಮಾಡಿದ್ದೇನೆ. ಇಲ್ಲಿ ಕಂಟೆಂಟೇ ಹೀರೋ. ಮೂರು ಜನ ಏಕೆ, ಟೈಟಲ್ ಅರ್ಥವೇನು ಅನ್ನೋದು ಸಿನಿಮಾ ನೋಡಿದಾಗ ಗೊತ್ತಾಗುತ್ತೆ ಎಂದರು. ನಿರ್ದೇಶಕ ಅರ್ಜುನ್ ಜನ್ಯ ಮಾತನಾಡುತ್ತಾ, 3 ಮಹಾನ್ ಡೈರೆಕ್ಟರ್‌ಗಳು ನನ್ನ ಹಿಂದಿದ್ದಾರೆ, ಏನೇ ತಪ್ಪು ಮಾಡಿದ್ರೂ ಬುದ್ಧಿ ಹೇಳ್ತಿದ್ದರು. ಇವರನ್ನು ಬ್ರಹ್ಮ, ವಿಷ್ಣು, ಮಹೇಶ್ವರ ಅಂತ ಕರೆಯುತ್ತೇನೆ. ಉಪೇಂದ್ರ ಇಲ್ಲಿ ಬ್ರಹ್ಮ ಆದರೆ, ರಾಜ್ ಬಿ.ಶೆಟ್ಟಿ ಇಲ್ಲಿ ವಿಷ್ಣು, ಶಿವಣ್ಣ ಮಹೇಶ್ವರನ ಥರ, ಭಕ್ತಿ ಇದ್ದರೆ, ಏನು ಕೇಳಿದ್ರೂ ಕೊಡ್ತಾರೆ. ಇವರಿಗೆ ದೇವಾಲಯ ಕಟ್ಟಿಕೊಟ್ಟದ್ದು, ನಿರ್ಮಾಪಕ ರಮೇಶ್ ರೆಡ್ಡಿ. ಆ ದೇವಾಲಯವೇ 45, ಛಾಯಾಗ್ರಾಹಕ ಸತ್ಯಹೆಗಡೆ ಪ್ರಧಾನ ಪುರೋಹಿತರು ಎಂದು ಹೇಳಿದರು.

ಅನಿಮೇಷನ್‌ನಲ್ಲಿ ಚಿತ್ರ ನೋಡಿದಾಗ ತುಂಬಾ ಇಷ್ಟವಾಯಿತು. ಅರ್ಜುನ್ ಜನ್ಯ ಸಂಗೀತ ನಿರ್ದೇಶಕರಾಗಿ ಗೆದ್ದಿದ್ದಾರೆ. ನಿರ್ದೇಶಕರಾಗಿಯೂ ಗೆಲ್ಲುತ್ತಾರೆಂಬ ಭರವಸೆಯಿದೆ. ಶಿವರಾಜಕುಮಾರ್, ಉಪೇಂದ್ರ, ರಾಜ್ ಬಿ. ಶೆಟ್ಟಿ ಈ ಮೂರೂ ಜನ ಈ ಚಿತ್ರದಲ್ಲಿ ನಟಿಸಿರುವುದು ನನ್ನ ಭಾಗ್ಯ. ಬರೀ ಕರ್ನಾಟಕದಲ್ಲಷ್ಟೇ ಅಲ್ಲ. ಇಡೀ ಭಾರತದಲ್ಲೇ ನಮ್ಮ ಚಿತ್ರ ಹೆಸರು ಮಾಡುವ ನಂಬಿಕೆಯಿದೆ ಎಂದು ನಿರ್ಮಾಪಕ ರಮೇಶ್ ರೆಡ್ಡಿ ತಿಳಿಸಿದರು.

'ಭೈರಾದೇವಿ' ರಾಧಿಕಾ ಕುಮಾರಸ್ವಾಮಿ 'ಅಘೋರಿ'



ರಾಧಿಕಾ ಕುಮಾರಸ್ವಾಮಿ ದ್ವಿಪಾತ್ರದಲ್ಲಿ ಕಾಣಿಸಿ ಕೊಂಡಿರುವ ಹಾರರ್ ಚಿತ್ರ 'ಭೈರಾದೇವಿ' ಬಿಡುಗಡೆಯಾಗಿದೆ. ಕನ್ನಡ, ತಮಿಳು, ತೆಲುಗು ಸೇರಿ ಮೂರು ಭಾಷೆಗಳಲ್ಲಿ ತಯಾರಾಗಿರುವ ಈ ಚಿತ್ರದಲ್ಲಿ ಈವರೆಗೂ ನೋಡಿರದ ಹೆಣ್ಣು ಅಘೋರಿ ಹಾಗೂ ನಾಯಕಿಯಾಗಿ ನಟಿಸಿದ್ದಾರೆ. ಶ್ರೀಜೈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿರೋ ಈ ಚಿತ್ರದಲ್ಲಿ ರಮೇಶ್ ಅರವಿಂದ್ ನೆಗೆಟಿವ್ ಶೇಡ್ ಪಾತ್ರದಲ್ಲಿ, ಅನುಪ್ರಭಾಕರ್ ಇವರ ಪತ್ನಿಯಾಗಿ ನಟಿಸಿದ್ದಾರೆ.

ರಾಧಿಕಾ ಕುಮಾರಸ್ವಾಮಿ ಅವರಿಗೆ ಮೊದಲಿಂದಲೂ ಸ್ಮಶಾನ ಎಂದರೆ ಭಯ. ನಿರ್ದೇಶಕರು ಈ ಚಿತ್ರದ ಹೆಚ್ಚಿನ ಭಾಗದ ಕಥೆ ಸ್ಮಶಾನದಲ್ಲೇ ನಡೆಯುತ್ತದೆ ಎಂದಾಗ, ರಾಧಿಕಾ ಸೆಟ್ ಹಾಕುವ ಸಲಹೆ ನೀಡಿದ್ದಾರೆ. ಕೊನೆಗೆ ಅವರಿಗೆ ಗೊತ್ತಿಲ್ಲದ ಹಾಗೆ ಅವರನ್ನು ಸ್ಮಶಾನಕ್ಕೆ ಕರೆತಂದು ನಂತರ ಒಪ್ಪಿಸಿ, ಚಿತ್ರೀಕರಣ ಮಾಡಲಾಗಿದೆ. ಆಪ್ತಮಿತ್ರ ನಂತರ ನಾನು ಹಾರರ್ ಚಿತ್ರ ಮಾಡಿಲ್ಲ. ಅಲ್ಲದೆ ಇಂಥ ಪಾತ್ರ ಮಾಡಿ ಬಹಳ ವರ್ಷಗಳೇ ಆಗಿವೆ. ಹಾಗಾಗಿ ಈ ಚಿತ್ರ ಒಪ್ಪಿಕೊಂಡಿದ್ದಾಗಿ ನಾಯಕ ರಮೇಶ್ ಅರವಿಂದ್ ಹೇಳಿದರು. ಜೆ.ಎಸ್.ವಾಲಿ ಅವರ ಛಾಯಾಗ್ರಹಣ, ಕೆ.ಕೆ.ಸೆಂಥಿಲ್ ಅವರ ಸಂಗೀತ ನಿರ್ದೇಶನ ಹಾಗೂ ರವಿಚಂದ್ರನ್ ಅವರ ಸಂಕಲನ ಈ ಚಿತ್ರಕ್ಕಿದೆ.

'ಜಾಂಟಿ ಸನ್ ಆಫ್ ಜಯರಾಜ್' ಟೀಸರ್




ಆನಂದರಾಜ್ ಅವರ ನಿರ್ದೇಶನದ 'ಜಾಂಟಿ ಸನ್ ಆಫ್ ಜಯರಾಜ್' ಚಿತ್ರದ ಪಾತ್ರಗಳ ಪರಿಚಯದ ಟೀಸರ್ ಹಾಗೂ ಟ್ರೇಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ನಟಿ ವಿನೋದ್ ಪ್ರಭಾಕರ್ ಮತ್ತು ಶ್ರೀನಗರ ಕಿಟ್ಟಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಚಿತ್ರರಂಗದಲ್ಲಿ ಎರಡು ದಶಕಗಳ ಕಾಲ ಪ್ರಚಾರ ಕಾರ್ಯದಲ್ಲಿ ಅನುಭವ ಹೊಂದಿರುವ ಸುಗೂರು ಕುಮಾರ್ ಅವರು ಪ್ರಥಮ ಬಾರಿಗೆ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಕತೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಆನಂದ ರಾಜ್ ಮಾತನಾಡಿ, ಜಯರಾಜ್ ಅವರ ನಂತರದ ದಿನಗಳ ಸಂದರ್ಭದಲ್ಲಿ ಹಣಕಾಸು ವ್ಯವಹಾರ, ಮಾರ್ಕೆಟ್ ದಂಧೆ ಎಲ್ಲವೂ ರಾರಾಜಿಸುತ್ತಿತ್ತು. ಇಂತಹ ವಿಷಯಗಳನ್ನು ಕೇಳಿದ್ದು, ನೋಡಿದ್ದು, ಓದಿದ್ದು ಎಲ್ಲವನ್ನು ಬಳಸಿಕೊಂಡು ಈ ಚಿತ್ರದ ಚಿತ್ರಕಥೆ ಬರೆದಿದ್ದೇನೆ. ಜಯರಾಜ್ ಅವರ ಮಗನೇ ಪಾತ್ರವಾಗಿ ಬರುತ್ತಾರೆ. ಆತನ ಸಾವಿಗೆ ಕಾರಣರಾದಂಥ ಪಾತ್ರಗಳು ಬಂದು ಹೋಗುತ್ತವೆ. ಆಗಿನ ಕಾಲಘಟ್ಟದಲ್ಲಿ ಇದ್ದಂತ ಎಲ್ಲಾ ಪಾತ್ರಗಳನ್ನು ಕಾಲ್ಪನಿಕವಾಗಿ ಚಿತ್ರದಲ್ಲಿ ತೋರಿಸಲಾಗಿದೆ. ಜತೆಗೆ ತಾಯಿ ಸೆಂಟಿಮೆಂಟ್, ನವಿರಾದ ಪ್ರೀತಿ-ಪ್ರೇಮದ ಸನ್ನಿವೇಶಗಳು ಅಲ್ಲದೆ ಗೆಳೆತನದ ಸಾರವನ್ನು ಈ ಚಿತ್ರದ ಮೂಲಕ ಹೇಳಲಾಗಿದೆ. ಹಳೇ ಬೆಂಗಳೂರು ಹೇಗಿತ್ತು ಅಂತ ನೋಡಬೇಕಾದರೆ, ನಮ್ಮ ಸಿನಿಮಾ ನೋಡಿ. 1989ರ ಅವಧಿ ನಂತರ ಈಗಿನ ಜಮಾನದಲ್ಲಿ ಏನೇನೆಲ್ಲ ನಡೆಯುತ್ತಿದೆ ಎಂಬುದು ಸಹ ಈ ಚಿತ್ರದಲ್ಲಿದೆ. ಕಲಾವಿದರುಗಳಾದ ರಾಜವರ್ಧನ್, ಶರತ್ ಲೋಹಿತಾಶ್ವ, ಪೆಟ್ರೋಲ್ ಪ್ರಸನ್ನ, ಕಿಶನ್, ಸೋನು ಪಾಟೀಲ್, ಸಚ್ಚಿನ್ ಪುರೋಹಿತ್, ಮೈಕೋ ನಾಗರಾಜ್ ಇವರೆಲ್ಲರೂ ಪಾತ್ರಕ್ಕೆ ಜೀವ ತುಂಬಿದ್ದಾರೆ ಎಂದರು. ನನ್ನ ತಂದೆಯ ಪಾತ್ರವನ್ನೇ ಮಾಡುವಾಗ ನಾನು ತುಂಬಾ ನರ್ವಸ್ ಆಗಿದ್ದೆ. ನಿರ್ದೇಶಕರು ಹೇಳಿದಾಗ ಓಕೆ ಅಂತ ಹೇಳಿದ್ದೆ. ಕ್ಯಾಮೆರಾ ಮುಂದೆ ನಿಂತಾಗ ನನಗೆ ನಡುಕ ಬಂತು. ಅಂತ ಪವರ್‌ಫುಲ್ ರೋಲನ್ನು ಹೇಗೆ ಮಾಡುವುದು. ಕೊನೆಯ ಒಂದು ದೃಶ್ಯದಲ್ಲಿ ನಟಿಸಿದಾಗ ಧೈರ್ಯ ಬಂತು. ಅಪ್ಪನ ಕಾಲ, ಮಗನಾಗಿ ಹೀಗೆ ಎರಡು ಶೇಡ್‌ಗಳಲ್ಲಿ ನಾನು ಕಾಣಿಸಿಕೊಂಡಿದ್ದೇನೆ ಎಂದು ನಾಯಕ ಅಜಿತ್ ಜಯರಾಜ್ ಹೇಳಿದರು.

ನಾಯಕಿ ನಿವಿಷ್ಕ ಪಾಟೀಲ್ ಮಾತನಾಡಿ, ಚಿತ್ರೀಕರಣ ಅನುಭವಗಳನ್ನು ಮೆಲುಕು ಹಾಕಿದರು. ಅರ್ಜುನ್ ಆಕೋಟ್ ಅವರ ಛಾಯಾಗ್ರಹಣ, ವಿಜೇತ ಮಂಜೇಹ ಅವರ ಸಂಗೀತ, ಛಾಯಾಗ್ರಹಣ, ಅಲೆಕ್ಸ್ ಅವರ ಹಿನ್ನೆಲೆ ಶಬ್ದ ಈ ಚಿತ್ರಕ್ಕಿದೆ.

ಸಿನಿಪದಬಂಧ-545



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________
ವಿಳಾಸ ____________
____
ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1.ಡಾ. ರಾಜ್ ಕುಮಾರ್ ಅಭಿನಯದಿ ನಯನ ಭಯವ ತುಂಬಿದೆ !	4
3.ವಿಷ್ಣುವರ್ಧನ್ "ಹೀರೋ" ಆಗಲು ಸುಮಲತಾ ನಾಯಕಿ	5
5.ಕಪ್ಪನೆಯ ನಡುವೆ 'ಜಾಣ' ನಟಿ ಇದ್ದಾಳೆ	5
6.ಬಾ ನಲ್ಲೆ ಮಧು ಚಂದ್ರಕೆ ಹಾಡಿನಲ್ಲಿ ಸಿಹಿ ಪಲ್ಲಂಗವಿದೆ	4
7.ಪ್ರಾಣಿಯೊಂದರ ಊರಿಗೆ ಕುಮಾರ್ ಗೋವಿಂದ್ ಅಭಿನಯವಿದೆ	5
8.ರಾಮನ ಸಹೋದರ ಎಳೆದ 'ರೇಖೆ'	3
10.ಆಸೆಯ ಬಲೆ ನೇಯ್ದ ನಟಿ	3
11.ನೆನಪಿರಲಿ ಪ್ರೇಮ್ ಸೇನೆಯ ಮುಖ್ಯಸ್ಥ	4
13.ಹಾಡಿನ ಆರಂಭದಿ ಸಿಕ್ಕ ನಟಿ	3
14.ಯಮನ ಸೇವಕ	3
15.ಸೂರಪ್ಪ ಚಿತ್ರದ ನಾಯಕಿ	2
16.ಕನ್ನಡದ ಡ್ಯೂಯಟ್	3
17."ಮಧುಮಾಸ _ _ _ ನೈದಿಲೆಗೆ ಸಂಭ್ರಮ...... ",	3

ಮೇಲಿನಿಂದ ಕೆಳಕ್ಕೆ

1.ನಕ್ಷತ್ರಗಳೊಳಗೆ ಸಿಕ್ಕ ಕ್ಯಾಬರೆ ತಾರೆ !	4
2.ಸುರ ಸುಂದರಾಂಗಿಯ ಜೊತೆ ಖಡ್ಗ ಹಿಡಿದವನು	5
3.ಕಗ್ಗತ್ತಲು ಆವರಿಸಿದ ಬೆಟ್ಟ	4
4." ಈ ಹಸಿರು ಸಿರಿಯಲಿ ... ", ಹಾಡಿನ ಚಿತ್ರ	5
5.ಎಂ.ವಿ.ವಾಸುದೇವ್‌ರಾವ್ ಅಭಿನಯಕ್ಕೆ ವಿ.ಎಲ್.ಆಚಾರ್ಯ ನಿರ್ದೇಶನವಿದೆ	10
7.ಕಡಲೆಕಾಯಿಯ ತಾಜಾ ತಾಜಾ ರುಚಿ ತೋರಿಸಿದ ಚಿತ್ರ	6
9.ಮನ್ಮಥನೆಂಡತಿಯ ಗಂಡ	4
12.ಶಂಕರ್ ನಾಗ್ - ಆರತಿ ಅಭಿನಯದ ಪರಿಶುದ್ಧ ಪ್ರೀತಿ	5

ಸಿನಿ ಪದಬಂಧ 544ರ ಉತ್ತರ

ಪ್ರ	ತೀ	ಕಾ	ರ			ಮ	#	ಪ್ರೇ	ಮಾ	ಗ್ನಿ
ತಿ		ಡಿ		ಮ	ದ	ನ		ಮ		
ಧ್ವ		ನ		ದು		ಸಾ	ಹು	ಕಾ	ರ	
ನಿ		ರಾ		ವೆ		ಕ್ಷಿ		ಶ್ರೀ		
	ರಾ	ಜ	ಕು	ಮಾ	ರ			ರ	ಜ	ನಿ
	ಗಿ			ಡು			ಅಂ			
ಮಾ	ಣಿ	ಕ್ಯ		ತ	ಲೆ	ದಂ	ಡ		ನಾ	
	ದ್ವಿ			ಮಾ			ಮಾ	ಧು	ರಿ	
ತ್ರಿ	ವೇ	ಣಿ		ಷೆ		ಗ	ನ್		ಯ	
	ದಿ		ವಿ	ನೋ	ದ್				ಸೀ	
				ಡು			ಸ	ಕ್ಕ	ರೆ	

ವಿಜೇತರು: ಯಜಮಾನ್ ಗೋವಿಂದರಾಜು, ನಂ.421, 3ನೇ ಕ್ರಾಸ್, ಕುಂಬಾರಕೊಪ್ಪಲು, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮೈಸೂರು ಮಿತ್ರ

ನಂಜನಗೂಡಲ್ಲಿ ಗ್ರಾಮೀಣ ದಸರಾಗೆ ಅದ್ದೂರಿ ಚಾಲನೆ

ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ: ಶಾಸಕ ದರ್ಶನ್



ಜಾನಪದ ಕಲಾವಿದರ ಕಂಸಾಳೆ ನೃತ್ಯ ಪ್ರದರ್ಶನ.



ಕೊಡಗಿನ ಜಾನಪದ ಕಲಾವಿದರಿಗೆ ಶಾಸಕ ದರ್ಶನ್ ಪ್ರಶಸ್ತಿ ಪತ್ರ ವಿತರಿಸಿದರು.

ನಂಜನಗೂಡು, ಅ.3– ವಿಶ್ವ ವಿಖ್ಯಾತ ಮೈಸೂರು ದಸರಾ ಗ್ರಾಮೀಣ ಜನರಿಗೂ ತಲುಪಬೇಕು ಹಾಗೂ ನಮ್ಮ ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಗ್ರಾಮೀಣ ದಸರಾ ಆಯೋಜಿಸಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಶ್ರೀಕಂಠೇಶ್ವರ ದೇವಾಲಯ ಆವರಣದಲ್ಲಿ ಗ್ರಾಮೀಣ ದಸರಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಾಡಹಬ್ಬ ದಸರಾದಿಂದ ಮೈಸೂರು ನಗರ ಪ್ರದೇಶ ಮತ್ತು ಮೈಸೂರು ಜಿಲ್ಲಾದ್ಯಂತ ಹಬ್ಬದ ವಾತಾವರಣ ನಿರ್ಮಾಣವಾಗಿದೆ. ಜಾನಪದ ಕಲೆಗಳು, ನಮ್ಮ ನಾಡಿನ ಸಂಸ್ಕೃತಿಯ ಪ್ರತೀಕ. ಜಾನಪದ ಕಲೆ ಉಳಿಸಿ ಮುಂದಿನ ಪೀಳಿಗೆಗೂ ತಲುಪುವಂತಹ ಕೆಲಸವಾಗಬೇಕು. ಮೈಸೂರು ಜಿಲ್ಲಾ ಮಟ್ಟದಲ್ಲಿ ನಡೆಯುವ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸ್ಥಳೀಯ ಕಲಾವಿದರಿಗೆ ವೇದಿಕೆ ಕಲ್ಪಿಸುವುದು ಕಷ್ಟವಾಗು ತ್ತದೆ. ಆದ್ದರಿಂದ ಸ್ಥಳೀಯ ಜಾನಪದ ಕಲಾವಿದರಿಗೆ ಅವರ ಪ್ರತಿಭೆ ಪ್ರದರ್ಶನ ಮಾಡಲು ಉತ್ತಮ ವೇದಿಕೆ ಕಲ್ಪಿಸುವ ಸಲುವಾಗಿ ಹಾಗೂ ಗ್ರಾಮೀಣ ಜನರಿಗೂ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳು ತಲುಪುವಂತಾಗಬೇಕು ಎಂಬ ಸದುದ್ದೇಶದಿಂದ ಗ್ರಾಮೀಣ ದಸರಾ ಕಾರ್ಯಕ್ರಮಗಳಿಗೆ ಅನುದಾನ ನೀಡಿ ಆಯೋಜನೆ ಮಾಡಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಣೆ ಮಾಡುವ ಮೂಲಕ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಇಂದಿನಿಂದ 9 ದಿನಗಳ ಕಾಲ ಪ್ರತಿದಿನ ಸಂಜೆ 4 ರಿಂದ ರಾತ್ರಿ 10 ಗಂಟೆವರೆಗೂ ಕಲಾವಿದರು ಈ ವೇದಿಕೆ ಮೂಲಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸಲಿದ್ದಾರೆ. ಈಗಾಗಲೇ ಮೈಸೂರು ಮತ್ತು ಕೊಡಗು, ಚಾಮರಾಜನಗರ ಜಿಲ್ಲೆಗಳಿಂದ ವಿವಿಧ ಕಲಾ ತಂಡಗಳು ಆಗಮಿಸಿವೆ. ಸಾರ್ವಜನಿಕರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಣೆ ಮಾಡಿ ಅವರ ಪ್ರತಿಭೆಗೆ ಪ್ರೋತ್ಸಾಹ ನೀಡಬೇಕು ಎಂದರು.

ಇದೇ ಸಂದರ್ಭ ಮಾಜಿ ಶಾಸಕ ಕಳಲೆ ಕೇಶವ ಮೂರ್ತಿ, ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಸದಸ್ಯರಾದ ಎಸ್.ಪಿ.ಮಹೇಶ್, ಗಂಗಾಧರ್, ಮೀನಾಕ್ಷಿ, ಶ್ವೇತಲಕ್ಷ್ಮಿ, ರಮೇಶ್, ಕೆ.ಎಂ.ಬಸವರಾಜು, ಮುಖಂಡ ರಾದ ಎಂ.ಎನ್. ಮಂಜುನಾಥ್, ಗೋವಿಂದರಾಜು, ಶ್ರೀಧರ್, ಕಳಲೆ ರಾಜೇಶ್, ಮಹದೇವಪ್ಪ ಸೇರಿದಂತೆ ಇತರರಿದ್ದರು.

ಸಿದ್ದರಾಮಯ್ಯ ರಾಜೀನಾಮೆ ಕೊಡುವ ಪ್ರಶ್ನೆಯೇ ಇಲ್ಲ

ಯುವ ಕಾಂಗ್ರೆಸ್ ಮುಖಂಡ ಅಕ್ಷಯ್ ಕುಮಾರ್



ಸುದ್ದಿಗೋಷ್ಠಿಯಲ್ಲಿ ಚಿತ್ರ ನಿರ್ಮಾಪಕ, ಯುವ ಕಾಂಗ್ರೆಸ್ ಮುಖಂಡ ಅಕ್ಷಯ್ ಕುಮಾರ್ ಮಾತನಾಡಿದರು.

ತಿ.ನರಸೀಪುರ, ಅ.3– ಮುಖ್ಯಮಂತ್ರಿ ಸಿದ್ದರಾಮಯ್ಯ ಪರಿಶುದ್ಧ ರಾಜಕಾರಣಿಯಾಗಿದ್ದು, ಮುಡಾ ಹಗರಣದಲ್ಲಿ ಅವರ ಪಾತ್ರ ಇಲ್ಲದಿರುವುದರಿಂದ ಅವರು ರಾಜೀನಾಮೆ ಕೊಡುವ ಪ್ರಶ್ನೆಯೇ ಇಲ್ಲ ಎಂದು ಚಿತ್ರ ನಿರ್ಮಾಪಕ, ಯುವ ಕಾಂಗ್ರೆಸ್ ಮುಖಂಡ ಅಕ್ಷಯ್ ಕುಮಾರ್ ತಿಳಿಸಿದರು.

ಪಟ್ಟಣದ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ 40 ವರ್ಷಗಳ ರಾಜಕೀಯ ಜೀವನದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದೇ ಯಶಸ್ವಿಯಾಗಿ ಆಡಳಿತ ನಡೆಸುತ್ತಾ ಬಂದಿದ್ದಾರೆ. ಇದೀಗ ಮುಡಾ ಪ್ರಕರಣದಲ್ಲಿ ಅವರ ಹೆಸರು ಕೇಳಿ ಬಂದಿದ್ದು, ನಿವೇಶನ ಅಕ್ರಮವಾಗಿ ಪಡೆಯಲಾಗಿದೆ ಎಂಬ ಆರೋಪ ಕೇಳಿ ಬಂದಿದೆ. ಆದರೆ ಸಿದ್ದರಾಮಯ್ಯ ಅವರು ಯಾವುದೇ ತಪ್ಪು ಮಾಡಿಲ್ಲ. ಹೀಗಾಗಿ ರಾಜೀನಾಮೆ ಕೊಡುವ ಅಗತ್ಯ ವಿಲ್ಲ. ಅವರು ಹಗರಣದಿಂದ ದೋಷಮುಕ್ತರಾಗಿ ಹೊರ ಬರಲಿದ್ದಾರೆ. ಮುಂದಿನ 3 ವರ್ಷಗಳ ಕಾಲ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದು, ಕರ್ನಾಟಕವನ್ನು ಕಲ್ಯಾಣ ರಾಜ್ಯ ಮಾಡುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮುಡಾ ಹಗರದಲ್ಲಿ ಇಡಿ ಪ್ರವೇಶ ಬಿಜೆಪಿ ಪಕ್ಷದವರ ಕುತಂತ್ರದ ಒಂದು ಭಾಗವಾಗಿದೆ. ಮುಖ್ಯಮಂತ್ರಿಗಳನ್ನು ಹಗರಣದಲ್ಲಿ ಸಿಲುಕಿಸಿ ಅವರ ರಾಜೀನಾಮೆ ಕೊಡಿಸಲು ವಿಪಕ್ಷಗಳು ರೂಪಿಸಿರುವ ಸಂಚು ಇದಾಗಿದ್ದು, ಸಿದ್ದರಾಮಯ್ಯಗೆ ರಾಜ್ಯದ ಕೋಟ್ಯಾಂತರ ಜನತೆ ಹಾಗೂ ತಾಯಿ ಚಾಮುಂಡೇಶ್ವರಿ ಆಶೀರ್ವಾದ ಇದ್ದು ಹಗರಣ ಮುಕ್ತರಾಗಿ ಹೊರ ಹೊಮ್ಮಲಿದ್ದಾರೆ ಎಂದರು.

ಸಿದ್ದು ಅವರು ತಮಗಿದ್ದ 3 ವರ್ಷಗಳ ಮುಖ್ಯಮಂತ್ರಿ ಅವಧಿ ಮುಗಿಸಿ ರಾಜಕೀಯ ನಿವೃತ್ತಿ ಘೋಷಣೆ ಮಾಡಿಕೊಳ್ಳಬೇಕೆಂಬ ನಿರ್ಧಾರದಲ್ಲಿದ್ದ ವೇಳೆ ಅವರ ಹೆಸರಿಗೆ ಕಳಂಕ ತರಲು ಬಿಜೆಪಿ ಜೆಡಿಎಸ್ ಜೊತೆಗೂಡಿ ಹುನ್ನಾರ ಮಾಡಿ ಅವರನ್ನು ಅಧಿಕಾರದಿಂದ ಕೆಳಗಿಸುವ ಕೀಳು ಮಟ್ಟದ ರಾಜಕಾರಣಕ್ಕೆ ಮುಂದಾಗಿರುವುದು ಅವರಿಗೆ ಶೋಭೆ ತರದು ಎಂದು ಬೇಸರ ವ್ಯಕ್ತಪಡಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಾಗಲೇ ವಿಪಕ್ಷಗಳು ಅವರ ತೇಜೋವಧೆ ಮಾಡಲು ಆರಂಭಿಸಿತ್ತು. ಆದರೆ ಅದನ್ನು ಮೆಟ್ಟಿ ನಿಂತು ಸಿದ್ದರಾಮಯ್ಯ ಅವರು ಯಶಸ್ವಿಯಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ರಾಜ್ಯದ ಜನತೆಯ ಮನದಲ್ಲಿ ಚಿರಸ್ಥಾಯಿಯಾಗಿದ್ದಾರೆ. ಈಗ ಮುಡಾ ಹಗರಣ ಮುಂದಿಟ್ಟುಕೊಂಡು ಅಧಿಕಾರದಿಂದ ಕೆಳಗಿಸುವ ವಿರೋಧ ಪಕ್ಷಗಳ ಷಡ್ಯಂತ್ರ ಯಾವುದೇ ಫಲ ನೀಡುವುದಿಲ್ಲ ಎಂದು ನುಡಿದರು.

ಸುದ್ದಿಗೋಷ್ಠಿಯಲ್ಲಿ ತಾಪಂ ಮಾಜಿ ಅಧ್ಯಕ್ಷ ದೊಡ್ಡಬಾಗಿಲು ಎಂ.ಮಲ್ಲಿಕಾರ್ಜುನಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಅಕ್ಕೂರು ಗುರುಮೂರ್ತಿ, ನಾಗರಾಜು (ಚಿಕಾ) ಹಾಜರಿದ್ದರು.

ಕಬಡ್ಡಿ: ವಿಭಾಗ ಮಟ್ಟಕ್ಕೆ ಆಯ್ಕೆ



ಕಬಡ್ಡಿಯಲ್ಲಿ ವಿಭಾಗ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿನಿಯರು.

ಹನಗೋಡು, ಅ.3– ಹಿರಿಯ ಪ್ರಾಥಮಿಕ ಶಾಲೆ ಜಿಲ್ಲಾ ಮಟ್ಟದ ಬಾಲಕಿಯರ ಕಬಡ್ಡಿ ಪಂದ್ಯಾವಳಿಯಲ್ಲಿ ಹನಗೋಡು ಹೋಬಳಿಯ ಶೆಟ್ಟಹಳ್ಳಿ ಸರ್ಕಾರಿ ವಾಲ್ಮೀಕಿ ಬುಡಕಟ್ಟು ಆಶ್ರಮ ಶಾಲೆ ವಿದ್ಯಾರ್ಥಿನಿಯರು ಪ್ರಥಮ ಸ್ಥಾನಗಳಿಸಿ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದು, ಕ್ರೀಡಾಪಟುಗಳನ್ನುಜಿಲ್ಲಾ ಪರಿಶಿಷ್ಟ ವರ್ಗಗಳ ಜಿಲ್ಲಾಧಿಕಾರಿ ಮಲ್ಲೇಶ್, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಗಂಗಾಧರ್, ಮುಖ್ಯ ಶಿಕ್ಷಕ ಶಿವಕುಮಾರ್, ರಾಜ, ಸಂಜಯ್ ಸೇರಿದಂತೆ ಶಾಲೆಯ ಶಿಕ್ಷಕರು ಅಭಿನಂದಿಸಿದ್ದಾರೆ.

ಒಂದು ದೇಶ, ಒಂದು ಚುನಾವಣೆ ಒಕ್ಕೂಟ ವ್ಯವಸ್ಥೆಗೆ ಮಾರಕ

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಆತಂಕ



ಸಭೆಯಲ್ಲಿ ವಿಚಾರ ಸಂಕಿರಣದ ಕರಪತ್ರ ಬಿಡುಗಡೆ ಮಾಡಲಾಯಿತು.

ತಿ.ನರಸೀಪುರ, ಅ.3– ಕೇಂದ್ರ ಸರ್ಕಾರ ತರಾತುರಿಯಲ್ಲಿ ಒಂದು ದೇಶ– ಒಂದು ಚುನಾವಣೆ ಯೋಜನೆ ಜಾರಿಗೆ ತರುತ್ತಿರುವುದು ದೇಶದ ಒಕ್ಕೂಟ ವ್ಯವಸ್ಥೆಗೆ ಮಾರಕವಾಗಿದೆ. ವೈವಿಧ್ಯತೆ ಹೊಂದಿರುವ ಪ್ರಾದೇಶಿಕತೆ ಅಸ್ಮಿತೆಗೆ ಧಕ್ಕೆಯಾಗಲಿದೆ ಎಂದು ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವ ಕುಮಾರ್ ಆತಂಕ ವ್ಯಕ್ತಪಡಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆದ ದಸಂಸ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಹಿತೈಷಿಗಳ ಸಭೆಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಜಾರಿಗೆ ಬರುವ ಯಾವುದೇ ಕಾಯ್ದೆ, ಮಹತ್ವದ ನಿರ್ಧಾರಗಳು ಸಾರ್ವಜನಿಕವಾಗಿ ಚರ್ಚೆಯಾಗಬೇಕು. ಲೋಕಸಭೆ ಅಧಿವೇಶನಗಳಲ್ಲಿ ಸಾಧಕ ಬಾಧಕಗಳ ಪ್ರಸ್ತಾಪವಾಗಬೇಕು. ಇವೆರಡನ್ನೂ ಮಾಡದ ಕೇಂದ್ರ ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿರುವುದು ಪ್ರಜಾಪ್ರಭುತ್ವ ವಿರೋಧಿಯಾಗಿದೆ ಎಂದು ಆರೋಪಿಸಿದರು.

ಒಂದು ದೇಶ ಒಂದು ಚುನಾವಣೆ ಬಗ್ಗೆ ಯಾವುದೇ ಚರ್ಚೆ ನಡೆಸದೆ ಜಾರಿಗೆ ತರಲು ಮುಂದಾಗಿರುವುದು ಆಡಳಿತರೂಢ ಬಿಜೆಪಿಯ ಹಿಡನ್ ಅಜೆಂಡಾ ಜಾರಿಗೊಳಿಸುವ ಷಡ್ಯಂತ್ರವಾಗಿದೆ. ಇಂತಹ ಅವೈಜ್ಞಾನಿಕ ಕ್ರಮ ಒಕ್ಕೂಟ ವ್ಯವಸ್ಥೆ ಮತ್ತು ಪ್ರಾದೇಶಿಕತೆಗೆ ಧಕ್ಕೆಯಾಗಲಿದೆ. ಅಲ್ಲದೇ ಸ್ಥಳೀಯ ವಿಷಯಗಳಿಗೆ ಪ್ರಾಮುಖ್ಯತೆ ಇಲ್ಲದಂತಾಗಲಿದೆ. ಸಮಗ್ರತೆಯಲ್ಲಿ ಏಕತೆ ಬಿಂಬಿಸುವ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹತ್ತಿಕ್ಕುವ ಕುತಂತ್ರವಾಗಿದೆ. ಹಾಗಾಗಿ ಸಿಎಎ ಮತ್ತು ರೈತ ವಿರೋಧಿ ಕಾಯ್ದೆಗಳ ವಿರುದ್ಧ ನಡೆದ ಹೋರಾಟದ ಮಾದರಿ ಮತ್ತೊಂದು ಹೋರಾಟವನ್ನು ಕೇಂದ್ರದ ವಿರುದ್ಧ ನಡೆಸಲು ಭಾರತೀಯ ರೆಲ್ಲರೂ ಸಜ್ಜಾಗಬೇಕು ಎಂದರು.

ವಿಚಾರ ಸಂಕೀರ್ಣ: ಬೆಂಗಳೂರಿನ ಪ್ಯಾಲೇಸ್ ರಸ್ತೆಯಲ್ಲಿರುವ ಕೊಂಡಜ್ಜಿ ಬಸಪ್ಪ ಮೆಮೋರಿಯಲ್ ಹಾಲ್‌ನಲ್ಲಿ ಅ.9ರಂದು ನಡೆಯುವ 'ಒಂದು ದೇಶ, ಒಂದು ಚುನಾವಣೆ ನಿರಂಕುಶ ಪ್ರಜಾಪ್ರಭುತ್ವದತ್ತ ಭಾರತ' ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಉದ್ಘಾಟಿಸಲಿದ್ದು, ಹಿರಿಯ ಅಂಕಣಕಾರ ಎ.ನಾರಾಯಣ್ ವಿಚಾರ ಕುರಿತು ಮಾತನಾಡಲಿದ್ದಾರೆ. ದಸಂಸ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲೆಯ ಎಲ್ಲಾ ದಸಂಸ ಪದಾಧಿಕಾರಿಗಳು, ಕಾರ್ಯಕರ್ತರು, ಹಿತೈಷಿಗಳು ಭಾಗವಹಿಸಬೇಕು ಎಂದು ಮನವಿ ಮಾಡಿದರು.

> “ದೇಶದಲ್ಲಿ ಸಂವಿಧಾನ ಜಾರಿಯಾಗಿ ನ.26ಕ್ಕೆ 75 ವರ್ಷವಾಗಲಿದ್ದು, ಅಂದು ನರಸೀಪುರದಲ್ಲಿ ಸಂವಿಧಾನದ ಅಮೃತ ಮಹೋತ್ಸವ ಹಾಗೂ ಅಂಬೇಡ್ಕರ್ ಜಯಂತಿಯನ್ನು ದಸಂಸದಿಂದ ಆಚರಿಸಲು ನಿರ್ಧರಿಸಲಾಗಿದೆ. ಸಿಎಂ ಸಿದ್ದರಾಮಯ್ಯ ಸೇರಿದಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಇನ್ನಿತರ ಗಣ್ಯರನ್ನು ಕಾರ್ಯಕಮಕ್ಕೆ ಆಹ್ವಾನಿಸಲಾಗುವುದು.
>
> \- ಆಲಗೂಡು ಶಿವಕುಮಾರ್. ದಸಂಸ ಜಿಲ್ಲಾ ಸಂಚಾಲಕ.

ಸಭೆಯಲ್ಲಿ ತಾಲೂಕು ಸಂಚಾಲಕ ಯಾಚೇನಹಳ್ಳಿ ಸೋಮಶೇಖರ್, ಮುಖಂಡರಾದ ಹಿರಿಯೂರು ಸೋಮಣ್ಣ, ವಾಟಾಳ್ ಬಸವರಾಜು, ಬನ್ನಹಳ್ಳಿಹುಂಡಿ ಉಮೇಶ್, ಆಲಗೂಡು ನಾಗರಾಜಮೂರ್ತಿ, ಮಾವಿನಹಳ್ಳಿ ಕುಮಾರ್, ಲಿಂಗರಾಜು, ಇಂಡವಾಳು ಹೊನ್ನಯ್ಯ, ನಾಗರಾಜು, ಯಡದೊರೆ ನಾರಾಯಣ್, ಮುತ್ತತ್ತಿ ನಾಗರಾಜ್, ರಂಗಸಮುದ್ರ ನಂಜುಂಡ, ತಲಕಾಡು ಆನಂದ್, ಅಭಿ, ಉಕ್ಕಲಗೆರೆ ರಾಜು, ಬನ್ನಹಳ್ಳಿ ರಾಜೇಂದ್ರ, ಮಾದಿಗಳ್ಳಿ ರಾಮು, ಆದಿಬೆಟ್ಟಹಳ್ಳಿ ಸೋಮು ಮತ್ತಿತರರಿದ್ದರು.

ಮೊಮ್ಮಗನಿಂದಲೇ ಅಜ್ಜಿ ಸಾವು

ನಂಜನಗೂಡು/ಮಲ್ಕುಂಡಿ, ಅ.3– ಮನೆ ಖರ್ಚಿಗೆ ಹಣ ನೀಡಿಲ್ಲ ಎಂಬ ಕಾರಣಕ್ಕೆ ಅಪ್ರಾಪ್ತ ಮಗ ತಂದೆಯೊಡನೆ ಜಗಳ ಮಾಡುತ್ತಿದ್ದ ವೇಳೆ ಜಗಳ ಬಿಡಿಸಲೆಂದು ಬಂದ ಅಜ್ಜಿಯನ್ನು ಮೊಮ್ಮಗ ಬಲವಾಗಿ ನೂಕಿದ್ದರಿಂದ ಕಾಂಕ್ರೀಟ್ ರಸ್ತೆಗೆ ಬಿದ್ದ ಅಜ್ಜಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಅಲ್ಲಯ್ಯನಪುರ ಗ್ರಾಮದಲ್ಲಿ ಗುರುವಾರ ನಡೆದಿದೆ.

ಗ್ರಾಮದ ನಿವಾಸಿ ನಾಗಮ್ಮ(80) ಸಾವನ್ನಪ್ಪಿದವರು. ಈಕೆ ತಮ್ಮ ಪುತ್ರ ಮಹೇಶ್ ಅವರೊಂದಿಗೆ ವಾಸವಿದ್ದರು. ಗುರುವಾರ ಬೆಳಗ್ಗೆ ಮಹೇಶ್ ಅವರ ಅಪ್ರಾಪ್ತ ಪುತ್ರ ಕಳೆದ 4 ತಿಂಗಳಿಂದ ಮನೆ ಖರ್ಚಿಗೆ ಹಣ ನೀಡುತ್ತಿಲ್ಲ ಎಂದು ಆಕ್ಷೇಪಿಸಿ ತಂದೆಯೊಡನೆ ಜೋರಾಗಿ ಜಗಳವಾಡುತ್ತಿದ್ದ ಎನ್ನಲಾಗಿದ್ದು, ಈ ವೇಳೆ ಸ್ಥಳಕ್ಕಾಗಮಿಸಿದ ಅಜ್ಜಿ ನಾಗಮ್ಮ ಜಗಳ ಬಿಡಿಸಲು ಮುಂದಾಗಿದ್ದಾರೆ. ಈ ವೇಳೆ ಕೋಪದಲ್ಲಿ ಅಪ್ರಾಪ್ತ ಅಜ್ಜಿಯನ್ನು ಜೋರಾಗಿ ತಳ್ಳಿದ ಪರಿಣಾಮ ಮನೆ ಮುಂಭಾಗದ ಕಾಂಕ್ರೀಟ್ ರಸ್ತೆಗೆ ಬಿದ್ದಿದ್ದಾರೆ. ಈ ಸಂದರ್ಭ ತೀವ್ರ ಗಾಯಗೊಂಡ ನಾಗಮ್ಮ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಈ ಸಂಬಂಧ ವೃದ್ಧೆ ನಾಗಮ್ಮರ ಸಹೋದರ ನಾಗಣ್ಣ ಎಂಬುವರು ಹುಲ್ಲಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಎಸ್‌ಐ ಚೇತನ್ ಕುಮಾರ್ ನೇತೃತ್ವದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಪರಿಶೀಲನೆ ನಡೆಸಿ ಶವವನ್ನು ನಂಜನಗೂಡು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಿದರು. ಅಪ್ರಾಪ್ತ ಬಂಧನಕ್ಕೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ನರೇಗಾ ಯೋಜನೆ ಸದುಪಯೋಗಪಡಿಸಿಕೊಳ್ಳಿ

ಹಳೆಬೀಡು ಗ್ರಾಪಂ ಪಿಡಿಓ ರಾಮಣ್ಣ ಸಲಹೆ



ಕಾರ್ಯಕ್ರಮದಲ್ಲಿ ಬಿತ್ತಿಪತ್ರ ಬಿಡುಗಡೆಗೊಳಿಸಲಾಯಿತು.

ಹುಣಸೂರು, ಅ.3– ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಪ್ರತಿ ಮನೆಗಳಲ್ಲೂ ವೈಯಕ್ತಿಕ ಬಚ್ಚಲು ಗುಂಡಿ ನಿರ್ಮಾಣ ಮಾಡಿಕೊಳ್ಳುವ ಮೂಲಕ ಬೂದು ನೀರು ಮುಕ್ತ ಗ್ರಾಮವನ್ನಾಗಿ ಮಾಡಲು ಗ್ರಾಪಂನಿಂದ ಯೋಜನೆ ರೂಪಿಸಲಾಗಿದೆ ಎಂದು ಪಿಡಿಓ ರಾಮಣ್ಣ ತಿಳಿಸಿದರು.

ಗಾಂಧಿ ಜಯಂತಿ ಅಂಗವಾಗಿ ತಾಲೂಕಿನ ಹಳೆಬೀಡು ಗ್ರಾಪಂ ಆವರಣದಲ್ಲಿ ನಡೆದ ವಿಶೇಷ ಗ್ರಾಮ ಸಭೆಯಲ್ಲಿ ಸ್ವಚ್ಛತೆಯೆಡೆಗೆ ದಿಟ್ಟ ಹೆಜ್ಜೆ ಹಾಗೂ ಉದ್ಯೋಗ ಖಾತ್ರಿ ನಡಿಗೆ ಸಬಲತೆಯೆಡೆಗೆ ಅಭಿಯಾನದ ಪ್ರಯುಕ್ತ ಔಟ್‌ರೀಚ್ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಬೀದಿ ನಾಟಕ, ರಂಗೋಲಿ ಸ್ಪರ್ಧೆ, ಶಾಲಾ ಮಕ್ಕಳಿಂದ ಜಾಥಾ ನಡೆಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದ ಬಳಿಕ ಅವರು ಮಾತನಾಡಿದರು.

ಮಹಾತ್ಮ ಗಾಂಧೀಜಿಯವರ ಗ್ರಾಮೀಣಾಭಿವೃದ್ಧಿ ಆಶಯದೊಂದಿಗೆ ಯೋಜನೆ ಜಾರಿಗೊಂಡಿದ್ದು, ಪ್ರತಿಯೊಬ್ಬರೂ ಈ ಯೋಜನೆಯಡಿ ಬರುವ ವೈಯಕ್ತಿಕ ಸೌಲಭ್ಯಗಳಾದ ಬಚ್ಚಲುಗುಂಡಿ, ಕೊಟ್ಟಿಗೆ ನಿರ್ಮಾಣ, ಕೋಳಿ ಶೆಡ್, ಕುರಿ ಶೆಡ್, ಹಂದಿ ಶೆಡ್, ಕೊಳವೆ ಬಾವಿ ಮರುಪೂರಣ ಘಟಕ, ತೋಟಗಾರಿಕೆ ಇಲಾಖೆಯಡಿ ರೈತರ ಜಮೀನುಗಳಲ್ಲಿ ತೆಂಗು, ಬಾಳೆ, ಸೀಬೆ, ಗುಲಾಬಿ, ಮಲ್ಲಿಗೆ, ಕೃಷಿ ಇಲಾಖೆಯಡಿ ಜಮೀನುಗಳಲ್ಲಿ ಬದು ನಿರ್ಮಾಣ, ಕೃಷಿ ಹೊಂಡ, ರೇಷ್ಮೆ ಇಲಾಖೆಯಡಿ ಹಿಪ್ಪುನೇರಳೆ ಬೆಳೆಯಲು ಅವಕಾಶವಿದ್ದು, 2025– 26ನೇ ಸಾಲಿನ ಕ್ರಿಯಾ ಯೋಜನೆ ಸಿದ್ಧಪಡಿಸಲು ಐಇಸಿ ಚಟುವಟಿಕೆಯಡಿ ವಾರ್ಡ್ ಸಭೆ ಮತ್ತು ಗ್ರಾಮ ಸಭೆ ಮೂಲಕ ಕ್ರಮ ವಹಿಸಲಾಗುವುದು. ಅಂತೆಯೇ ಗ್ರಾಮವನ್ನು ಬೂದು ನೀರು ಮುಕ್ತ ಗ್ರಾಮವನ್ನಾಗಿ ಮಾಡಲು ಪ್ರತಿ ಮನೆಗಳಲ್ಲಿ ಬಚ್ಚಲುಗುಂಡಿ ನಿರ್ಮಾಣ ಮಾಡಲು ಯೋಜನೆಯಡಿ ರೂಪುರೇಷೆ ಸಿದ್ಧಮಾಡಿಕೊಳ್ಳಲಾಗುತ್ತಿದೆ ಎಂದರು.

ಬಳಿಕ ಸ್ವಚ್ಛತಾ ಹೀ ಸೇವಾ ಪ್ರತಿಜ್ಞೆಯನ್ನು ನೆರೆದಿದ್ದ ಜನಪ್ರತಿನಿಧಿಗಳು, ಅಧಿಕಾರಿ ವರ್ಗ ಮತ್ತು ಗ್ರಾಮಸ್ಥರ ಸಮ್ಮುಖದಲ್ಲಿ ಸ್ವೀಕರಿಸಲಾಯಿತು.

ತಾಪಂ ಇಓ ಹೊಂಗಯ್ಯ ಮಾತನಾಡಿ, 2025–26ನೇ ಸಾಲಿಗೆ ಕ್ರಿಯಾ ಯೋಜನೆ ತಯಾರಿಸಲಾಗುತ್ತಿದ್ದು, ಫಲಾನುಭವಿಗಳು ಗ್ರಾಪಂನಲ್ಲಿ ನಡೆಯುವ ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಪಾಲ್ಗೊಳ್ಳುವ ಮೂಲಕ ತಮ್ಮ ಬೇಡಿಕೆಗಳನ್ನು ಸಲ್ಲಿಸಬಹುದಾಗಿದೆ. ಫಲಾನುಭವಿಗಳು ಇದರ ಸೌಲಭ್ಯಗಳನ್ನು ಪಡೆದುಕೊಳ್ಳುವಂತೆ ತಿಳಿಸಿದರು.


ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಶ್ರುತಿ, ಸದಸ್ಯರಾದ ಮಹೇಶ್, ಮಹದೇವ, ರವಿಕುಮಾರ್, ಗೌರಮ್ಮ, ಎನ್‌ಆರ್‌ಎಲ್‌ಎಂ ತಾಲೂಕು ವ್ಯವಸ್ಥಾಪಕಿ ಮಂಜುಳ, ಔಟ್‌ರೀಚ್ ಸಂಸ್ಥೆ ತರಬೇತಿ ಸಂಯೋಜಕ ಜಿ.ಎಸ್.ಜಗದೀಶ್, ನರೇಗಾ ಐಇಸಿ ಸಂಯೋಜಕಿ ಪುಷ್ಪವತಿ, ಕ್ಷೇತ್ರ ಸಿಬ್ಬಂದಿಗಳಾದ ಮಹದೇವ, ಶಶಿಕುಮಾರ್, ಕಾರ್ತಿಕ್, ಕಾರ್ಯದರ್ಶಿ ಶಿವರಾಜ್, ಹಳೆಬೀಡು ಶಾಲಾ ಮುಖ್ಯ ಶಿಕ್ಷಕ ಗುರುಮೂರ್ತಿ, ದೈಹಿಕ ಶಿಕ್ಷಕ ರಿಯಾಜ್ ಪಾಷ, ಗೌರಮ್ಮ ಪಾಲ್ಗೊಂಡಿದ್ದರು.

ಕರ್ತಾಳು ಗ್ರಾಮದಲ್ಲಿ ಆದಿಶಕ್ತಿ ಗೌರಮ್ಮ ವಿಸರ್ಜನೆ



ಪಿರಿಯಾಪಟ್ಟಣ, ಕೆ.ಆರ್.ನಗರ ತಾಲೂಕು ಗಡಿಭಾಗದಲ್ಲಿರುವ ಕರ್ತಾಳು ಗ್ರಾಮದಲ್ಲಿ ಆದಿಶಕ್ತಿ ಗೌರಮ್ಮ ವಿಸರ್ಜನಾ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಶಾಸಕ ಡಿ.ರವಿಶಂಕರ್, ಅವರ ಪತ್ನಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ನಿವೃತ್ತ ಶಿಕ್ಷಕ ಬಸಪ್ಪ, ಗ್ರಾಪಂ ಮಾಜಿ ಸದಸ್ಯ ಪರಮೇಶ್, ಜೈ ಶಂಕರ್, ನಟರಾಜ್, ಮಹೇಶ್, ಅಶೋಕ್, ಚಂದ್ರಶೇಖರ್ ಸೇರಿದಂತೆ ಇನ್ನಿತರರಿದ್ದರು.

ಗೌರಿ, ಗಣೇಶ ಮೂರ್ತಿಗಳ ವಿಸರ್ಜನೆ



ಹೆಚ್.ಡಿ.ಕೋಟೆ ತಾಲೂಕಿನ ಪುರ ಗ್ರಾಮದ ಬಸವೇಶ್ವರ ಹಾಗೂ ಮಾರಿಗುಡಿ ವೃತ್ತಗಳಲ್ಲಿ ಪ್ರತಿಷ್ಠಾಪಿಸಿದ್ದ ಶ್ರೀಸ್ವರ್ಣ ಗೌರಿ ಹಾಗೂ ಗಣೇಶ ಮೂರ್ತಿಯನ್ನು ಹೂವಿನ ಪಲ್ಲಕ್ಕಿ ಉತ್ಸವದೊಂದಿಗೆ ಮೆರವಣಿಗೆ ಮಾಡಿ ಹೊಮ್ಮರಗಳ್ಳಿಯ ಕಬಿನಿ ನದಿಯಲ್ಲಿ ವಿಸರ್ಜಿಸಲಾಯಿತು.

ಕಂದಕಕ್ಕೆ ಬಿದ್ದು ಸಲಗ ಸಾವು

ಕಂದಕಕ್ಕೆ ಬಿದ್ದು ಆನೆ ಸಾವಿಗೀಡಾಗಿರುವುದು.



ನಂಜನಗೂಡು/ಮಲ್ಕುಂಡಿ, ಅ.3– ಆಹಾರ ಅರಸಿ ಬಂಡೀಪುರ ರಾಷ್ಟ್ರೀಯ ಉದ್ಯಾನವನಕ್ಕೆ ಸೇರಿದ ಓಂಕಾರ್ ಅರಣ್ಯ ಪ್ರದೇಶದಿಂದ ಹೊರ ಬಂದಿದ್ದ ಸಲಗ ಅರಣ್ಯದಂಚಿನ ಕಂದಕಕ್ಕೆ ಬಿದ್ದು ಸಾವನ್ನಪ್ಪಿರುವ ಘಟನೆ ತಾಲೂಕಿನ ಕೆಲ್ಲೂಪುರ ಬಳಿ ನಡೆದಿದೆ.

ತಾಲೂಕಿನ ಕೆಲ್ಲುಪುರ ಗ್ರಾಮದ ಹೊರವಲಯದಲ್ಲಿ ಕಾಡುಪ್ರಾಣಿಗಳ ಉಪಟಳ ನಿಯಂತ್ರಿಸಲು ಅರಣ್ಯ ಇಲಾಖೆ ನಿರ್ಮಿಸಿರುವ ಬೃಹತ್ ಕಂದಕಕ್ಕೆ ಗುರುವಾರ ಬೆಳಗ್ಗೆ ಆನೆಯೊಂದು ಉರುಳಿ ಬಿದ್ದು ಹೊರ ಬರಲಾರದೆ ಪರದಾಡುತ್ತಿರುವುದನ್ನು ಸ್ಥಳೀಯರು ಗಮನಿಸಿ ಓಂಕಾರ್ ಅರಣ್ಯ ಪ್ರದೇಶದ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಆದರೆ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಆಗಮಿಸುವ ವೇಳೆಗೆ ತೀವ್ರ ನಿತ್ರಾಣಗೊಂಡಿದ್ದ ಆನೆ ಸಾವನ್ನಪ್ಪಿದೆ ಎನ್ನಲಾಗಿದೆ.

ಈ ವೇಳೆ ಅರಣ್ಯ ಇಲಾಖೆ ವೈದ್ಯಾಧಿಕಾರಿಗಳ ತಂಡ ಆನೆ ಕಳೇಬರವನ್ನು ಮರಣೋತ್ತರ ಪರೀಕ್ಷೆಗೊಳಪಡಿಸಿದ ಬಳಿಕ ಅಂತ್ಯಸಂಸ್ಕಾರ ನಡೆಸಲಾಯಿತು. ಆನೆಗೆ ಅಂದಾಜು 40 ವರ್ಷವಾಗಿದ್ದು, ಮರಣೋತ್ತರ ಪರೀಕ್ಷೆ ವರದಿ ಲಭ್ಯವಾದ ಬಳಿಕ ಆನೆ ಸಾವಿನ ನಿಖರ ಕಾರಣ ತಿಳಿದು ಬರಲಿದ್ದು, ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ಈ ವೇಳೆ ಎಸಿಎಫ್ ಪ್ರಭಾಕರ್, ಆರ್‌ಎಫ್‌ಓ ನಿತಿನ್ ಕುಮಾರ್ ಸೇರಿದಂತೆ ಓಂಕಾರ್ ಅರಣ್ಯ ವ್ಯಾಪ್ತಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ನಾಳೆಯಿಂದ ಕೋಟೆ ಅರ್ಜುನ ಕಪ್ ಕ್ರಿಕೆಟ್ ಪಂದ್ಯಾವಳಿ



ಪಂದ್ಯಾವಳಿ ಭಾಗವಹಿಸುವ ಆಟಗಾರರು

ಹೆಚ್.ಡಿ.ಕೋಟೆ, ಅ.3– ಅಂಬಾರಿ ಆನೆ ಅರ್ಜುನನ ಸ್ಮರಣಾರ್ಥ ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಅ.5 ರಿಂದ 7ರವರೆಗೆ ಕೋಟೆ ಅರ್ಜುನ ಕಪ್ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಶಾಸಕ ಅನಿಲ್ ತಿಳಿಸಿದರು.

ಪಂದ್ಯಾವಳಿ ಸಿದ್ಧತೆ ಪರಿಶೀಲಿಸಿ ಮಾತನಾಡಿದ ಅವರು, ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ 9 ಬಾರಿ ಅಂಬಾರಿ ಹೊತ್ತಿದ್ದ ತಾಲೂಕಿನ ನಾಗರಹೊಳೆ ಅಭಯಾರಣ್ಯದ ಬಳ್ಳೆ ಆನೆ ಶಿಬಿರದಲ್ಲಿದ್ದ ಅರ್ಜುನ ಆನೆ ಸಾವನ್ನಪ್ಪಿದ್ದು, ಇದರ ಸ್ಮರಣಾರ್ಥ 'ಕೋಟೆ ಅರ್ಜುನ ಕ್ರಿಕೆಟ್ ಕಪ್ ಪಂದ್ಯಾವಳಿ'ಯನ್ನು ಆಯೋಜಿಸಲಾಗಿದೆ ಎಂದರು.

ಪಂದ್ಯಾವಳಿಯಲ್ಲಿ ರಾಜಕಾರಣಿಗಳು, ಎಲ್ಲಾ ಇಲಾಖೆ ಅಧಿಕಾರಿಗಳು, ಪತ್ರಕರ್ತರು, ಛಾಯಾಗ್ರಾಹಕರು, ವಕೀಲರು ಸೇರಿದಂತೆ ಇನ್ನಿತರ ಕ್ಷೇತ್ರದ ಗಣ್ಯರು ಭಾಗವಹಿಸಲಿದ್ದು, ಅರ್ಜುನ ಕಪ್ ಪಂದ್ಯಾವಳಿಯನ್ನು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಶಾಸಕ ದರ್ಶನ್ ಉದ್ಘಾಟಿಸಲಿದ್ದಾರೆ. ಈ ವೇಳೆ ಚಿತ್ರರಂಗದ ಹಲವು ಗಣ್ಯರು ಹಾಜರಿದ್ದು, ಕಾರ್ಯಕ್ರಮಕ್ಕೆ ಮೆರಗು ನೀಡಲಿದ್ದಾರೆ. ಆದ್ದರಿಂದ ತಾಲೂಕಿನ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕ್ರಿಕೆಟ್ ಪಂದ್ಯಾವಳಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಜಯ ಕರ್ನಾಟಕ ರಾಜ್ಯ ಉಪಾಧ್ಯಕ್ಷ ಸತೀಶ್ ಗೌಡ ಮಾತನಾಡಿ, ಮೈಸೂರು ದಸರಾ ಮಹೋತ್ಸವದಲ್ಲಿ ಅಂಬಾರಿ ಹೊತ್ತ ಅರ್ಜುನ ಆನೆ ಸಾವನ್ನಪ್ಪಿರುವುದು ನಿಜಕ್ಕೂ ನೋವಿನ ವಿಚಾರವಾಗಿದೆ. ಈ ಆನೆ ತಾಲೂಕಿನ ನಮ್ಮ ಕಾಕನಕೋಟೆ ಬಳ್ಳೆ ಶಿಬಿರದಲ್ಲಿತ್ತು ಎಂಬುದೆ ಹೆಮ್ಮೆಯ ವಿಷಯ. ಈ ಆನೆ ಸ್ಮರಣಾರ್ಥ ಕೋಟೆ ಅರ್ಜುನ ಕಪ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಬೇಕು ಎಂಬ ನಿಟ್ಟಿನಲ್ಲಿ ಶಾಸಕ ಅನಿಲ್ ಪಂದ್ಯಾವಳಿಯ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡಿದ್ದು, ಅವರ ನೇತೃತ್ವದಲ್ಲಿ ಕ್ರಿಕೆಟ್ ಪಂದ್ಯಾವಳಿ ಯಶಸ್ವಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

> “ಅಂಬಾರಿ ಆನೆ ಅರ್ಜುನನ ಸ್ಮರಣಾರ್ಥ ಶಾಸಕ ಅನಿಲ್ ಕೋಟೆ ಅರ್ಜುನ ಕಪ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿರುವುದು ಶ್ಲಾಘನೀಯ. ತಾಲೂಕಿನಲ್ಲಿ ಇದೇ ಪ್ರಥಮ ಬಾರಿಗೆ ಎಲ್ಲಾ ಕ್ಷೇತ್ರದವರನ್ನು ಒಗ್ಗೂಡಿಸಿ ಪಂದ್ಯಾವಳಿ ಆಯೋಜಿಸಲಾಗಿದೆ. ಇದರಿಂದ ಎಲ್ಲರ ನಡುವೆ ಭಾಂದವ್ಯ ಬೆಳೆದು ಸಮನ್ವಯ ಮೂಡಲಿದೆ. ಈ ಪಂದ್ಯಾವಳಿಯಲ್ಲಿ ಶಾಸಕರು, ಎಲ್ಲಾ ಯುವಕರು, ಎಲ್ಲಾ ವರ್ಗದ ಅಧಿಕಾರಿಗಳು, ಪತ್ರಕರ್ತರು, ಛಾಯಾಗ್ರಹಕರು ಪಂದ್ಯಾವಳಿಯಲ್ಲಿ ಭಾಗವಹಿಸುತ್ತಿರುವುದು ವಿಶೇಷವಾಗಿದೆ.
>
> \-ಶ್ರೀನಿವಾಸ್, ತಹಸೀಲ್ದಾರ್.

ಪುರಸಭಾ ಸದಸ್ಯ ಮಧು ಕುಮಾರ್ ಮಾತನಾಡಿ, ಕೋಟೆ ಅರ್ಜುನ ಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಗಳಿಸುವ ತಂಡ 1 ಲಕ್ಷ ರೂ. ಮತ್ತು ಟ್ರೋಫಿ, ದ್ವಿತೀಯ ಬಹುಮಾನ 50 ಸಾವಿರ ರೂ. ಮತ್ತು ಟ್ರೋಫಿ ನೀಡಲಾಗುತ್ತದೆ ಎಂದರು.

ನಿಧನ



ಸುಶೀಲ

ಕೆ.ಆರ್.ನಗರ, ಅ.3– ಪಟ್ಟಣದ ಗರುಡಗಂಭ ಬಡಾವಣೆ ನಿವಾಸಿ ಸುಶೀಲ(51) ಬುಧವಾರ ರಾತ್ರಿ ನಿಧನರಾದರು. ಮೃತರು ತಂದೆ ತಾಲೂಕು ಸರ್ವೋದಯ ಪಕ್ಷದ ಅಧ್ಯಕ್ಷ ಗರುಡಗಂಭದಸ್ವಾಮಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ಗುರುವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.





ದಸರಾ ದೀಪಾಲಂಕಾರಕ್ಕೆ ಡಿಸಿಎಂ ಡಿಕೆಶಿ ಚಾಲನೆ

ಜಗಮಗಿಸುತ್ತಿದೆ ವಿದ್ಯುತ್ ದೀಪಗಳಿಂದ ಮೈಸೂರು



ದಸರಾ ದೀಪಾಲಂಕಾರವನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು.

ಮೈಸೂರು, ಅ.3(ಎಸ್‌ಪಿಎನ್)– ಸಾಂಸ್ಕೃತಿಕ ನಗರಿ ಮೈಸೂರು, ದಸರಾ ಮಹೋತ್ಸವದ ಅಂಗವಾಗಿ ದೀಪಾಲಂಕಾರಗಳಿಂದ ಜಗಮಗಿಸುತ್ತಿದೆ. ಎಲ್ಲೆಲ್ಲೂ ಬೆಳಕಿನ ಚಿತ್ತಾರ ಮೂಡಿಸಿ ಎಲ್ಲರನ್ನೂ ಆಕರ್ಷಿಸುತ್ತಿದೆ. ಈ ವಿದ್ಯುತ್ ದೀಪಾಲಂಕಾರಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗುರುವಾರ ಚಾಲನೆ ನೀಡಿದರು.

ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಹಸಿರು ಚಪ್ಪರದಡಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ನಿಯಮಿತ (ಸೆಸ್ಕ್)ವತಿಯಿಂದ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ದೀಪಾಲಂಕಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸೆಸ್ಕ್‌ನಿಂದ 126.11 ಕಿಮೀ ದೀಪಾಲಂಕಾರ ಮಾಡಲಾಗಿದ್ದು, ಈ ಹಿಂದಿನ ವರ್ಷಗಳಿಗಿಂತ ಈ ಬಾರಿ ವಿದ್ಯುತ್ ದೀಪಾಲಂಕಾರ ಹೆಚ್ಚು ಆಕರ್ಷಕವಾಗಿದೆ. ಪ್ರವಾಸಿಗರನ್ನು ಸೆಳೆಯಲಿದೆ ಎಂದರು. ಅಲ್ಲದೆ, ತುರ್ತು ಸಂದರ್ಭದಲ್ಲಿ ಜೀವದ ಹಂಗು ತೊರೆದು 'ಪವರ್ ಮ್ಯಾನ್'ಗಳ ಕಾರ್ಯವೈಖರಿ ಬಿಂಬಿಸುವ ವಿದ್ಯುತ್ ರಥಕ್ಕೂ ಚಾಲನೆ ನೀಡಲಾಗಿದ್ದು, ಈ ರಥ ನಗರದ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶನಗೊಂಡು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಿದೆ ಎಂದರು.

ಮೈಸೂರು ಅರಮನೆ ಸುತ್ತಲಿನ ರಸ್ತೆಗಳು ಸೇರಿದಂತೆ ಸಯ್ಯಾಜಿರಾವ್ ರಸ್ತೆ, ಬಿಎನ್ ರಸ್ತೆ, ಇರ್ವಿನ್ ರಸ್ತೆ, ಆಲ್ಬರ್ಟ್ ವಿಕ್ಟರ್ ರಸ್ತೆ, ಜೆಎಲ್‌ಬಿ ರಸ್ತೆ, ಚಾಮರಾಜ ಜೋಡಿ ರಸ್ತೆ, ಹೊರವಲಯದಲ್ಲಿನ ಪ್ರಮುಖ ಹೆದ್ದಾರಿಗಳಿಗೂ ದೀಪಾಲಂಕಾರ ಮಾಡಲಾಗಿದೆ. ಜತೆಗೆ ನಗರ ವ್ಯಾಪ್ತಿಯಲ್ಲಿರುವ ಪ್ರಮುಖ ವೃತ್ತಗಳಿಗೂ ಆಕರ್ಷಕ ದೀಪಾಲಂಕಾರ ಮಾಡಲಾಗಿದೆ. ಇದಲ್ಲದೆ ನಗರದ ದೊಡ್ಡಕೆರೆ ಮೈದಾನ, ಕೆ.ಆರ್. ವೃತ್ತ, ಚಾಮರಾಜ ವೃತ್ತ, ಜಯಚಾಮರಾಜ ವೃತ್ತ(ಹಾರ್ಡಿಂಜ್), ರಾಮಸ್ವಾಮಿ ವೃತ್ತ, ರೈಲ್ವೆ ನಿಲ್ದಾಣ ಸಮೀಪ, ಗನ್ ಹೌಸ್, ಎಲ್‌ಐಸಿ ವೃತ್ತ ಸೇರಿದಂತೆ ವಿವಿಧೆಡೆ ವಿದ್ಯುತ್ ದೀಪಗಳಿಂದಲೇ 65ಕ್ಕೂ ಹೆಚ್ಚು ಕಲಾಕೃತಿಗಳನ್ನು ಅಳವಡಿಸಲಾಗಿದ್ದು, ಇವು ಜನರ ಆಕರ್ಷಣೆಯ ಕೇಂದ್ರಬಿಂದುವಾಗಲಿದೆ ಎಂದರು.

> **"ಪ್ರಸ್ತುತ ದಿನಗಳಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ (ಸೆಸ್ಕ್) ಅಧಿಕಾರಿಗಳ ಕಾರ್ಯವೈಖರಿ ಉತ್ತಮವಾಗಿದ್ದು, ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಗೃಹಜ್ಯೋತಿ ಕಾರ್ಯಕ್ರಮ ಯಶಸ್ವಿಯಾಗಲು ಅಧಿಕಾರಿಗಳ ಶ್ರಮವಿದೆ. ಇದರ ಜೊತೆಗೆ ನಿಗಮದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳು ಉತ್ಸಾಹದಿಂದ ಕೆಲಸ ಮಾಡುತ್ತಿದ್ದು, ಇದರಿಂದ ಒಳ್ಳೆಯ ಹೆಸರು ಬರಲು ಕಾರಣವಾಗಿದ್ದಾರೆ. ಈ ಬಾರಿ ದೀಪಾಲಂಕಾರ ಆಕರ್ಷಕವಾಗಿದ್ದು, ಪ್ರವಾಸಿಗರನ್ನು ಮೈಸೂರಿಗೆ ಕೈಬೀಸಿ ಕರೆಯುತ್ತಿದೆ.**
> –ಡಿ.ಕೆ. ಶಿವಕುಮಾರ್, ಡಿಸಿಎಂ.

ಮೈಸೂರಿನ 101 ವೃತ್ತಗಳು, 61 ಪ್ರತಿಕೃತಿಗಳು ಹಾಗೂ 24ಕ್ಕೂ ಹೆಚ್ಚು ಇತರೆ ದೀಪಾಲಂಕಾರ ಮಾಡಲಾಗಿದೆ. ನಿಗಮದಿಂದ 50 ಇಂಜಿನಿಯರ್‌ಗಳು, 200 ಸಿಬ್ಬಂದಿಗಳು(ಪವರ್‌ಮೆನ್), 80 ವಿದ್ಯುತ್ ಗುತ್ತಿಗೆದಾರರು ಹಾಗೂ 650 ಮಂದಿ ಕುಶಲಕರ್ಮಿಗಳು ಕೆಲಸ ಮಾಡಿದ್ದಾರೆ ಎಂದು ವಿವರಿಸಿದರು.

21 ದಿನಗಳ ಆಕರ್ಷಣೆ: ದಸರಾ ಹಿನ್ನೆಲೆಯಲ್ಲಿ ವಿದ್ಯುತ್ ದೀಪಾಲಂಕಾರ ಈ ಬಾರಿ ಒಟ್ಟು 21 ದಿನಗಳ ಕಾಲ ಇರಲಿದೆ. ದಸರಾ ದೀಪಾಲಂಕಾರಕ್ಕೆ 6.50 ಕೋಟಿ ರೂ. ವೆಚ್ಚವಾಗುತ್ತಿದ್ದು, 2,881 ಕಿ.ವ್ಯಾ ಅಂದಾಜು ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದು 2,42,012 ಯೂನಿಟ್‌ಗಳನ್ನು ವಿದ್ಯುತ್ ದೀಪಾಲಂಕಾರಕ್ಕೆ ಬಳಕೆ ಮಾಡಲಾಗುತ್ತಿದೆ ಎಂದರು.

ಡ್ರೋನ್ ಶೋ ಮೆರುಗು: ದಸರಾ ದೀಪಾಲಂಕಾರದಲ್ಲಿ ಮೊದಲ ಬಾರಿಗೆ ಡ್ರೋನ್ ಪ್ರದರ್ಶನ ಏರ್ಪಡಿಸಲಾಗಿತ್ತು. ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಿರುವ ಸುಮಾರು 1,500 ಡ್ರೋನ್‌ಗಳನ್ನು ಬಳಸಿ ಆಕಾಶದಲ್ಲಿ ಅದ್ಭುತ ವಿನ್ಯಾಸಗಳನ್ನು ಮೂಡಿಸಲಾಗುತ್ತಿದೆ.

ಉಚಿತ ಪ್ರವೇಶ: ಅಂತೆಯೇ ಡ್ರೋನ್ ಶೋ ಪ್ರದರ್ಶನ ಅ.6, 7ರಂದು ಹಾಗೂ ಅ.11, 12ರಂದು ರಾತ್ರಿ 8 ಗಂಟೆಯಿಂದ 8:15ರವರೆಗೆ ನಡೆಯಲಿದ್ದು, ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ವೀಕ್ಷಿಸಲು ವ್ಯವಸ್ಥೆ ಮಾಡಲಾಗಿದೆ. ಅ.6 ಮತ್ತು 7ರಂದು ಡ್ರೋನ್ ಶೋ ವೀಕ್ಷಿಸಲು ಉಚಿತ ಪ್ರವೇಶವಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದು ಕೊಳ್ಳುವಂತೆ ಮನವಿ ಮಾಡಿದರು.

ದೀಪಾಲಂಕಾರ ಕಣ್ತುಂಬಿಕೊಳ್ಳಲು ರಾಜ್ಯದ ವಿವಿಧೆಡೆಯಿಂದ ಪ್ರವಾಸಿಗರು ಲಗ್ಗೆ ಇಟ್ಟಿದ್ದಾರೆ. ಈ ವೇಳೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಸೆಸ್ಕ್ ನಿಗಮದ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ, ತಾಂತ್ರಿಕ ವಿಭಾಗದ ನಿರ್ದೇಶಕ ಮುನಿಗೋಪಾಲ್ ರಾಜು, ಇತರೆ ಅಧಿಕಾರಿಗಳು ಭಾಗವಹಿಸಿದ್ದರು.



ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿ ಆಕರ್ಷಣೀಯ ಹಸಿರು ಚಪ್ಪರ

ಈ ಬಾರಿ ವಿದ್ಯುತ್ ದೀಪಾಲಂಕಾರದ ವಿಶೇಷತೆಗಳು

ದೊಡ್ಡಕೆರೆ ಮೈದಾನದಲ್ಲಿ ಪ್ರಜಾಪ್ರಭುತ್ವದ ಮುನ್ನುಡಿ (ಭಗವಾನ್ ಬುದ್ಧ), ಅನುಭವ ಮಂಟಪ (ಬಸವಣ್ಣ), ದಂಡಿಯಾತ್ರೆ(ಮಹಾತ್ಮ ಗಾಂಧಿ), ಸಂಸತ್ ಭವನ ಹಾಗೂ ಡಾ.ಬಿ.ಆರ್.ಅಂಬೇಡ್ಕರ್, ಕರ್ನಾಟಕದ–50ರ ಸಂಭ್ರಮ, ವಿಧಾನಸೌಧ, ಜೈ ಜವಾನ್, ಜೈಕಿಸಾನ್, ಜೈವಿಜ್ಞಾನ್ ಮಾದರಿಯ ಪ್ರತಿಕೃತಿಗಳನ್ನು ಅಳವಡಿಸಲಾಗಿದೆ.

ಹಾರ್ಡಿಂಜ್ ವೃತ್ತದಲ್ಲಿ ವಿಶೇಷವಾಗಿ ಚಲಿಸುತ್ತಿರುವ ಯಕ್ಷಗಾನದ ಕಲಾವಿದರ 3ಡಿ ಆಕೃತಿ, ಕೃಷ್ಣರಥ ಪ್ರತಿಕೃತಿಯನ್ನು ವಿಶೇಷವಾಗಿ ನಿರ್ಮಿಸಲಾಗಿದೆ. ಬಸವೇಶ್ವರ ವೃತ್ತ ಹಾಗೂ ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ(ಜೆಎಸ್‌ಎಸ್ ಮಹಾವಿದ್ಯಾಪೀಠ)ದಲ್ಲಿ ಕನ್ನಡ ಸಾಹಿತ್ಯ ಲೋಕದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ದಸರಾ ಅಂಬಾರಿ(ಅಂಬಾರಿ ಹೊತ್ತು ಆನೆಯೊಂದಿಗೆ ಎರಡು ಆನೆಗಳು) ಪ್ರತಿಕೃತಿಗಳನ್ನು ನಿರ್ಮಿಸಲಾಗಿದೆ.

ಮಿಲೇನಿಯಂ ವೃತ್ತದಲ್ಲಿ ಕರ್ನಾಟಕ ಸರ್ಕಾರದ ಐದು ಭಾಗ್ಯಗಳು, ಮೈಸೂರು ಅರಮನೆ, ತಾಜ್‌ಮಹಲ್, ಕರ್ನಾಟಕ ಸಂಭ್ರಮ–50ರ ಕುರಿತು ಯುನೆಸ್ಕೋ ಪಟ್ಟಿಯಲ್ಲಿನ ಸ್ಮಾರಕಗಳು ಹಾಗೂ ರಾಜ್ಯ ಕಲಾ ಸಂಸ್ಕೃತಿಯ ವಿಶೇಷ ಆಕೃತಿಗಳು ಜನಾಕರ್ಷಣೆಯ ಕೇಂದ್ರಬಿಂದುವಾಗಿವೆ.

ಕೆ.ಆರ್ ವೃತ್ತದಲ್ಲಿ ಹಂಸದ ಆಕೃತಿಗಳು ಹಾಗೂ ಕರ್ನಾಟಕ ರಾಜ್ಯದ ಕಲಾ ಪ್ರಕಾರಗಳ ವಿಶೇಷ ಆಕೃತಿಗಳು (ಭರತನಾಟ್ಯ, ಡೊಳ್ಳುಕುಣಿತ, ಚಂಡೆ, ನಗಾರಿ, ಯಕ್ಷಗಾನ, ಪೂಜಾಕುಣಿತ) ಜನರನ್ನು ಆಕರ್ಷಿಸುತ್ತಿವೆ.

ಏಕಲವ್ಯ ವೃತ್ತದಲ್ಲಿ ಕನ್ನಡ ಚಿತ್ರರಂಗದ ಖ್ಯಾತ ಕಲಾವಿದರಾದ ಡಾ.ರಾಜ್‌ಕುಮಾರ್, ಡಾ.ವಿಷ್ಣುವರ್ಧನ್, ಡಾ.ಅಂಬರೀಶ್, ಶಂಕರ್‌ನಾಗ್, ಡಾ.ಪುನೀತ್ ರಾಜ್‌ಕುಮಾರ್, ಮಿನುಗುತಾರೆ ಕಲ್ಪನಾರವರ ಪ್ರತಿಕೃತಿಗಳನ್ನು ನಿರ್ಮಿಸಲಾಗಿದೆ.

ಕುರುಬಾರಹಳ್ಳಿ ವೃತ್ತದಲ್ಲಿ ನಾಡದೇವತೆ ತಾಯಿ ಚಾಮುಂಡೇಶ್ವರಿಯ (ವಿವಿಧ ಆಯುಧಗಳೊಂದಿಗೆ) ಪ್ರತಿಕೃತಿಗಳನ್ನು ವಿಶೇಷವಾಗಿ ನಿರ್ಮಿಸಲಾಗಿದೆ.

ಕೆ.ಆರ್ ವೃತ್ತದಿಂದ ಡಿ.ದೇವರಾಜ ಅರಸು ರಸ್ತೆ, ಕಾಫಿ ಡೇ ವೃತ್ತ ಮತ್ತು ಹಳೆ ಜಿಲ್ಲಾಧಿಕಾರಿಗಳ ಕಚೇರಿ ರಸ್ತೆ ಹಾಗೂ ಹೊರವರ್ತುಲ ರಸ್ತೆಯ ಬಳಿ ಇರುವ ಹಿನಕಲ್ ಮೇಲ್ಸೇತುವೆಗೆ ಎಲ್.ಇ.ಡಿ ಬಲ್ಬ್‌ಗಳ ವಿಶೇಷ ವಿನ್ಯಾಸಗಳೊಂದಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ.

90 ದಿನಗಳ ದಸರಾ ವಸ್ತುಪ್ರದರ್ಶನ ಉದ್ಘಾಟನೆ

ಹಳೆ ಅರಮನೆ ವೀಕ್ಷಿಸಿ ಪುಳಕಿತರಾದ ಮುಖ್ಯಮಂತ್ರಿ

ಮೈಸೂರು, ಅ.3(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಹಾಗೂ 90 ದಿನಗಳ ಕಾಲ ಪ್ರವಾಸಿಗರನ್ನು ಸೆಳೆಯುವ ದಸರಾ ವಸ್ತುಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧ್ಯುಕ್ತ ಚಾಲನೆ ನೀಡಿದರು.

ವಸ್ತುಪ್ರದರ್ಶನ ಪ್ರಾಧಿಕಾರ ಮೈದಾನದ ಮುಖ್ಯದ್ವಾರದಲ್ಲಿ ಬೃಹತ್ ಪರದೆ ಸರಿಸಿ, ನಂದಿಧ್ವಜಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಇಡುಗಾಯಿ ಹೊಡೆದು ದೀಪ ಬೆಳಗಿಸುವ ಮೂಲಕ ದಸರಾ ವಸ್ತುಪ್ರದರ್ಶನಕ್ಕೆ ಚಾಲನೆ ನೀಡಿದರು. ಬಳಿಕ ಮೈಸೂರು ಸಂಸ್ಥಾನದ ಹಳೆ ಅರಮನೆ ಮಾದರಿಯ ಮಳಿಗೆ ಹಾಗೂ ಪೊಲೀಸ್ ಇಲಾಖೆಯ ಮಳಿಗೆಯನ್ನು ಉದ್ಘಾಟಿಸಿದ ಮುಖ್ಯಮಂತ್ರಿಗಳು, ಮೈಸೂರು ಸಂಸ್ಥಾನದ ಹಳೆ ಅರಮನೆಯನ್ನು ಕಂಡು ಹರ್ಷ ವ್ಯಕ್ತಪಡಿಸಿದರು. ಕೆಲಕಾಲ ಸುತ್ತಾಡಿ ಹಳೆ ಮೈಸೂರು ಅರಮನೆಯ ವೈಭವವನ್ನು ಕಣ್ತುಂಬಿಕೊಂಡರಲ್ಲದೆ ಅರಮನೆಯೊಳಗೆ ಏರ್ಪಡಿಸಿದ್ದ ಸಂಗೀತ ಕಾರ್ಯಕ್ರಮ, ವ್ಯಾಪಾರ ಮಳಿಗೆಗಳನ್ನು ವೀಕ್ಷಿಸಿದರು. ಬಳಿಕ ಮಾತನಾಡಿದ ಅವರು, ಪ್ರತಿ ಬಾರಿಯಂತೆ ಈ ಬಾರಿಯೂ ಕೂಡ ವಿವಿಧ ಭಾಗಗಳಿಂದ ಬಂದು ವಸ್ತು ಪ್ರದರ್ಶನ ವಿಭಾಗದಲ್ಲಿ ವಿವಿಧ ಕಲಾಕೃತಿಗಳು ಹಾಗೂ ಸರ್ಕಾರದ ವಿವಿಧ ಯೋಜನೆಗಳ ಕುರಿತು ಅನಾವರಣಗೊಳಿಸಲಾಗಿದೆ. ಸಾರ್ವಜನಿಕರು ಬಂದು ಪ್ರತಿಯೊಂದನ್ನು ವೀಕ್ಷಿಸಿ, ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

ವಿಶೇಷವಾಗಿ ಉದ್ಘಾಟನೆ: ಪ್ರತೀ ವರ್ಷ ವೇದಿಕೆ ಕಾರ್ಯಕ್ರಮದಲ್ಲಿ ದೀಪ ಬೆಳಗಿಸುವ ಮೂಲಕ ದಸರಾ ವಸ್ತು ಪ್ರದರ್ಶನ ಉದ್ಘಾಟನೆ ಮಾಡಲಾಗುತ್ತಿತ್ತು. ಆದರೆ, ಈ ಬಾರಿ ವಿಶೇಷವಾಗಿ ಬೃಹತ್ ಪರದೆ ಸರಿಸಿ, ನಂದಿ ಧ್ವಜಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಉದ್ಘಾಟನೆ ನೆರವೇರಿಸಲಾಯಿತು. ಅಲ್ಲದೆ ಇದೇ ವೇಳೆ ಸರ್ಕಸ್ ಕಲಾವಿದರು ಸಾಹಸ ಪ್ರದರ್ಶನ ನೀಡುತ್ತಿದ್ದರೆ, ನಗಾರಿ ಸದ್ದು ಜೋರಾಗಿತ್ತು.

ಹಬ್ಬದ ವಾತಾವರಣ: ವಸ್ತುಪ್ರದರ್ಶನದಲ್ಲಿ ಮೊದಲ ದಿನವೇ ಜನಜಂಗುಳಿ ತುಂಬಿತ್ತು. ವಿಶೇಷ ವಿದ್ಯುತ್ ದೀಪಾಲಂಕಾರ, ಸೆಲ್ಫಿ ಸ್ಪಾಟ್‌ಗಳತ್ತ ಧಾವಿಸಿ ಬಂದ ಪ್ರವಾಸಿಗರು ಫೋಟೋ ಕ್ಲಿಕ್ಕಿಸಿಕೊಂಡು ತಿಂಡಿ ತಿನಿಸು ಸವಿಯಲು ಮುಗಿಬಿದ್ದರು. ವಸ್ತುಪ್ರದರ್ಶನದ ಆವರಣದಲ್ಲಿ ಹಬ್ಬದ ವಾತಾವರಣ, ಸಡಗರ ಸಂಭ್ರಮ ಮನೆ ಮಾಡಿತ್ತು.

ವಿವಿಧ ಮಳಿಗೆಗಳ ಉದ್ಘಾಟನೆ: ನಂತರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಲಿಡ್ಕರ್ ಸೇರಿದಂತೆ ವಿವಿಧ ಇಲಾಖೆಗಳ ಮಳಿಗೆಗಳನ್ನು ಉದ್ಘಾಟಿಸಲಾಯಿತು. ಪ್ರವಾಸೋದ್ಯಮ ಇಲಾಖೆ ಸಚಿವ ಹೆಚ್.ಕೆ. ಪಾಟೀಲ್, ಸಮಾಜ ಕಲ್ಯಾಣ ಇಲಾಖೆ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ ಮಹದೇವಪ್ಪ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರಾದ ಕೆ ವೆಂಕಟೇಶ್, ಶಾಸಕರಾದ ಪುಟ್ಟರಂಗಶೆಟ್ಟಿ, ಶ್ರೀವತ್ಸ, ಲಿಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜು, ಎಂಡಿ ಕೆ.ಎಂ.ವಸುಂಧರ, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಸವಿತಾ, ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.



ದಸರಾ ವಸ್ತುಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.



ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ) ದೇವರ (ಕ)	1+3 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರಾದೇವಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ದೇವರ (ತೆ)	4 ಪ್ರದರ್ಶನಗಳು
ರಾಜಕಮಲ್	
ಜೋಕರ್ ಪೋಲಿಕಾ ಡ್ಯೂಕ್ಸ್ (ಇಂ)	4 ಪ್ರದರ್ಶನಗಳು
ಸಂಗಂ	
ಭೈರಾದೇವಿ (ಕ)	4 ಪ್ರದರ್ಶನಗಳು
ಲಿಡೋ	
ಉಪೇಂದ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	2 ಪ್ರದರ್ಶನಗಳು
ರಾಜಯೋಗ (ಕ)	2 ಪ್ರದರ್ಶನಗಳು

DRC CINEMAS ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಬೆ.10.05ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1ಕ್ಕೆ.
ಸ್ಕ್ರೀನ್ 2	ದೇವರ 1 (ತೆ): ರಾ.10ಕ್ಕೆ.
ಸ್ಕ್ರೀನ್ 3	ಸ್ತ್ರೀ 2 (ಹಿಂ): ಬೆ.10.05ಕ್ಕೆ, ದೇವರ 1 (ತೆ): ಮ.1ಕ್ಕೆ, ಅನ್ನ (ಕ): ಸಂ.4.30ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7ಕ್ಕೆ, ಕಳಿಂಗ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ಪುಷ್ಪಕ ವಿಮಾನಂ (ಮ): ಬೆ.10.20ಕ್ಕೆ, ಭೈರಾದೇವಿ (ಕ): ಮ.1.05ಕ್ಕೆ, ದೇವರ 1 (ತೆ): ಮ.3.45ಕ್ಕೆ, ರಾ.7.05ಕ್ಕೆ, ತೆಕ್ಕು ವಡಕ್ಕು (ಮ): ರಾ.10.30ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

MVC ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.10ಕ್ಕೆ, ಸ್ವಾಗ್ (ತೆ): ಸಂ.4.10ಕ್ಕೆ, ತೆಕ್ಕು ವಡಕ್ಕು (ಮ): ರಾ.7.10ಕ್ಕೆ, ಗುಮಾಸ್ತಾನ್ (ಮ): ರಾ.9.40ಕ್ಕೆ.
ಸ್ಕ್ರೀನ್ 2	ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಮ.1.45ಕ್ಕೆ, ದೇವರ 1 (ತೆ): ಸಂ.4.40ಕ್ಕೆ, ರಾ.8ಕ್ಕೆ.
ಸ್ಕ್ರೀನ್ 3	ಭೈರಾದೇವಿ (ಕ): ಮ.1.40ಕ್ಕೆ, ಸಂ.4.15ಕ್ಕೆ, ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಸಂ.6.50ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 4	ದೇವರ 1 (ಕ): ಮ.1.30ಕ್ಕೆ, ದೇವರ 1 (ತೆ): ಸಂ.6.05ಕ್ಕೆ, ರಾ.9.20ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್

10ನೇ ದಿನ, ಶುಕ್ರವಾರ, 4–10–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಕೂರ್ಗ್ ಪ್ಲೇಟ್ ಡಿII–1200 ಮೀ. ರೇಟೆಡ್ 00 ರಿಂದ 25. ಮಧ್ಯಾಹ್ನ 2.00ಕ್ಕೆ
1. ಅಮೇಜಿಂಗ್ ಲಕ್ 2. ಬಂಡಲ್ ಕಂಡ್ ಕ್ವೀನ್ 3. ಎಫೆಸಮ್ ಡೌನ್

II. ಕೂರ್ಗ್ ಪ್ಲೇಟ್ ಡಿI–1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಎಮರಾಲ್ಡೋ 2. ಪೊಯಿನಿಕ್ಸ್ ಸರ್‌ಪ್ರೈಸ್ 3. ಡಾರ್ಕ್ ಚಾಕೋಲೇಟ್

III. ಜಸ್ಟಿಸ್ ಪಿ. ಮೇದಪ್ಪ ಮೆಮೋರಿಯಲ್ ಕಪ್ 3 ವರ್ಷ –1400 ಮೀ. (ಮೈಸೂರು ಬೇಸ್ಡ್ ಹಾರ್ಸ್). ಮಧ್ಯಾಹ್ನ 3.00ಕ್ಕೆ
1. ಆಬ್‌ಸಲ್ಯೂಟ್ ಕ್ಯಾಟರಿನಾ 2. ಸಫಿಯೆಂಟ್ 3. NRI ವಿಕ್ಟರಿ

IV. ಮೇಜರ್ ಸರ್‌ದಾರ್ L. ಮಹದೇವಯ್ಯ ಮೆಮೋರಿಯಲ್ ಟ್ರೋಫಿ –1200 ಮೀ. ರೇಟೆಡ್ 40 ರಿಂದ 45. ಮ.3.30ಕ್ಕೆ
1. ಹೈ ಸ್ಪೀಡ್ ಡ್ರೈವ್ 2. ಆರ್ಟ್ ಗ್ಯಾಲರಿ 3. ಇಲ್‌ವೋಲೊ

V. ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಮೈಸೂರ್ 2000 ಗಿನ್ನಿಸ್ (3 ವರ್ಷ). ಸಂ.4.00ಕ್ಕೆ
1. ಜಾನ್‌ವಿಕ್ 2. ಆಭೂಷಣ್ 3. ದಿ ಲೀಡರ್

VI. ನೈನಿತಾಲ್ ಪ್ಲೇಟ್ –1600 ಮೀ. ರೇಟೆಡ್ 40 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಸಂ.4.30ಕ್ಕೆ
1. ಔರ್ಲಿ 2. ಸ್ಕೈ ಸ್ಟ್ರಾಮ್ 3. ನ್ಯಾಚುರಲ್ ಲೈಟ್

VII. ಧೂಪಾಂಟ್ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಸಂ.5.00ಕ್ಕೆ
1. ರೆಡ್ ಹಿಲ್ಸ್ 2. ಡಾಲ್ ಹೌಸಿ 3. ಮಾರ್ಕ್ ಒನ್

ದಿನದ ಅತ್ಯುತ್ತಮ	ಹೈ ಸ್ಪೀಡ್ ಡ್ರೈವ್
ಡಬ್ಬಲ್	ಎಮರಾಲ್ಡೋ, ಜಾನ್‌ವಿಕ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಅರಮನೆ ಅಂಗಳದಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

ಖ್ಯಾತ ಶಹನಾಯ್ ವಾದಕ ಪಂಡಿತ್ ಬಸವರಾಜ ಭಜಂತ್ರಿಯವರಿಗೆ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಪ್ರದಾನ



ಅರಮನೆ ಆವರಣದ ವೇದಿಕೆಯಲ್ಲಿ ದಸರಾ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಿಧ್ಯುಕ್ತವಾಗಿ ಚಾಲನೆ ನೀಡಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಖ್ಯಾತ ಶಹನಾಯ್ ವಾದಕರಾದ ಪಂಡಿತ್ ಬಸವರಾಜ ಭಜಂತ್ರಿ ಅವರಿಗೆ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಪ್ರದಾನ ಮಾಡಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಶಿವರಾಜ ತಂಗಡಗಿ, ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಟಿ.ಎಸ್.ಶ್ರೀವತ್ಸ, ಡಿ.ರವಿಶಂಕರ್, ಎ.ಆರ್.ಕೃಷ್ಣಮೂರ್ತಿ, ರಮೇಶ್ ಬಾಬು ಬಂಡಿಸಿದ್ದೇಗೌಡ, ಡಾ.ಡಿ.ತಿಮ್ಮಯ್ಯ ಗೋವಿಂದರಾಜು ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಅ.3(ಎಸ್‌ಬಿಡಿ)– ವಿದ್ಯುತ್ ದೀಪಾಲಂಕೃತ ಅರಮನೆ ಆವರಣದ ಭವ್ಯ ವೇದಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದಸರಾ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಿದ್ಯುಕ್ತವಾಗಿ ಚಾಲನೆ ನೀಡಿ, ಖ್ಯಾತ ಶಹನಾಯ್ ವಾದಕರಾದ ಪಂಡಿತ್ ಬಸವರಾಜ ಭಜಂತ್ರಿ ಅವರಿಗೆ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಪ್ರದಾನ ಮಾಡಿದರು.

ಮುಖ್ಯಮಂತ್ರಿಗಳು ವೇದಿಕೆಯಲ್ಲಿ ದೀಪ ಬೆಳಗುವ ವೇಳೆಗೆ ಅರಮನೆ ವಿದ್ಯುತ್ ದೀಪಗಳು ಪ್ರಜ್ವಲಿಸಿದವು. ಬಳಿಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವೇದಿಕೆ ಬದಿಯಲ್ಲಿದ್ದ ಆರು ಅಡಿ ಉದ್ದದ ಸೈಕಲ್ ಬ್ರ್ಯಾಂಡ್ ಬೃಹತ್ ಅಗರಬತ್ತಿಯನ್ನು ಹೊತ್ತಿಸಿದರು. ನಂತರ ರಾಜ್ಯ ಸರ್ಕಾರದಿಂದ ಕೊಡಮಾಡುವ ಐದು ಲಕ್ಷ ರೂ. ಗೌರವಧನ ಒಳಗೊಂಡ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿಯನ್ನು ಹಾವೇರಿಯ ಪಂಡಿತ್ ಬಸವರಾಜ ಭಜಂತ್ರಿ ಅವರಿಗೆ ಪ್ರದಾನ ಮಾಡಿ, ಮೈಸೂರು ಪೇಟ ತೊಡಿಸಿ ಅವರನ್ನು ಅಭಿನಂದಿಸಲಾಯಿತು.

ಸರ್ಕಾರದ ಕರ್ತವ್ಯ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿ, ಮೈಸೂರು ಸಾಂಸ್ಕೃತಿಕ ನಗರ ಎಂಬ ಹಿರಿಮೆ ಪಡೆಯಲು ರಾಜಮನೆತನದವರು ಕಾರಣ. ಮಹಾರಾಜರ ಕಾಲದಿಂದಲೂ ಕಲೆ, ಸಂಗೀತ, ನೃತ್ಯ, ಸಾಹಿತ್ಯಕ್ಕೆ ಪ್ರೋತ್ಸಾಹ ಸಿಕ್ಕಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರೂ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು. ಆ ಸತ್ಕಾರ್ಯವನ್ನು ಸರ್ಕಾರವೂ ಮುಂದುವರೆಸಿಕೊಂಡು ಬಂದಿದೆ. ಕಲೆ, ಸಾಹಿತ್ಯ, ಸಂಗೀತ ಸಾಧಕರನ್ನು ಗುರುತಿಸಿ, ಗೌರವಿಸುವುದು ಸರ್ಕಾರದ ಕರ್ತವ್ಯ ಎಂದು ಹೇಳಿದರು.

ಇದು ಭಾಷಣ ಮಾಡುವ ವೇದಿಕೆಯಲ್ಲ. ಕಾರ್ಯಕ್ರಮ ತಡವಾಗಿದ್ದಕ್ಕೆ ಕ್ಷಮೆ ಕೇಳಲು ಬಯಸುತ್ತೇನೆ. ಅತ್ಯಂತ ಸಂತೋಷದಿಂದ ಈ ಕಾರ್ಯಕ್ರಮ ಉದ್ಘಾಟಿಸಿದ್ದೇನೆ. ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿಯನ್ನು ಪಂಡಿತ್ ಬಸವರಾಜ ಭಜಂತ್ರಿ ಅವರಿಗೆ ಸರ್ಕಾರದ ವತಿಯಿಂದ ಪ್ರದಾನ ಮಾಡಲಾಗಿದೆ. ಶಹನಾಯ್ ಸಂಗೀತದ ಮೂಲಕ ದೇಶ–ವಿದೇಶಗಳಲ್ಲಿ ಪ್ರಸಿದ್ಧರಾಗಿರುವ, ಸಾವಿರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿರುವ ಬಸವರಾಜ ಭಜಂತ್ರಿ ಅವರಿಗೆ ನೀಡಲಾಗಿದೆ. ಅವರು ಅರ್ಜಿ ಹಾಕಿಲ್ಲ, ಗುರುತಿಸಿ ನೀಡಿದರೆ ಸ್ವೀಕರಿಸುವೆ ಎಂದರು. ಹಾಗಾಗಿ ಇಂತಹ ಸಾಧಕರಿಗೆ ಪ್ರಶಸ್ತಿ ನೀಡಿದರೆ ಸರ್ಕಾರ ತನ್ನನ್ನು ತಾನೇ ಗೌರವಿಸಿಕೊಂಡಂತೆ ಎಂದರು.

ದಾಸರ ಪದ, ಕಗ್ಗ ನೆನೆದ ಡಿಕೆಶಿ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ರಾಜಕೀಯವನ್ನು ಬದಿಗೊತ್ತಿ ಕಲೆ–ಸಂಸ್ಕೃತಿ ಆಸ್ವಾದಿಸಿ, ಸಂತೋಷಪಡಬೇಕೆಂದು ಆಸೆಯಾಗುತ್ತಿದೆ. ಮೈಸೂರಿನಲ್ಲಿರುವವರು ತುಂಬಾ ಅದೃಷ್ಟವಂತರು. ನೀವು 10 ದಿನಗಳ ಕಾಲ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸವಿಯಬಹುದು. ಪುರಂದರ ದಾಸರು 'ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ, ಪದುಮನಾಭನ ಪಾದ ಭಜನೆ ಸುಖವಯ್ಯ...' ಎನ್ನುವಂತೆ ಇದು ನಿಮ್ಮೆಲ್ಲರ ಭಾಗ್ಯ. ಮಹಾರಾಜರ ಕಾಲದಿಂದ ನಡೆದುಕೊಂಡು ಬಂದ ಚಾಮುಂಡಿ ದೇವಿಯ ಆರಾಧನೆ, ಕಲೆ–ಸಂಸ್ಕೃತಿ ಆರಾಧನೆಯೇ ದಸರಾ ಹಾಗೆಯೇ ಮುಂದುವರೆದಿದೆ. ದೇಶದ ದೊಡ್ಡ ಆಸ್ತಿ ಸಂಸ್ಕೃತಿ. ಮೈಸೂರನ್ನು ಸುತ್ತುಹಾಕಿ ಭವ್ಯ ದೀಪಾಲಂಕಾರ ಕಣ್ತುಂಬಿಕೊಳ್ಳಬೇಕೆಂದಿದ್ದೇನೆ. 'ನಗುವು ಸಹಜ ಧರ್ಮ; ನಗಿಸುವುದು ಪರಧರ್ಮ, ನಗುವ ಕೇಳುತ ನಗುವುದತಿಶಯದ ಧರ್ಮ, ನಗುವ ನಗಿಸುವ ನಗಿಸಿ ನಗುತ ಬಾಳುವ ವರವ, ಮಿಗೆ ನೀನು ಬೇಡಿಕೊಳೊ ಮಂಕುತಿಮ್ಮ...'(ಪೂರ್ಣ ಹೇಳಿದರು) ಎಂದು ಡಿವಿಜಿ ಅವರು ಹೇಳಿರುವಂತೆ ಎಲ್ಲರೂ ನಗುನಗುತಾ ದಸರಾ ಸಂಭ್ರಮಿಸಿ ಎಂದು ಹೇಳಿದರು.

ತನ್ನ ಶಕ್ತಿ ತನಗರಿವಿರದು: ನಮ್ಮ ಕಲೆ–ಸಂಸ್ಕೃತಿಯಲ್ಲಿ ತಮಟೆ, ನಗಾರಿ, ಕೋಲಾಟ, ಕೊಳಲು ಇನ್ನಿತರ ಪರಿಕರಗಳಿವೆ. ಕೃಷ್ಣನ ಕೊಳಲು ಜನಮನ ಗೆದ್ದ ಪುರಾಣ ಪ್ರತೀತಿ ಇದೆ. ಕೊಳಲಾಗುವ ನಮ್ಮ ಚಾಮರಾಜನಗರದ ಬಿದಿರಿಗೆ ತನ್ನಿಂದ ನಾದ ಹೊರಹೊಮ್ಮುತ್ತದೆ ಎಂದು ತಿಳಿದಿರುವುದಿಲ್ಲ. ಹಾಗೆಯೇ ತನ್ನ ಚರ್ಮದಿಂದಾಗುವ ತಮಟೆ, ಡೊಳ್ಳಿನಿಂದ ಯಾವ ರೀತಿಯ ಶಬ್ದ ಬರುತ್ತದೆ ಎಂದು ಕುರಿ–ಮೇಕೆಗೆ ಗೊತ್ತಿರುವುದಿಲ್ಲ. ಹೀಗೆ ಪ್ರತಿಯೊಂದು ಅಂಶಗಳೂ ನಮ್ಮ ಸಂಸ್ಕೃತಿಯಲ್ಲಿ ಸಮ್ಮಿಳಿತವಾಗಿವೆ ಎಂದು ವಿಶ್ಲೇಷಿಸಿದರು.

ಸೈಕಲ್ ಬ್ರ್ಯಾಂಡ್ ಅಗರ್‌ಬತ್ತಿ ಸಂಸ್ಥೆಯವರು 50 ಲಕ್ಷ ರೂ. ನೆರವು ನೀಡಿದ್ದಾರೆ. ಸರ್ಕಾರದ ಪರವಾಗಿ ಅವರಿಗೆ ಅಭಿನಂದಿಸುತ್ತೇನೆ. ಅಗರ್‌ಬತ್ತಿಯಿಂದ ಸುವಾಸನೆ ನೀಡುವುದರ ಜೊತೆಗೆ ಸಂಸ್ಕೃತಿ ಪೋಷಕರಾಗಿ ಸಹಕಾರ ನೀಡಿದ್ದಾರೆ. ನಿಮ್ಮ ಮನೆಯಲ್ಲೂ ಪೂಜೆ ಮಾಡುವಾಗ ಸೈಕಲ್ ಬ್ರ್ಯಾಂಡ್ ಅಗರ್ ಬತ್ತಿ ಉಪಯೋಗಿಸಿ, ಎಲ್ಲರಿಗೂ ಒಳ್ಳೆಯದಾಗಲಿ ಎಂದು ಇದೇ ವೇಳೆ ಡಿಕೆಶಿ ಆಶಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ದಸರಾ ಮಹೋತ್ಸವದಲ್ಲಿ ಭಾಗವಹಿಸುವಂತೆ ಜನರಲ್ಲಿ ಮನವಿ ಮಾಡಿದರು. ಶಾಸಕರಾದ ಡಿ.ರವಿಶಂಕರ್, ಎ.ಆರ್.ಕೃಷ್ಣಮೂರ್ತಿ, ರಮೇಶ್‌ಬಾಬು ಬಂಡಿಸಿದ್ದೇಗೌಡ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಐಜಿಪಿ ಡಾ.ಬೋರಲಿಂಗಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ.ಧರಣೀದೇವಿ ಮಾಲಗತ್ತಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಮತ್ತಿತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಅರ್ಜಿ ಹಾಕದೆ ಗುರುತಿಸಿ, ಗೌರವಿಸಿದ್ದಾರೆ...

ನಾನೆಂದೂ ಯಾವ ಪ್ರಶಸ್ತಿಗೂ ಅರ್ಜಿ ಹಾಕಿದವನಲ್ಲ. ನನ್ನ ಶಹನಾಯ್ ವಾದನವನ್ನು ಕೇಳಿ 2013ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅರ್ಜಿ ಹಾಕದೆ ರಾಜ್ಯೋತ್ಸವ ಪ್ರಶಸ್ತಿ ನೀಡಿ, ಗೌರವಿಸಿದರು. ಈಗ ಗುರು ಪುಟ್ಟರಾಜ ಗವಾಯಿ ಅವರಿಗೆ ಮೊದಲ ಬಾರಿ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ನೀಡಿದ್ದಾರೆ. ಸಾಧನೆ ಎಷ್ಟೇ ಇದ್ದರೂ ನಮ್ಮಂತಹವರನ್ನು ಯಾರು ಗುರುತಿಸುತ್ತಾರೆ. ಆದರೆ ರಾಜ್ಯದ ಘನ ಸರ್ಕಾರ ಗೌರವಿಸಿದ್ದರಿಂದ ತುಂಬಾ ಸಂತೋಷವಾಗಿದೆ. ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಸಚಿವರುಗಳು, ಅಧಿಕಾರಿಗಳು ಸೇರಿದಂತೆ ಇದಕ್ಕೆ ಕಾರಣಕರ್ತರಾದ ಎಲ್ಲರಿಗೂ ಧನ್ಯವಾದಗಳು ಎಂದು 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಪುರಸ್ಕೃತ ಪಂಡಿತ್ ಬಸವರಾಜ ಭಜಂತ್ರಿ ಅವರು ನುಡಿದರು.

ವಿವಿಧ ವೇದಿಕೆಗಳಲ್ಲಿ ವೈವಿಧ್ಯಮಯ ಕಾರ್ಯಕ್ರಮ

ಅರಮನೆ ವೇದಿಕೆಯಲ್ಲಿ ಮೊದಲ ದಿನ ಮಹದೇವಪ್ಪ, ಮಲ್ಲೇಶಯ್ಯ ತಂಡದಿಂದ ನಂದಿಧ್ವಜ, ವೈ.ಎಂ.ಸಿದ್ಧಾರ್ಥ್ ತಂಡದಿಂದ ವೀರಗಾಸೆ, ಗುರುರಾಜ್ ಮತ್ತು ತಂಡದವರಿಂದ ಮಂಗಳವಾದ್ಯ, ಎಂ.ಸಿದ್ದರಾಜು ತಂಡದಿಂದ ನಾಲ್ವಡಿ ಗೀತೆಗಳ ಪ್ರಸ್ತುತಿ, ಅಮ್ಮ ರಾಮಚಂದ್ರ ಹಾಗೂ ಬೆಂಗಳೂರಿನ ಪರಮಪದ ತಂಡದಿಂದ ನಾಡಗೀತೆ ಮತ್ತು ಆಸ್ಥಾನ ಗೀತೆ ಪ್ರಸ್ತುತಿ. ಬೆಂಗಳೂರಿನ ನಾಟ್ಯ ಲಕ್ಷಣ ಅವರಿಂದ ನಮಸ್ತೆ ಇಂಡಿಯಾ ನೃತ್ಯ ರೂಪಕ ಮತ್ತು ಅನುರಾಧ ಭಟ್–ಸುಚೇತನ ರಂಗಸ್ವಾಮಿ ತಂಡದಿಂದ ಭಕ್ತಿಭಾವಗಾನ ಸುಧೆ ಕಾರ್ಯಕ್ರಮಗಳು ನಡೆದವು. ಹಾಗೆಯೇ ಜಗನ್ಮೋಹನ ಅರಮನೆ, ಕಲಾಮಂದಿರ, ಕಿರುರಂಗಮಂದಿರ, ಚಿಕ್ಕಗಡಿಯಾರ, ಕುವೆಂಪುನಗರ ಗಾನಭಾರತಿ, ನಾದಬ್ರಹ್ಮ ಸಂಗೀತಸಭಾ, ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರ ಹಾಗೂ ನಟನ ರಂಗಮಂದಿರದಲ್ಲಿ ಸಂಗೀತ, ಜಾನಪದ ಗೀತೆ ಹಾಗೂ ನೃತ್ಯ, ಪುರಭವನ ವೇದಿಕೆಯಲ್ಲಿ ಪೌರಾಣಿಕ ನಾಟಕಗಳು, ಹೀಗೆ ವಿವಿಧ ವೇದಿಕೆಗಳಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಲಾಸಕ್ತರು ಆಸ್ವಾದಿಸಿದರು.

ಉದ್ಯಮಿಗೆ 50 ಕೋಟಿ ರೂ.ಗೆ ಬೇಡಿಕೆ; ಬೆದರಿಕೆ ಆರೋಪ

ಕೇಂದ್ರ ಸಚಿವ ಕುಮಾರಸ್ವಾಮಿ ವಿರುದ್ಧ ಎಫ್‌ಐಆರ್ ದಾಖಲು



ಬೆಂಗಳೂರು: ಕೇಂದ್ರ ಭಾರೀ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್. ಡಿ. ಕುಮಾರಸ್ವಾಮಿ ಅವರಿಗೆ ಮತ್ತೊಂದು ಸಂಕಷ್ಟ ಎದುರಾಗಿದೆ. 50 ಕೋಟಿ ಬೇಡಿಕೆ ಹಾಗೂ ಜೀವ ಬೆದರಿಕೆ ಆರೋಪದಲ್ಲಿ ಅವರ ವಿರುದ್ಧ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಉದ್ಯಮಿ ವಿಜಯ್ ತಾತ ದಾಖಲಿಸಿದ್ದ ದೂರಿನ ಆಧಾರದ ಮೇಲೆ ಎಫ್ ಐಆರ್ ದಾಖಲಿಸಲಾಗಿದೆ. ವ್ಯವಹಾರಿಕವಾಗಿ ತಾವು ಮುನ್ನಡೆ ಸಾಧಿಸಿದ್ದು, ತಮಗೆ ಕೇಂದ್ರ ಸಚಿವರು ಬೆದರಿಕೆ ಹಾಕಿದ್ದಾರೆ. ತಮಗೆ 50 ಕೋಟಿ ರೂ. ನೀಡಬೇಕೆಂದು ಒತ್ತಡ ಹಾಕುತ್ತಿದ್ದಾರೆ. ಅದೇ ಹಣಕ್ಕಾಗಿ ಜೀವ ಬೆದರಿಕೆಯನ್ನೂ ಹಾಕಲಾಗಿದೆ ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.ಇದೇ ದೂರಿನಲ್ಲಿ ವಿಧಾನ ಪರಿಷತ್ ಸದಸ್ಯ ರಮೇಶ್ ಗೌಡ ಅವರ ಹೆಸರನ್ನೂ ಉಲ್ಲೇಖಿಸಿರುವ ಉದ್ಯಮಿ ವಿಜಯ್ ತಾತಾ, ರಮೇಶ್‌ಗೌಡ ಕೂಡ ತಮ್ಮಿಂದ ಹಣ ಕೀಳಲು ಪ್ರಯತ್ನಿಸಿದ್ದಾರೆ. ನಿಖಿಲ್ ಚನ್ನಪಟ್ಟಣ ಉಪ ಚುನಾವಣೆಗೆ ನಿಲ್ಲುತ್ತಿದ್ದು, ಚುನಾವಣೆಗೆ 50 ಕೋಟಿ ರೂ. ಹಣ ನೀಡುವಂತೆ ನನ್ನನ್ನು ಕೇಳಿದ್ದರು. ಎಚ್.ಡಿ. ಕುಮಾರ ಸ್ವಾಮಿ ಕೂಡ ದೂರವಾಣಿ ಕರೆ ಮಾಡಿದ್ದರು. ಹಣ ಕೊಡಲಾಗದು ಎಂದಿದ್ದಕ್ಕೆ ಕುಮಾರಸ್ವಾಮಿ ಕೋಪಿಸಿಕೊಂಡಿದ್ದರು ಎಂದು ದೂರಿನಲ್ಲಿ ತಿಳಿಸಿದ್ದಾರೆ. ಇಬ್ಬರೂ ಜನಪ್ರತಿನಿಧಿಗಳಿಂದ ತಮ್ಮನ್ನು ಹಾಗೂ ತಮ್ಮ ಕುಟುಂಬವನ್ನು ಕಾಪಾಡಬೇಕು. ತಮಗೆ ರಕ್ಷಣೆ ಒದಗಿಸಬೇಕು ಎಂದು ಅವರು ದೂರಿನಲ್ಲಿ ಪೊಲೀಸರಲ್ಲಿ ಮನವಿ ಮಾಡಿರುವುದಾಗಿ ವರದಿಯಾಗಿತ್ತು.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ಮೈಸೂರು, ಪ್ರವಾಸೋದ್ಯಮ ಇಲಾಖೆ

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ ಸಂಖ್ಯೆ:05/2024–25, ದಿ:27.09.2024

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ಮೈಸೂರು ಇವರಿಂದ 01 ಈ ಕೆಳಕಂಡ ಸೇವಾ ಟೆಂಡರಗೆ KW-1 ರ ನಿಬಂಧನೆ ಮತ್ತು ಷರತ್ತುಗಳನ್ವಯ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಲ್ಪಾವಧಿ ಟೆಂಡರ್‌ರನ್ನು (https://kppp.karnataka.gov.in) ಆಹ್ವಾನಿಸಲಾಗಿದ್ದು, ಟೆಂಡರ್ ಅನ್ನು ಕೆಳಕಂಡ ದಿನಾಂಕದೊಳಗೆ ಸಲ್ಲಿಸಬಹುದಾಗಿದೆ. ಸೇವಾ ಟೆಂಡರ್‌ಗೆ ಇಟ್ಟ ಗರಿಷ್ಟ ಮೊತ್ತ **ರೂ.203544.44** ಮತ್ತು ಇ.ಎಂ.ಡಿ ಮೊತ್ತ ರೂ.4071 ಲಕ್ಷಗಳಾಗಿರುತ್ತದೆ. ಸೇವಾ ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಕ್ರ ಸಂ	ಟೆಂಡರ್ ಸಂಖ್ಯೆ	ಹೆಸರು	ಟೆಂಡರ್ ಮೊತ್ತ ರೂ.ಗಳಲ್ಲಿ	ಇ.ಎಂ.ಡಿ. ಮೊತ್ತ ರೂ.ಗಳಲ್ಲಿ	ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ
1.	KEA/2024-25/ SE0020	Providing Man power service (Security Marshals and supervisor) to Karnataka Exhibition Authority, Mysuru.	203544.44	4071	05.10.2024 15:00:00

ಸಹಿ/–ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಸಿವಿಲ್)
ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಮೈಸೂರು.

DIPR/DDMYS-634/KSMCA-433/2024-25

ಶಿಕ್ಷಣದ ಹಕ್ಕು
ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ–ಕರ್ನಾಟಕ, ಶಾ.ಶಿ.ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.

Phone No: 0821-2496686, E-mail ID: egovmysore@gmail.com

ಸಂಖ್ಯೆ:ಸಶಿಅ/ಸಿ2/ಸಿ4/ಕೆ.ಜಿ.ಬಿ.ವಿ ಆಹಾರ/ಟೆಂಡರ್/1ರಿಂದ4/2024–25, ದಿನಾಂಕ:04/10/2024

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್ ಪ್ರಕಟಣೆ–2ನೇ ಕರೆ

2024–25ನೇ ಸಾಲಿನ ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದಡಿ ಮೈಸೂರು ಜಿಲ್ಲೆಯಲ್ಲಿನ ತಾಲ್ಲೂಕುಗಳಲ್ಲಿ ಹೆಣ್ಣು ಮಕ್ಕಳಿಗಾಗಿ ನಡೆಸಲ್ಪಡುವ ವಸತಿ ಶಾಲೆಗಳಿಗೆ ತಲಾ 100 ಮಕ್ಕಳಿಗೆ ಊಟೋಪಹಾರ ಒದಗಿಸುವ ಸಂಬಂಧ ನೊಂದಾಯಿತ ಅರ್ಹ ಏಜೆನ್ಸಿ/ ಸಂಸ್ಥೆಗಳಿಂದ ದ್ವಿಲಕೋಟೆ ಪದ್ಧತಿಯಡಿ ಅಲ್ಪಾವಧಿ ಇ–ಪ್ರೋಕ್ಯೂರೆಂಟ್ ಮೂಲಕ ಪ್ರತಿ ವಿಷಯಕ್ಕೂ ಪ್ರತ್ಯೇಕವಾಗಿ ಅರ್ಜಿ ಆಹ್ವಾನಿಸಲಾಗಿದೆ.

1. Date of Publish & commencement of Tender in E-Procurement Date : 04/10/2024
2. Last date & time for receipt of Tender Date : 14/10/2024, 04.00 PM
3. Time and Date of Opening of Technical Bid Date : 15/10/2024, 04.30PM

ಕ್ರ.ಸಂ	ಟೆಂಡರ್ ಮೂಲಕ ಕರೆಯಬೇಕಾಗಿರುವ ವಿವರ	ಅಂದಾಜು ಟೆಂಡರ್ ಮೊಬಲಗು (ಲಕ್ಷಗಳಲ್ಲಿ)	ಇಎಂಡಿ ಮೊಬಲಗು (ರೂ.ಗಳಲ್ಲಿ)
1.	ಕೆ.ಜಿ.ಬಿ.ವಿ ಟೈಪ್ –4 ಅರ್.ಎಂ.ಎಸ್.ಎ ವರಕೂಡು ಮೈಸೂರು ಗ್ರಾ, ಹಳೇ ಸೋಸಲೆ, ತಿ.ನರಸೀಪುರ ತಾ, ಎ.ವಿ.ಎಸ್ ದೇಬೂರು. ನಂಜನಗೂಡು ತಾ, ಹಳೇ ಹುಣಸೂರು, ಹುಣಸೂರು ತಾ, ಕಾಳೇನಹಳ್ಳಿ, ಕೆ.ಆರ್.ನಗರ ತಾ, ಹಾಗೂ ಹೆಚ್.ಡಿ.ಕೋಟೆ ಕಾಲೇಜು ಆವರಣ, ಹೆಚ್.ಡಿ.ಕೋಟೆ ತಾ, ವಸತಿ ಶಾಲೆಗಳಿಗೆ ಆಹಾರ ಪೂರೈಕೆಗಾಗಿ	122.40	2,44,800.00
2.	ಕೆ.ಕೆ.ಜಿ.ಬಿ.ವಿ ಬಾಚಹಳ್ಳಿ ರಸ್ತೆ, ಚಿಕ್ಕ ಹುಣಸೂರು ಹುಣಸೂರು ತಾ, ಹಾಗೂ ಹೆಚ್.ಡಿ.ಕೋಟೆ ಕಾಲೇಜು ಆವರಣ, ಹೆಚ್.ಡಿ.ಕೋಟೆ ತಾ ವಸತಿ ಶಾಲೆಗಳಿಗೆ ಆಹಾರ ಪೂರೈಕೆಗಾಗಿ	27.50	55,000.00

ಇ–ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತವುಳ್ಳ ಟೆಂಡರ್‌ದಾರರು www.kppp.karnataka.gov.in ರಲ್ಲಿನ **Sarva Shiksha Abhiyan portal** (DPI ಜಿಲ್ಲಾ ಪಂಚಾಯತ್ ಲಾಗೀನ್) ನಲ್ಲಿ ಟೆಂಡರ್ ದಿನಾಂಕ: 04/10/2024ರಲ್ಲಿನ ಟೆಂಡರ್ ಸಂಖ್ಯೆ: ಸಶಿಅ/ಸಿ2/ಸಿ4/ಕೆ.ಜಿ.ಬಿ.ವಿ ಆಹಾರ/ಟೆಂಡರ್/1ರಿಂದ4/2024–25, ರವರೆಗಿನ ಡಾಕ್ಯುಮೆಂಟ್‌ನ್ನು ಪ್ರತ್ಯೇಕವಾಗಿ ಡೌನ್ ಲೋಡ್ ಮಾಡಿಕೊಂಡು ನಿಗದಿತ ಸಮಯದಲ್ಲಿ ಅರ್ಜಿಸಲ್ಲಿಸಲು ಹೆಚ್ಚಿನ ವಿವರಗಳಿಗೆ ಕಛೇರಿ ದೂರವಾಣಿ ಸಂಖ್ಯೆ: 0821– 2496686/8722908873 ನ್ನು ಸಂಪರ್ಕಿಸಲು ಸೂಚಿಸಿದೆ.

ಸಹಿ/– ಎಸ್.ಟಿ.ಜವರೇಗೌಡ,
ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ
ಸಮಗ್ರ ಶಿಕ್ಷಣ ಕರ್ನಾಟಕ, ಶಾ.ಶಿ. ಇಲಾಖೆ, ಮೈಸೂರು ಜಿಲ್ಲೆ, ಮೈಸೂರು

ಪುರಸಭಾ ಕಾರ್ಯಾಲಯ, ಸಕಲೇಶಪುರ ಹಾಸನ ಜಿಲ್ಲೆ–573134

TOWN MUNICIPAL COUNCIL, SAKLESHPUR, HASSAN DISTRICT

ದೂರವಾಣಿ ಸಂಖ್ಯೆ: 08173–244042 **email: itstaff_ulb_sakleshpur@yahoo.com**
Website: www.sakaleshpurtown.gov.in

ನಂ/ಮುನಿಸಿ/ಜೆ.ಇ/ಪಿಆರ್/79/2024–25 ದಿನಾಂಕ 30–09–2024

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸಕಲೇಶಪುರ ಪುರಸಭೆಯಿಂದ ಕೆ.ಟಿ.ಪಿ.ಪಿ ಕಾಯ್ದೆ 2000ರ ಪ್ರಕಾರ ಕೆ.ಜಿ–1 ನಿಯಮದಂತೆ ಇ–ಪೋರ್ಟಲ್ ಮೂಲಕ ಐಂಟವಾರು ಟೆಂಡರ್ ಕರೆಯಲಾಗಿದ್ದು ಆಸಕ್ತಿಯುಳ್ಳ ಗುತ್ತಿಗೆದಾರರು http://Kppp.karnataka.gov.in ನಿಂದ ಟೆಂಡರ್ ಷರತ್ತು ಇಎಂಡಿ ಹಾಗೂ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ಅನ್ನು ಸಲ್ಲಿಸುವ ಮತ್ತು ತೆರೆಯುವ ದಿನಾಂಕವನ್ನು ಇ–ಪೋರ್ಟಲ್‌ನಲ್ಲಿ ತಿಳಿಸಲಾಗಿದೆ. ಟೆಂಡರ್ ನಿಯಮಾವಳಿಗಳ ಕುರಿತು ಹೆಚ್ಚಿನ ವಿವರಕ್ಕಾಗಿ ಸಕಲೇಶಪುರ ಪುರಸಭೆಯ ತಾಂತ್ರಿಕ ಶಾಖೆಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಕ್ರ.ಸಂ.ಇಂಡೆಂಟ್ ನಂ:1)DMA/2024-25/IND3624 ಅಂದಾಜು ಮೊತ್ತ (ಲಕ್ಷಗಳಲ್ಲಿ:10.00 2)DMA/2024-25/IND3625 ಅಂದಾಜು ಮೊತ್ತ (ಲಕ್ಷಗಳಲ್ಲಿ:12.00 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 21–10–2024 ಸಂಜೆ 5.30 ಗಂಟೆಗೆ ಸೂಚನೆ:– ಕಾರಣಾಂತರಗಳಿಂದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ. ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು http://Kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–ಅಧ್ಯಕ್ಷರು, ಪುರಸಭೆ, ಸಕಲೇಶಪುರ
ಸಹಿ/–ಉಪಾಧ್ಯಕ್ಷರು, ಪುರಸಭೆ, ಸಕಲೇಶಪುರ
ಸಹಿ/–ಮುಖ್ಯಾಧಿಕಾರಿ, ಪುರಸಭೆ, ಸಕಲೇಶಪುರ

ವಾಸಾಸಂಇ/ಹಿಸನಿ/ಹಾಸನ/534/ಕೆಎಸ್‌ಎಂಸಿಎ/2024–25